– ಉಳ್ಳಾಲ ಮಂಜೇಶ್ವರ, ಹೊಸದುರ್ಗವೇ ಮೊದ ಲಾದ ಒಂಬಳಿದ ಕಡೆಗಳಲ್ಲಿ ಸಂಘದ ಅಬ್ಬೇಪಾ— ತಕಗಳ ಜೋಧನನಡಾಯಿವುದು ಸಂಘಕ್ಕೆ ತೀರಾ ಅವಾಧ್ಯ ವಲ್ಲವಾದ್ದರಿಂ, ಹಿತಚಿಂತಕರೆನೇಕರ ನಿಸ್ವಾರ್ಥ ಸಹ ಕಾರವು ಲಭಿಸುವ ತನಕ ಕಷ್ಟಸಾಧ್ಯವಾದ, ತನ್ನ ಸದು ದ್ದೇಶವನ್ನು ಸಾಧ್ಯವಿದ್ದಂತೆ ಸಾಧಿಸುವುದೇ ಸಂಘದ ಕರ್ತವ್ಯವಲ್ಲದೆ ಸ್ವಗತ ತ್ಯಾಗಕ್ಕಾಗಿ ಕಾಯುವುದಲ್ಲ. ಆದುಂತಾಗುವುದಿದ್ದರೆ ಮತ್ತೂ ಅವಸ್ಥೆಯ ಇಲ್ಲುಂಟಾಗಿದ್ದರೆ ಅವನ್ನೇ ಮುನ್ನೆಡೆಯುತ್ತಾ ಕಾರಿದರೆ ಸಂಘವು ತನ್ನ ಕಾರ್ಯವನ್ನು ಕೈಲಾದಮ್ಟಿಗೆ ನೆರವೇರಿಸುತ್ತಲೇ ಇರ ಬಿದ್ದಾಗ ಕಿಚೀಲನಂಥವರು ಇರಬಹುದು" ಎಂಬ ದೇನೋ ಸಾಲ್ತು ಆದರೆ ಈ ಕುಚೀಲನಂಥವರಾದರೂ ಈ ಕುಚೀಲನ ಹಾಗೆ ಶ್ರೀಕೃಷ್ಣನ ಸನ್ನಿಧಿಗೆ ಹೋಗದೆ, ತನ್ನ ಗರಿಸಲ್ಲೇ ಆತನ ಬರಿಮನ್ನು ತಂದಿರುವಂತೆ ಪರೆ ಹೇಗೆ? ಅಂದಮೇಲೆ ಹಿತಚಿಂತಕರಂಥವರು ಗುಪ್ತ ನಾಮಗಳಿಂದ ಪತ್ರಿಕೆಗಳಲ್ಲಿ ಬಾಣ ಕೊಡವುದಕ್ಕೆ ಬದಲು, ಸೇವಾಸಂಘದ ಬಾಲಕರೊಂದಿಗೆ ಸಹಕರಿಸಿ, "ಸರ್ವಜನೋಯೇ ಮನುಷ್ಯನ ಉತ್ಕೃಷ್ಟ ಕರ್ತವ್ಯ ಗಳಲ್ಲಿ ಒಂದು" ಎಂಬ ಮಾತಿನ ಮಂತಕ್ಕೆ ಪಾತ್ರರಾ ಗಬಹುದಾಗಿತ್ತಲ್ಲವೇ?

ಕಾರ್ಕಳ ಸಂಘದೊಂದಿಗೆ ಕೂಡಿ ಇದೇ ಜಿಲ್ಲೆಯ ಕೆಲವು ಕಡೆಗಳು ಕಾರ್ಕಳದ ಏಳಿಗೆಯನ್ನು ಮಾತ್ರ ಬಯಸುವೆನೆಂದು ಹೇಳಿದಮ್ತಾಯ್ತೆ? ಮಂಗಳೂರಿನ ಸಂಘಸ್ಥಾಪನೆಯಾಗಿದ್ದರೆ ಅದನ್ನೇ ಹೊಂ ಸಂಘವಾಗಿ ಮಾಡಬೇಕೆಂಬುದರ ಗುಡ್ಡವೇ? ಜಿಲ್ಲೆಯ ಬೇರೆ ಕಡೆಯ ಜನರೂ ಈ ಜಿಲ್ಲಾ ಸಂಘದೊಂದಿಗೆ ಕೂಡಿ ಕೊಂಡು ಮಂಗಳೂರಿನ ಮೇಲ್ಪಗೆ ಮಾತ್ರ ಮನಸ್ಸಿಡ ಬೇಕೆಂದೆ? ಇನ್ಯಾವುದೂ ಹಿತಚಿಂತಕರು ಈ ವಿಧದ ಸಂಕುಚಿತ ಭಾವನೆಗಳಿಗೆ ತಮ್ಮ ಮನಸ್ಸಿನಲ್ಲಿಡೆಗೊಡದೆ ಜಿಲ್ಲಾ ಸಂಘ ಏಾಗೂ ಸ್ಥಳೀಯ (ತಾಲೂಕು?) ಸಂಘಗಳಲ್ಲಿರುವ ಪರಸ್ಪರ ಸಂಬಂಧವನ್ನು ಮಜಗಂಡು ಸಮಾಜಸೇವೆಯನ್ನು ಸಫಲವಾಗುವಂತೆ ಸಿಸುವರೇ?

ಯಾವುದೊಂದು ಜಿಲ್ಲಾ ಸಂಘವು ಆ ಪ್ರಾಂತ್ಯದ ಪ್ರಧಾನ ಸಂಸ್ಥೆಯಾಗಿದ್ದು—ಆ ಸಗಡ್ಡಿನಲ್ಲಿರಬೇಕಾದ ಸ್ಥಳೀಯ ಸಂಘಗಳಿಂದ—ತನ್ನ ಅವೇಕ್ಷೆ ಮೇರೆಗೆ ಸದು ದ್ದೇಶ ಸಾಧನೆ ಕಾರ್ಯಗಳನ್ನು ಮಾಡಿಸಿಕೊಳ್ಳುವುದು ವಾಡಿಕೆಯಲ್ಲಿರುವ ವಿಷಯ. ಪ್ರಸ್ತುತದ ಈ ಜಿಲ್ಲಾ ಸಂಘವನ್ನು ಎರಡು ವಿಧವಾಗಿ ರಚಿಸಬಹುದೆಂದು ನನಗೆ ತೋರುವುದು (೧) ಜಿಲ್ಲೆಯ ಮುಂದಾಳುಗಳು ತಮಗೆ ಯೋಗ್ಯವೆನಿಸಿ ಕಾಣುವ ಕೆಳದಲ್ಲಿ ಸಭೆಸೇರಿ ಜಿಲ್ಲಾ ಸಂಘವನ್ನು ಸ್ಥಾಪಿಸುವುದು, ಆ ಮೇಲೆ ತನ್ನ ಕಾರ್ಯಗಳಂಗವನ್ನು ವಿಸ್ತರಿಸುವುದಕ್ಕಾಗಿ ಅನುಕೂಲರು ವಷ್ಟು ಸ್ಥಳೀಯ ಸಂಘಗಳನ್ನು ತನ್ನ ಶಾಖೆಗಳಾಗಿ ಸ್ಥಾಪಿಸುವುದು. (೨) ಅಥವಾ ಬೇರೆ ಬೇರೆ ಭಾಗದ ಜನರು ತಮ್ಮ ತಮ್ಮ ಊರಿನಲ್ಲಿ ಸಮಾಜ ಧ್ಯೇಯದ ಸ್ಥಳೀಯ ಸಂಘಗಳನ್ನೆಭ್ಯಾಸಿಸುವುದು; ಆ ಬಳಿಕ ಏಂದೇ ಜಿಲ್ಲೆಯೊಳಗಿನಕಕ್ಕ ಇಂತಹ ಹಲವು ಸಂಘ್ಯೆ ಗಳಲ್ಲಿ ಏಕ್ಯತೆಯನ್ನು ಬಲಪಡಿಸುವುದಕ್ಕಾಗಿ, ಪ್ರತಿ ಯೊಂದರಿಂದ ನಿಶ್ಚಿತ ಸಂಖ್ಯೆಯಷ್ಟು ಪ್ರತಿನಿಧಿಗಳನ್ನು ಆನುಪಾಯಿಸಿ, ಹಾಗೆ ಆನುಪಾಯಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಸಭೆಯೆನ್ನೇ ಜಿಲ್ಲಾ ಸಂಘ ಅಥವಾ ಪ್ರಧಾನ ಸಂಸ್ಥೆಯಾಗಿ ದುಡಿಯುವುದು. ಪದ್ಮಶಾಲಿ ಸಮಾಜದ ಸದ್ಯದ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಜಿಲ್ಲಾ ಸಂಘದ ರಚನೆಗಾಗಿ ಮೇಲೆ ಹೇಳಿದ ಎರಡನೆಯ ವಿಧಾನವನ್ನೆಸು ಸಂಸುವುದೇ ಯೋಗ್ಯವೆಂದು ಸ್ಪಷ್ಟವಾಗುವುದು ವಿಶೇಷ ವೆಂದರೆ, ಜಿಲ್ಲಾ ಸಂಘದ ಆವಶ್ಯಕತೆಯು ಜಿಲ್ಲೆಯ ಮುಖಂಡರಿಗೆ ಹೊಳೆಯುವ ಮೊದಲೇ ಕಾರ್ಕಳದ ಪದ್ಮಶಾಲಿ ಸಮಾಜ ಸೇವಾಸಂಘದವರಿಗೆ ಕಾರ್ಕಳ ಪದ್ಮಶಾಲಿ ಸಮಾಜ ಸೇವಾಸಂಘವನ್ನು ಸ್ಥಾಪಿಸಿ, ಸಮಾಜೋದ್ಧಾರ ಕಾರ್ಯ ವನ್ನು ಕೈಕೊಂಡಿರುವರು. ಕಾರ್ಕಳದ ಸಮಾಜ ಬಂಧು ಗಳ ಮೇಲ್ಪಗೆಗಾಗಿ ಮಾತ್ರ ಅವರು ಹೋಗಾಯುವುದಲ್ಲದೆ, ಇತರ ಕಡೆಗಳಲ್ಲೂ ಈ ತೆರದ ಸೃಜನೋದ್ಧಾರಕಾರ್ಯವನ್ನು ನಡೆಯಬೇಕೆಂದು ಬಯಸುವರೆಂಬುದಕ್ಕೆ—ಅಲ್ಪವು ಬೇರೆ ಬೇರೆ ಕಡೆಗಳನ್ನು ಸಂದರ್ಶಿಸಿ ಅಲ್ಲಿನವರೊಂದಿಗೆ ಮಾತು ಕತೆ ನಡೆಸಿದುದೇ ನಿದರ್ಶನವು ಹೀಗಿರುತ್ತ, ಕಾರ್ಕಳ ದವರು ತಳೆದರಿ ಹಾತಿದರೆಂಬ ಕಾರಣಕ್ಕಾಗಿ ಶಿಷ್ಟಜನ ರಕ್ಷಣೆಯ ಸರ್ವ ಭಾರವನ್ನೂ ಅವರ ಮೇಲಿರಿಸುವುದು ಹಿತಚಿಂತಕರಿಗೆ ಸಲ್ಲುವುದೇ? ಜಿಲ್ಲೆಯ ಬೇರೆ ಬೇರೆ ಕಡೆಯ ಜನರನ್ನು ಹಿತಚಿಂತಕರು ಹಿತೋಕ್ತಿ—ಹಿತೋಪ ದೇಶಗಳಿಂದ ಪ್ರೋತ್ಸಾಹಿಸಿ, ಸ್ಥಳೀಯ ಸಂಘಗಳ ಮತ್ತು ತಮ್ಮೊಳಕ ಜಿಲ್ಲಾ ಸಂಘವನ್ನು ಒಕ್ಕರಿಂದ ಸ್ಥಾಪಿಸಿದ ಪುಣ್ಯಕ್ಕೆ ಭಾಗಿಗಳಾಗಬಾರದೇ?

"ಮಕರಂದ" ನಮ್ಮ ಕಣ್ಣಮುಂದೆ ಮಿಣ್ಣು ಪಾಲಾದುದನ್ನು ಕಂಡು ಪಾಪಾಣಕೃದಯದಿಂದಲಾದರೂ ಕರ್ನೀರು ಹರಿಯಬಹುದು. ಆದರೆ ಭ್ರೀರೇ ಕಣ್ಣೀರು ಸುರಿದ ಮಾತ್ರಕ್ಕೆ ಕಾರ್ಯಸಾಧನೆಯಾಗುವುದೇ? ಅಥವಾ ಇಮಕ್ಕಾಗಿ ಮಜೆಗ

ವಿಷಯಸೂಚಿಕೆ.

ಸಂಪಾದಕೀಯಗಳು . . . ೨
ಅಪ್ಪಣೆಕಟ್ಟಿನ ನಿರ್ಮಾಣಕಾರ್ಯವಾಗುವುದೆಂತು? ೪
ಮಹಾರಾಷ್ಟ್ರ ದಕ್ಷಿಣದ ಗುಂಡಿಗಿಂತಲೂ ಗತುತರ . . ನಾಡುಮ . ೫
ವಿವಿಧ ಸಮಾಚಾರಗಳು . . ೧೨
ಕಗ್ಗಲೀಪು
ಚೀನದಲ್ಲೇನು? . ೧೦
ಸ್ಫುಟವಿಚಾರಗಳು ,,
ಮಂಗಳೂರು, ತಾಲೂಕುಗಳಿಂದ ೧೧
ವರ್ತಮಾನ ಸಂಗ್ರಹ
ಜಾಹಿರಾತು ವೈಭವ . . . ೯
ಸಂಪಾದಕರ ಟಿಪ್ಪಾಲುಪೆಟ್ಟಿಗೆ ೧೫
ಕರ್ನಾಟಕ ರಂಗಭೂಮಿಯಲ್ಲಾಗತ್ಕ ಸುಧಾರ ಣೆಗಳು ೧೪

ಸ್ವದೇಶಾಭಿಮಾನಿ.

ಶ ಜನೇ ಶುಕ್ರವಾರ ಜೂನ್ ೧೯೧೩

ಚೀನದಲ್ಲೇನು?

'ಚೀನಾ' ಎಂದೊಡನೆ, ಆತಿ ವಿಸ್ತಾರವಾದ ಒಂದು ರಾಜ್ಯ, ಅದೆಲ್ಲವೂ ದರೋಡೆಖೋರರ ಕಾದಾಳಿಗಳ, ಕ್ಷಾಮಡಾಮರಗಳ, ಪುರಾತನ ಸಂಪ್ರದಾಯವಾದಗಳ, ಅತಿ ಅನಾಗರಿಕತೆಯ ಬೀಡೆಂದೇ ನಮ್ಮಲ್ಲಿ ಭಾವಿಸುವವರು ಹೆಚ್ಚೆಂದೇ ಹೇಳಬಹುದು ಇವೆಲ್ಲವೂ ಇಂತಹ ಕರ್ಕಶತೆಗೆ ಒಳಗಾಗಿದೆಯೆಂದು ಒಂದು ಕೈಯಿಂದ ಸಾಧುತ್ತ, ಮತ್ತೊಂದು ಕೈಯಿಂದ ಅಲ್ಲಿನದೆಲ್ಲವನ್ನೂ ಸ್ವಾಧೀನವಡೆಯಲಿಚ್ಛಿಸುವ ಸ್ವಾರ್ಥಿಗಳ ವಾದವೇ, ನ್ಯಾಯವೇ, ಹೊರತು ಬೇರೇನೂ ಅಲ್ಲ ಚೀನಿಯರು ಎನ್ನುವಾಗಲೆ ಮಹಾ ರಾಷ್ಟ್ರಗಳು ಅವರನ್ನು ತಾವೇ ನಡೆಯಿಸಿಕೊಂಡು ಹೋಗುವ ಕಾರುಣ್ಯದಿಂದ ಹಾಗೆ ಉಚ್ಚರಿಸುತ್ತಿದ್ದರೆಂದೇ ಕರುಣಾಹಾಸ್ಯವಿಶ್ರಿತ ಧ್ವನಿಯಿಂದ ಎನ್ನುವುದೂ ಇದೆ ಹೀಗಿರುವುದರಿಂದ, ಇಂತಹ ಪೌರ್ವಾತ್ಯ ರಾಷ್ಟ್ರವು ಸುಧಾರಣೆ ಹೊಂದಿದಲ್ಲಿ, ಜೋಗ್ಯ ಸರಕಾರ ಕ್ರಮಕ್ಕೆ ಒಳಪಡುವುದಾಗಲಿ ಅಸಂಭವನೀಯವೆಂದೇ ಇತರರು ನಂಬುವ ಹಾಗೆ ಪರಿಣಾಮವುಂಟಾಗಿದೆ

ಆದರೆ, ಹಿಮೆ ಚೀನಾ ರಾಷ್ಟ್ರವು ಈ ರೀತಿಯಾಗಿದ್ದಿಲ್ಲ,ಇದ್ದಿದ್ದರೂ ಇಂದಿಗೆಹಾಗೆ ಇಲ್ಲವೇ ಇಲ್ಲ ಎನ್ನುವಂತಿದೆ ಮೆಂಚೂರಿಯಾದವನ್ನು ದೊಡ್ಡದೊಂದು ಅಂಶವನ್ನು ಈ ರಾಷ್ಟ್ರದಿಂದ ಕತ್ತರಿಸಿ ಬಿಸುಡಿದ ಜಾವಾನು ಅದನ್ನು ತನ್ನ ಪುಟ್ಟ ಕಾಸಿನಂತೆ ನಡೆಸಿ ಬಂದರೂ, ರಾಷ್ಟ್ರೀಯರು ಚೀನದಲ್ಲಿ ಅಧಿಕಾರತನವನ್ನು ನಿರ್ವಹಿಸಿದ ದಿನದಿಂದ ಹಲವು ದಿಕ್ಕುಗಳಲ್ಲೂ ಅದು ವಿಶೇಷವಾದ ಅಭಿವೃದ್ಧಿಯನ್ನು ಹೊಂದುತ್ತಲೆ ಬಂದಿದೆ ಅಲ್ಲಿನ ಪತ್ರಿಕೆಗಳನ್ನು ನೋಡಿದಿಮೆ ಜನರ ಮಾನಸಿಕ ಬೆಳವಣಿಗೆಯು ಅಳತೆ ಮಾಡಬಹುದಾದರೆ, ಹೆಂಕೋ ನಗರದಲ್ಲಿ ಪತ್ರಿಕಾ ಪ್ರದರ್ಶನವಾದ ಸಂದರ್ಭದಿಂದ ಚೀನೀಯರ ಈಗಣ ಅಭಿವೃದ್ಧಿ ಎಷ್ಟಾಗಿದೆ ಎಂದು ಎಣಿಸಬಹುದಾದರೆ,–ಪ್ರತಿಯೊಂದೂ ಭಾಗದಲ್ಲಿ ಅಲ್ಲಿನ ಜನಜೀವನವು ವರಣತಿಯನ್ನು ಹೊಂದುತ್ತಲಿದೆ ಎಂಬುದು ಸ್ಪಷ್ಟವಾಗುತ್ತಲಿದೆ ಜನತೆಯ ಸಾಮಾನ್ಯ ಸಕೆಗ್ಯತೆಯು ನಿಜವಾಗಿಯೂ ಸಂಸ್ಕಾರ ಹೊಂದುತ್ತಲಿದೆ, ಸರಕಾರಕ್ಕೂ ಪ್ರಜೆಗಳಿಗೂ ತುಂಬ ವರಸ್ಯರ ಮೈತ್ರಿ ಬೆಳೆಯುತ್ತ ಬರುತ್ತಲಿದೆ, ಎಳೆ ಮಕ್ಕಳಲ್ಲಿ ತಿಳಿವಳಿಕೆಯೂ ಹೆಚ್ಚುತ್ತ ಬರುತ್ತಲಿದೆ

ಬರೇ ಪತ್ರಿಕೆಗಳನ್ನು ನೂತ್ತವೇ ಪ್ರದರ್ಶನದೆ, ಎಳೆ ಮಕ್ಕಳ ಸಲುವಾಗಿ ಸರಕಾರವು ಹೊರಡಿಸುವ ಹಸ್ತಕಗಳೂ ವತ್ರಕಗಳೂ ಮಕ್ಕಳ ಸಾಹಿತ್ಯವೂ ಪ್ರದರ್ಶಕವಾಗಿದ್ದಿತು. ಹತ್ತು ಸಾವಿರ ಪೈತ್ರ ಪತ್ರಿಕೆಗಳ ಪ್ರದರ್ಶನವೆಂದರೆ, ಗಣನೀಯವಾಗಿದೆಯಲ್ಲವೆ? ಅವನ್ನು ನೋಡಲೂ ಲಕ್ಷಗಟ್ಟಲೆ ಜನರು ನೆರೆದು ಬಂದಿದ್ದರೆಂಬುದೂ ಅವರಲ್ಲಿನ ಆಸಕ್ತಿಯನ್ನು ತೋರ್ದಡಿಸುವುದಲ್ಲವೆ?ಇದಿಂದತಾನಿತಿಕ್ಷಣ ವಕ್ಷವಾತವು ಜನರಲ್ಲಿ ತುಂಬ ಹೆಚ್ಚಿಸುವುದಾಗಿ ತಿಳಿದುಬರುವುದಲ್ಲವೆ? ಪತ್ರಿಕೆಗಳೂ ಇಷ್ಟು ಧಾರಾಳವಾಗಿ ಪ್ರಕಟವಾಗುತ್ತಿದ್ದುದರಿಂದ, ಪತ್ರಿಕಾ ಪ್ರವೇಶವಿದಲ್ಲಿನೆನ್ನುವಿಯೂ ಸಂವತ್ತೂ ಚೀನ್ನಾಗಿವೆ ಎಂದೂಹಿಸಬಹುದು

ಇದರ ಜತೆಯಲ್ಲಿಯೆ, ಸಾಂಪತ್ತಿಕ ಮತ್ತು ಕೈಗಾರಿಕೆಗಳ ವಿಚಾರಗಳಲ್ಲೂ ಚೀನವು ತುಂಬ ಮುನ್ನಡೆಯುತ್ತಿದೆ ಎಂದೂ ತಿಳಿದಿದೆ ಚೀನಿಯರಲ್ಲಿ ಶಿಕ್ಷಣವು ಕೈಗಾರಿಕೆಗಳ ಶಿಕ್ಷಣವನ್ನು ಕೂಡಿಕೊಂಡಿದೆ ಕಳೆದ ವರ್ಷಾಂತ್ಯದಲ್ಲಿ 872 ಕೃಷಿ, ಟೆಕ್ನೋಗಿಳ ಶಾಲೆಗಳಲ್ಲಿ 88865 ವಿದ್ಯಾರ್ಥಿಗಳಿದ್ದರೆಂದೂ, ಇವುಗಳಿಗಾಗಿ ಆರು ಮಿಲಿಯ ಡೊಲ್ಲರು ಖರ್ಚಾಯಿತೆಂದೂ ತಿಳಿದುಬರುವುದು ಹತ್ತೀ ವಿಳೆಸುವ ಕ್ರಮ ಂದ ಮೊದಲ್ಕೊಂಡು, ಇಲೆಕ್ಟ್ರಿಕಲ್ ಇಂಜಿನೀಯರಿಂಗ್, ಮುದ್ರಣ, ಸಂಕ್ಷೆಪ್ತಲಿಪಿ ವಿಜ್ಞಾಪನೆ ಬರೆಯುವ ರೀತಿ ಮೊದಲಾದುವನ್ನೂ ಈ ಶಾಲೆಗಳಲ್ಲಿ ಕಲಿಸುತ್ತಾರೆ ಇಷ್ಟೂ ಅಲ್ಲದೆ, ಒಂದು ಕಾಲದಲ್ಲಿ ಅಂತಃಪುರಗಳಲ್ಲೇ ನಳುಗಳಂತೆ ಜೀವಿಸುವ ದುರ್ವಿಧಿಗೊಳಗಾಗಿದ್ದ ಸ್ತ್ರೀಯರೂ ಈಗ ಗೃಹಕೃತ್ಯ ಶಾಸ್ತ್ರವನ್ನಿಲಲು ಚೆನ್ನಾಗಿ ಅಭ್ಯಾಸ ಮಾಡುತ್ತಿರುವರಂತಿಯೂ ಪ್ರಕಟವಾಗಿದೆ ಇಂತಹ ಶಿಕ್ಷಣಕ್ಕಾಗಿ 99 ಶಾಲೆಗಳಿವೆ, ಇವುಗಳಲ್ಲಿ 1980 ವಿದ್ಯಾರ್ಥಿನಿಯರಿರುವರು ವಾಕಶಾಸ್ತ್ರ, ಹೊಲಿಗೆ ಕಸೂತಿ ಕೆಲಸ, ಕುಕ್ಕಾಪ್ಪೆ, ಜರತಾರಿಯಂಕೆಲಸ, ಸೂಲಗಿತ್ತಿತನ, ಮೊದಲಾದುವುಗಳನ್ನು ಕಲಿತು ಸ್ವವೀಣೆಯರಾಗಿ ಹೊರಬರಲಿರೆ ಅಲ್ಲದೆ, ಕಲಾ ಜ್ಞಾನ, ನಾಟಕಕಲೆ, ಸಂಗೀತವಿದ್ಯೆ, ವ್ಯಾಯಾಮ ಶಿಕ್ಷಣ ಮೊದಲಾದುವುಗಳಲ್ಲೂ ಎರಡೂ ವರೆ ಸಾ. ಧ ಸ್ತ್ರೀಯರು ಸಿಪುಣೆಯರಾದರೆಂದು ವರದಿಯಿದೆ

ನಮ್ಮ ನೆರೆಯದೇಶ, ನಮ್ಮ ಜನಾಂಗದ ಸಂಸ್ಕೃತಿಯಪ್ಪೆ ಪುರಾತನ ಸಂಸ್ಕೃತಿಯುಳ್ಳ ಜನಾಂಗ, ನಮ್ಮಂತೆ ಅಧಿವೃದ್ಧಿ ಹೊಂದಬೇಕಾಗಿ ಆತ ರವುಳ್ಳ ಜನತೆ,–ಇಂತಿನರು ಯಾವ ವಿಧಾನಗಳಿಂದ ಹೇಗೆ ಮುಂದೆ ಬರುತ್ತಿರವರು ಎಂಬುದನ್ನು ಬಹಳ ಪ್ರೇಮದಿಂದಲೂ ಕುತೂಹಲದಿಂದಲೂ ನಾವು ಕಾಣಬೆ ಇರಬಹುದು? ಏಕೆಂದರೆ, ಅವರು ಈ ಭಾಗದಲ್ಲಿ ನೂಡ ತ್ತಿರುವ ಉಪಾಯಗಳಲ್ಲಿ ನವ ಗೆ ಸಂಗತಿಗಳುಂಟು

ವೈಸರಾಯರೂ ಮಹಾತ್ಮರೂ.

[ಧ್ಯೇಯವೊಂದಾಗಿರುವವರು ಒಂದುಗೂಡಿದರಾದರೆ!]

ವೈಸರಾಯರಾಗಿರುವ ಲೊರ್ಡ ಲಿನ್ಲತೋ ರವರೂ, ಮಹಾತ್ಮಾಜೀಯವರೂ ಒಂದಾಗಿ ಕಲೆತು ದೇಶಕಾರ್ಯವನ್ನು ಮುಂದರಿಸಲು ಇದೊಂದು ಅಪೂರ್ವ ಸಂದರ್ಭವೆಂದು ಮಿಂಚಸ್ಟರ್ ಗಾರ್ಡಿಯನ್' ಪತ್ರಿಕೆಯು ಇಂಗ್ಲೆಂಡಿನಲ್ಲಿ ಪ್ರಕಟಿಸಿಯದೆ ಸದ್ಯಕ್ಕೆ ಇವರಿಬ್ಬರು ಮಹ ಗಳಾರೂ ಒಂದೇ ಕಾರ್ಯಕ್ರಮವನ್ನು ನುಂದಿಟ್ಟುಕೊಂದಿರುವರೆಂಬುದನ್ನು ಪತ್ರಿಕೆಗಳನ್ನೋದುವವರಾರೂತಿಳಿದಿರಲೇ ಬೇಕಾಗಿದೆ ನಮ್ಮ ದೇಶದ ಗ್ರಾಮಾಂತರ ಗಳಲ್ಲಿನ ನಿವಾಸಿಗಳ ಸಾಂಪತ್ತಿಕ ಸ್ಥಿತಿಯು ಉನ್ನತಿ ಸಾಧನವೇ ಇವರಿಬ್ಬರ ಮುಖ್ಯ ಗುರಿಯಾಗಿದೆ ಅರಿಷೊಟ್ಟೆಯಿಂದ ಬೆಂಡಾಗಿರುವ ಎಲವು ಗೂಡುಗಳೇ ಅತ್ಯತ್ತ ಅಲೆಬಾಡುವಂತೆ ತೋರುತ್ತಿರುವ ನಮ್ಮ ಅಸಂಖ್ಯಾತ ಹಳ್ಳಿಗಳ ಜನರಲ್ಲಿ, ಸುಖ ಜೀವನದ ಸಂಜೀವನ ವಾತವು ಬೀರುತ್ತ,ಸುಧಾರನೆಯು ಹರಡಿ, ಅವರು ಜವಾಬುದಾರಿಗಳನ್ನು ಸರಿಯಾಗಿ ತಿಳಿದುಕೊಂಡು ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡುತ್ತಿರುವ ಹಾಗೆ ಏನು ಉಪಾಯ ಮಾಡಬಹುದೆಂಬ ಬಗೆಗೆ ಇವರಿಬ್ಬರೂ ಚೆನ್ನಾಗಿ ಆಲೋಚಿಸುತ್ತಿರುವರು. ಗ್ರಾಮಗಳನ್ನು ಮುತ್ತಿರುವ ದಾರಿದ್ರ್ಯ, ಗ್ಲಾನಿ ಧೈರ್ಯಲಾಭುವನ್ನು ನಿರ್ಮೂಲನಮಾಡುವುದಕ್ಕಾಗಿಯೆ ಗ್ರಾಮ ಕೈಗಾರಿಕೆಗಳ ಸಂಘವನ್ನು ಮಹಾತ್ಮಾಜಿಯವರು ಹೂಡಿತೆಂದರು. ಸಮಾಜದಲ್ಲಿ ಅಧಿನಾ ರಾಜಕೀಯದಲ್ಲಿ ಯಾವ ಸ್ಥಾನವನ್ನು ಪಡೆದ ಎಂತಹನಾದರೂ ಈ ಸಂಘದ ಕೆಲಸವನ್ನು ನೆರವೇರಿಸಲು ಸಹಾಯಮಾಡಬಹುದಾಗುವಷ್ಟು ಅನುಕೂಲವಾಗಿ ಈ ಸಂಘದ ನಿಯಮಗಳಿವೆ. ಈ ಸಂಘದಲ್ಲಿ ಕೆಲಸಮಾಡುವವರು, ಯಾವ ತೆರದಿಂದಲಾದರೂ ರಾಜಕೀಯ ವಕ್ಷಗಳಲ್ಲಿ ಯಾವುದನ್ನಾದರೂ ಬಲವಡಿಸುವುದಕ್ಕೆ ವ್ಯಯತ್ನಿಸ ಬಾರದಾಗಿದೆ ತಮ್ಮ ರಾಜಕೀಯ ವಕ್ಷವಾತವನ್ನು ಮರೆತು, ಸಂಘದ ಕೆಲಸಮಾಡಲು ಯಾರು ಒಪ್ಪುವರೋ, ಅವರನ್ನು ಈ ಸಂಘವು ಆತ್ಮಾದರದಿಂದ ಸೇರಿಸಿಕೊಳ್ಳುವುದು ಎಂದೂ ಅದರ ನಿಯಮವಿದೆ ವೃತ್ತಕ್ಷಶಿಕ್ಷಣ, ಆಹಾರ ವಿಜ್ಞಾನ, ಗ್ರಾಮೂರೋಗ್ಯ, ಕೈಗಾರಿಕೆಗಳು ಮುಂತಾದ ವಿಜಾರಗಳಲ್ಲಿ ಈ ಸಂಘದವರು ಬೇಕಾಗುವಷ್ಟುಮಾಹಿತಿಯನ್ನುಎಲ್ಲೆಲ್ಲಿಂದಲೂ ಪಡೆಯುವರು ಅಂತೂ ಗ್ರಾಮಗಳು ಸೌಖ್ಯ ಆನಂದಗಳ ಬೀಡಾಗಬೇಕು, ಗ್ರಾಮಜೀವನ ನವು ನಿಜವಾದ ಜೀವನವೆನಿಸಬೇಕು ಎಂಬುದೇ ಅವರ ಧ್ಯೇಯ

ವೈಸರಾಯ ಸಾಹೇಬರಾದರೋ, ಅವರ ಇತ್ತೀಚೆಯ ಭಾಷಣಗಳಿಂದ, ಇತೇ ಧ್ಯೇಯಗಳನ್ನುಳ್ಳವರಾಗಿರುವ ತೆ ಸೂಚಿಸಿದಾರೆ ಹೀಗಿರುವ ವ್ಯಕ್ತಿ, ಆ ಸಂಘವೂ ಈ ಸೂತನೆಗಳ ಒಂದೇ ಆಗಿರ ವಿಕ್ಕಿಗೆ ಗ್ರಾಮ ಜೀವನವನ್ನು ತಿದ್ದಿ ತರುವ ಪ್ರಯತ್ನಮಾಡುವುದಾದ ಕಾರಣ, ಇಂತಿಯೂ ಸರಕಾರವು ಈ ಸ್ವಸಂಘದೊಡನೆ ಸಹಕರಿಸಲು ತುಂಬ ಅನುಕೂಲವಾಗಿದೆ

ಆದರೆ ನೋಕರಶಾಹಿಯು ರೀತಿಯಲ್ಲಿ ಈ ಸಹಕಾರವು ಹುಟ್ಟಿ ಬೆಳೆಯದೆ ಹಾಗೆ ಮಾಡಿರುವ ಕೆಲವು ಅತಂಕಗಳಿವೆ ನೊದಲಿಂದ ಗ್ರಾಮೋಜ್ಜೀವನ ಸಂಘವನ್ನು ಎದುರಿಸಿಡಿ ಸರಕಾರೀ ವ್ಯಕಟಣೆಗಳೂ ಸದಪೇಕ್ಷವನ್ನು ವಿಷೋದ ದೃಷ್ಟಿಯಿಂದ ಕಂಡ ಇಲಾಖೆಗಳೂ ಇವೆ ಇನೇಕ ತಿನಗಳಲ್ಲಿ ಈ ಸ ಘವು ಮಾಡಿರ ವ ಕಾರ್ಯ ಕಲಾಪಗಳನ್ನು ನೋಡಿದಲ್ಲಿ ಸ ಘದಲ್ಲಿ ಸಂದೇಹವನ್ನು ರಂತರವಿಲ್ಲಿ ಕೃತ್ರಿಯ ನಿಸ್ಸ ದೇಹವಾಗಿ ಉಳಿಯಿಂದ ಇರಲಾರದೆ, ಅವರೂ ಈ ಸಂಘದ ಸರ್ವರಿ ಗಳೂಪ್ರೋತ್ಸಾಹಕ್ಕೆ ಅರ್ಹವಾದ ದಂದೇ ಘೋಷಿಸಿದೆ ಇದಲ್ಲದೆ ಜನತೆಯೂ ಸರಕಾರವೂ ಸ್ವಲ್ಪಂ ಕೋಚವಾಗಿ ಸಹಿಯಾಗುಾಡಲರ್ಹವಾದ ಸಂಘವಿದು ಆದರೆ ಹಲ್ಲೆಟ್ ಸರ್ಕಲ್‌ರು ಇನ್ನೂ ಜ್ಯಾನಿಯಲ್ಲಿದೆ, ಅದು ಆಡುಳು ಇನ್ನೂ ಮಾಸಿಹೋಗಿಲ್ಲ ಧಾರವಾಡದಲ್ಲಿ, ಸರಕಾರೀ ಮತ್ತು ಬಿನ್ ಸರಕಾರೀ ವಕ್ಷಗಳಿಂದ ಎರಡು ಸಂಸ್ಥೆಗಳು ಒಂದೇ ಧ್ಯೇಯದಿಂದ ಇತ್ತೀಚೆಗೆ ಉಂಟಾಗಿರುವ ಅನವಶ್ಯಕ ದುಃಖಿತ ದುಸ್ಪರಿಣಾಮಗಳನ್ನೂ ನಂವು ಕಾಣ ತ್ತಿದ್ದೇವೆ, ಇವೆರಡು ಸ ಘಗಳೂ ಗ್ರಾಮೋದ್ಧಾರ ಕಾರ್ಯಕ್ಕಾಗಿವೆ ಆದರೆ ಕಾರ್ಯದಲ್ಲಿ ಒಂದಕ್ಕೊಂದು ವಿರುದ್ಧವಾಗಿದ್ದಾವೆಯೆಂಬಂತೆ ಭಾಸವಾಗುವಂತಿದೆ

ಗ್ರಾಮ ಜೀವನವು ಅತ್ಯುತ್ತಮವಾಗಿ ಬೆಳೆಯ ಬೇಕೆಂಬ ಅತ್ಯಾಕಾಂಕ್ಷೆಯುಳ್ಳ ನಮ್ಮ ವೈಸರಾಯ ಸಾಹೇಬರು, ಈ ತೆರದಲ್ಲಿ ಒಂದೇ ಧ್ಯೇಯವುಳ್ಳ ಎರಡು ಸಂಘಗಳು ಅರ್ಧಮರ್ಧವಾಗಿ ವಿರುದ್ಧವಾಗೆಂಬಂತೆ ಚಡವಡಿಸುವುದಕ್ಕೆ ಬಿಡದೆ, ಇವೆರಡೂ ಸಹಕರಿಸುವ ಹಾಗೆ ನಿಯೋಜಿಸುವರೆಂದೂ, 'ಗ್ರಾಮೋದ್ಧಾರ ಸಂಘವು ವಿಜಯ ಹೊಂದುವ ಹಾಗೆ ಮಹದಾತ್ಮಂ ವನ್ನೊಡ್ಡಿರುವ ಆ ಹೆಲ್ಲೆಟ್ ಸರ್ಕಲರು ರದ್ದಾಗುವಂತೆ ಅವ್ಯಕೆ ಕೊಡುವರೆಂದೂ 'ಮಿಂಚಿಸ್ಟರ್ ಗಾರ್ಡಿಯನ್' ಪತ್ರಿಕೆಯ ಸೂಚನೆಯನ್ನೋದಿ, ನಾವು ನಂಬಿರುವೆವು

ಸ್ಫುಟವಿಚಾರಗಳು

ಇಟೆಲಿ ಸಾಮ್ರಾಜ್ಯದ ಒಂದು ವಿಭಾಗ

ಎಂದೇ ಅಬಿಸೀನಿಯವನ್ನು ಇಟೆಲಿಯು ಈಗ ಕರೆಯುತೊಡಗಿದೆ ಅಷ್ಟು ಅಲ್ಲದೆ, ತನ್ನ ಸಾಮ್ರಾಜ್ಯದ ಯಾವ ಅಂಶವನ್ನಾದರೂತನ್ನಿಂದ ಕ್ಷಸುಗೊಳ್ಳುವವರನ್ನು ಸಂಪೂರ್ಣವಾಗಿ ವಿರೋಧಿಸಲಾಗುವುದೆಂದೂ ಇಟೆಲಿ ಸರಕಾರವು ನುಡಿದಿದೆ. ಕೊಳ್ಳೆ ಹೊಡೆದುದನ್ನು ಅಷ್ಟು ಸುಲಭವಾಗಿ ಭಂಡಾರದೊಳಗೆ ಮಡಗಲು ಬಿಡುವವರಲ್ಲವೆಂದೂ ಇತರ ಸರಕಾರಗಳು ಅಭಿಪ್ರಾಯಪಡುವುದೇ ಬಲಗುಂದಿಯೇ ಆದರೂ ಇರುವ ಜನಾಂಗ ಸಂಘಕ್ಕೆ ಇನ್ನೂ ಜೀವವಿದೆ, ಅದು ಸತ್ತುದಿಲ್ಲ ಫ್ರಾನ್ಸಿನಲ್ಲಿ ಉಂಟಾಗಿರುವ ಹೊಸ ಸರಕಾರವು (ಸೊಶಿಯಲಿಸ್ಟ್) ಈಸಂಘದಲ್ಲಿ ಹೆಸರ ಕಳೆಯುನ್ನು ತುಂಬದೆ ಇರಲಾರದು ಈಗ, ಆಬ್ಜೆಂಟಾಯಿನ್ ಸರಕಾರವು, ಇಟೆಲಿಯ ವಿರುದ್ಧವಾಗಿ ಜನಾಂಗ ಸಂಘವು ಹೊರಿಸಿದ್ದ (ಸೆಂಕ್ಷನು) ಬಹಿಷ್ಕಾರಗಳನ್ನು ಕುರಿತಾಗಿಯೂ, ಜನಾಂಗ ಸಂಘದ ಸುಧಾರಣೆಯನ್ನು ಅಬಿಸೀನಿಯದ ಭವಿಷ್ಯವನ್ನು ಕುರಿತಾಗಿಯೂ ಆರ್ಧರಿಸಲು ಸಂಘದ ಒಂದು ವಿತ್ಯೇಕ ಸಭೆ ಸೇರಬೇಕೆಂದು ಸೂಚನೆಕೊಟ್ಟಿದೆ ಅಬಿಸೀನಿಯವು ಇಟೆಲಿ ಸಾಮ್ರಾಜ್ಯದ ಒಂದು ಅಂಶವಲ್ಲವೆಂದು ಸಂಘವು ಸೂಚನೆ ತಂದೆ, ಅವೇ ರಿಕದ ದೇಶಗಳ ಅದನ್ನು ಸವರ್ಥಿಸುವುವೆ ದಂ ಹೇಳಲಂಗಿದೆ ಫ್ರಾನ್ಸು ಮತ್ತು ಇಂಗೆಂಂ ಆಫಿಕದಲ್ಲಿ ವಸಾಹತುಗಳುಳ್ಳ ರಾಜ್ಯಗಳ ಆಫಿಕದಲ್ಲಿ ವಸಾಹತ ಇಲ್ಲದ ಯೂರೋಷ್ಯ ರಾಜ್ಯಗಳ ಸಭ ನ ಸೊಲಿಸಿಯ ಈ ಹೊಸ ಬೆದರಿಕೆಗೆ ಭಯಪಡುವಂತಿಲ್ಲ ಜನಾಂಗ ಸಂಘವು ಉಳಿಯ ಬೇಕಾದರೆ ಇಂತಹ ನಿರ್ಭಾಯತೆಗೆ ದಲೇ ಕಾರ್ಯವು ಮುಂದರಿಯಬೇಕಾಗಿದೆ ಸಂಗಿಲ್ಲದಿರ ವಲ್ಲಿ, ಜನಾಂಗಸಂಘಕ್ಕೆ ಹೇಗೋ ಹಾಗೆಯೆ ಮೂಸೋಲಿನಿ ವತ್ತ ಜಗತ್ತಿನ ಶಾಂತಿಗೂ ಹಾಂಸು ಓ

ಅಸ್ಪೃಶ್ಯತೆ

ಒದರೆ ಸ್ಪೃಶ್ಯ ಮತ್ತು ಅಸ್ಪೃಶ್ಯರೆಂಬುವ ಸಮಾಜಗಳೊಳಗೆ ಇರುವ ತಿಕ್ಕಾಟಕ್ಕೆ ಮೂಲ ಇದು ಮೇಲಿಂದ ಮೇಲೆ ಸಾವಾಜಿಕ ಪ್ರಶ್ನೆ ಎಂತೆಯೆ ಸದ್ಯ ಣ ವುದಂದರೂ, ಎಲವಾಗಿಯೂ ಇದು ಸಾಂಪತ್ತಿಕ ಹಾಗೂ ರಾಜಕೀಯ ಸಮಸ್ಯೆಯಾಗಿಯೂ ಇದೆ ಪ್ರತಿಯೆಂದ ಸಮಾಜಕ್ಕೂ ಅದರದರ ಜನ್ಮಸಿದ್ಧ ಹಕ್ಕು ಇದ್ದೇ ಇದೆ ಅದನ್ನು ಕಾಪ್ಪಾಡಿಕೊಳ್ಳಲು ಬೇಕಾದ ಪ್ರಯತ್ನಗಳನ್ನೆಲ್ಲಾ ಸಮಾಜವು ಪಯತ್ನಿಸಲೆ ಬೇಕಾಗಿದೆ ಹಣವೂ ಬೆಂಬಲವೂ ಇಲ್ಲದ ಅಸ್ಪೃಶ್ಯ ಸಮಾಜವು ಜೀವನ ರೀತಿಯಲ್ಲಿ ತಾನೆ ಮೇಲು ಸಮಾಜಗಳೊಡನೆ ಸ್ಪರ್ಧೆಗೆ ನಿಲ್ಲಲಹುದು? ತನ್ನ ವತ್ತ ದೊಳಗೇ ಸೇರಿದ್ದಾಗ ತಾನೆ ಜೀವ್ರವೊಂದು ಸಮಾಜಕ್ಕೆ ಬಾಧೆಗಳುಂಟಾಗ ವುದು ಆದ ಕಾರಣ, ಬೇರೊಂದು ಮತಕ್ಕೆ ಸೇರಿ ಅವರೊಡನೆ ಸರ್ವಸಾಮಾನ್ಯವಾದ ಹಕ್ಕುಗಳನ್ನು ಅಲ್ಲದಿದ್ದರೂ ಸಮಾನತೆಯನ್ನು ದೊರಕಿಸಿಕೊಂಡಲ್ಲಿ ಅವರದೇ ಎಂಬ ಒಂದು ಸಮಾಜವಾದರೂ ಆದರ ಅಭಿಮಾನವಾದರೂ ಉಳಿದೀತು, ಎಂಬ ಕಾರಣದಿಂದ ಮುಂಬಾಯಿಯಲ್ಲಿ ಸೇರಿದ ಮಹಾರರ ವರಿಷತ್ತು, ದೊಡಲಾಗಿ ಸರ್ವರೂ ಹಿಂದೂಧರ್ಮವನ್ನು ಬಿಡುವ ಹಾಗೂ (ಪೂಜಾದಿಗಳು ಕಾಣಿಕೆಗಳು ಇತ್ಯಾದಿ) ನಂತರ ಬಹುಸಂಖ್ಯಾತರಾಗಿ ಮತ್ತೊಂದು ಸಮುದಾಯಿಯುಳ್ಳ ಧರ್ಮವನ್ನು ಸೇರುವ ಹಾಗೂ ಪ್ರಯತ್ನಿಸಬೇಕಾಗಿ ನಿರ್ಣಯ ಮಾಡಿದೆ

ಮಂಗಳೂರು.

ಪೋರ್ಟ್ ಇಲಾಖೆಯ ಶ್ರೀಗೆಳೆದ ತ್ರಾಸಿ ಆನಂದ ರಾಯರು ಹೂವಿನಬಿಗಿ, ಗಣೇಶ ಸುಂದರರಾಯರು ಕಾಸರಗೋಡಿಗೂ ಸರಲ್ ಇನ್ಸ್‌ಪೆಕ್ಟರುಗಳಾಗಿ ಮಾಡಿ ಯಿಸಲ್ಪಟ್ಟಿದ್ದಾರೆ. ಪೊಲೀಸ್ಕಮ್ಮಿಟಿಂಗ್ ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವರಾಯರು ೨ ತಿಂಗಳ ರಜೆಪಡೆಕೊಂಡಿರುವುದರಿಂದ ಅವರ ಬದಲಿಗೆ ಶ್ರೀ ಕೃಷ್ಣಪ್ಪರು ನಿಯೋಜಿತರಾಗಿದ್ದಾರೆ.

ಇಲ್ಲಿಗೆ ೯-೧೦ ಮೈಲು ದೂರದಲ್ಲಿರುವ ಗುಬ್ಬಿಪುರ ಕೈಳಂಥದ ಹತ್ತಿರ ಬೈಲಿನಲ್ಲಿ ಭೀಕರ ಭೀಷಣ ಘಟನೆ ಯೊಂದು ಕಳೆದ ಶನಿವಾರ ಬೆಳಿಗ್ಗೆ ನಡೆದುಹೋಯಿತು. ಒಬ್ಬ ಬಂಟ ಸಮಾಜದ ಕುಡ್ತಲದಾರ್ತಿಯ ಆಕ್ರಮಣವು ಬಲಾತ್ಕಾರದಿಂದ ತೆಗೆದುಕೊಂಡು ಹೋಗಲು ಕೆಲವರು ಪ್ರಯತ್ನಿಸಿದ ಹಾಗೂ ಅವರವರಿಗೆ ಕಾದಾಟವಾಗಿ ಅನೇಕರು ಗಾಯಗೊಂಡರಿ ಕೆಲವರು ಇಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿರುವುದಲ್ಲದೆ, ಇಬ್ಬರು ಆಸ್ಪತ್ರೆಯಲ್ಲಿಯೆ ಮೃತಪಟ್ಟಿರುವುದಲ್ಲದೆ, ಇಬ್ಬರು ಆಸ್ಪತ್ರೆಗೆ ಸಾಗಿಸಿದ ಮೇಲೆ ಮೃತಪಟ್ಟಿರುವರೆಂದೂ ತಿಳಿದುಬರುತ್ತದೆ ಪೋಲೀಸ್ ತನಿಖೆ ನಡೆಯುತ್ತಿದೆ

ಮಂಗಳೂರು ನಗರದ ಮಾನಸಿಕಾಲಿಯೊಳಗೆ ಇದೇ ಜೂನ್—ಜುಲೈ—ಆಗೋಸ್ತು ತಿಂಗಳುಗಳಲ್ಲಿ ವಿದ್ಯಾರ್ಥಿ ವೇತನಗಳನ್ನು ನಿತ್ಯವೂ ಸಂಜೆ ಗಂಟೆ ೭ರಿಂದ ೮-೩೦ ವರೆಗೂ ದೇಣಿಗೆಯ ಜಾವದಲ್ಲಿ ಗಂಟೆ ೮-೪೫ರಿಂದ ೯.೪೫ ವರೆಗೂ ಬೆಳಗಿಸಲಾಗುವುದು

ಸ್ಥಳೀಯ ಹೈಸ್ಕೂಲುಗಳಲ್ಲಿ, ಮ್ಯೂನಿಸಿಪಲ್ ಎ ಶಾಲೆಗಳಲ್ಲೂ ಜೂನ್ ೩ ರಿಂದ ಸೇಕಾಲದ ರಜೆ ಕಳೆದು ಪ್ರಾರಂಭವಾಗಿದೆ.

ಇದೇ ಒರುವ ಮದ್ರಾಸು ಅಸೆಂಬ್ಲಿಯ ದ ಕನ್ನಡ ಜಿಲ್ಲೆಯ ಅಧಿಪ್ರತಿನಿಧಿ ಪರಮಾಗಿತಕ್ಕ ಒಂದು ಸ್ಥಾನಕ್ಕೆ ದಿ ಎಜ್ಯುಕೇಶನಲ್ ಕಾನ್ಸಿಲರ್ ಮೆಂಬರಾದ ಶ್ರೀಮಾನ್ ಎಸ್. ಗೋಪಾಲಸೆಟ್ಟಿಯರ್ ಆಯ್ಕೆಯಾಗಿ ನಿಲ್ಲುವ ರೆಂದು ತಿಳಿದು ಬರುತ್ತದೆ

ಸ್ಥಳೀಯ ಶ್ರೀ ಕೃಷ್ಣ ಬಿನೇಮಾದಲ್ಲಿ ಹೆಂಡ್ಸ್ ಆಫ್ ಆಥಮ್ ಕ್ಯಾಪ್ಟನ್ ಕಮಂಡಾ ಎಂಬ ನೂತನ ನಾಟಕ ಚಿತ್ರ ಕಾದಂಬರಿಯೊಂದು ಪ್ರದರ್ಶಿಸಲ್ಪಡುತ್ತಿದೆ. ಜನರು ಪಟ್ಟಿಂದು ಬಗ್ಗೆತಿಕಿಸುವುದರಲ್ಲಿ ಇದೇ ಶ್ರೀ ೭ರಿಂದ ಪ್ರೇಸ್ಟಿಂಗ್ ಲೇಡಿ ಎಂಬ ಆಂಗ್ಲ ಚಿತ್ರವು ಪ್ರದರ್ಶಿಸಲ್ಪಡುವುದು. ಆನಂತರ ಮಾಸ್ ಸಂಗೀತವನ್ನು ಮತ್ತು ಜಾಲ್ ಮರ್ಚೆಂಟ್ ಎಂಬವರಿಂದ ಅಭಿನಯಿಸಲ್ಪಟ್ಟ ಗೃಹಲಕ್ಷ್ಮಿ ಎಂಬ ಚಿತ್ರವು ಪ್ರದರ್ಶಿಸಲ್ಪಡಲಿರುವುದಾಗಿ ತಿಳಿದು ಬರುತ್ತದೆ.

ಮದ್ರಾಸು ಲೆಜಿಸ್ಲೇಟಿವ್ ಎಸೆಂಬ್ಲಿ ಚುನಾವಣೆಗೆ ಮಂತ್ರಾಲಾ ಮಾಡುವವರು ತಮ್ಮ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ನೋಂದಿಸಿಕೊಳ್ಳಲು ಅರ್ಜಿಗಳನ್ನು ಈ ಕೆಳಗೆ ಕಾಣಿಸಿದ ಅಧಿಕಾರಿಗಳಲ್ಲಿ ಕೊಡಬಹುದು. ಅರ್ಜಿಗಳು ವಾರದ ಎಲ್ಲಾ ದಿನಗಳಲ್ಲಿ ಮತ್ತು ಅಧಿಕಾರಿಗಳಿಗೆ ಸಂಬಂಧಪಟ್ಟ ಸ್ಥಳಗಳಲ್ಲಿ ಕೆಳಗೆ ಕಾಣಿಸಿದ ಸಮಯ ದಲ್ಲಿ ತಾ. ೩೦-೩-೩೬ರ ಒಳಗೆ ಕೊಡಬಹುದು.

೧. ಮುನಿಸಿಪಲ್ ಚೆಲ್ಸ್, ಅಧೀಕರರು, ಹೆಲ್ತ್ ಅಧೀಕರರ ಅಧೀನ, ಗವರ್ನಮೆಂಟ್ ಕಾಲೇಜಿನ ಎದುರು, ದಂಬೆಚೆಟ್ಟಿ ಅರ್ಜಿಗಳನ್ನು ಸ್ವೀಕರಿಸುವ ಸಮಯ:— ಅರಂಭ ೩—೪ ೨. ಲೇಡಿ ಮೆಡಿಕಲ್ ಅಧೀಕರರು ಜನನ ಮರಣ ರಿಜಿಸ್ಟ್ರಿ ಅಧೀನ, ಹಂಪನಕಟ್ಟೆ ಸಮಯ ಪೂರ್ವಾಹ್ನ ೪ ರಿಂದ ೧೦, ೩ ಮುನಿಸಿಪಲ್ ಯೂನಿಯನ್ ಡಿಸ್ಟ್ರಿಕ್ಟರು ಮುನಿಸಿಪಲ್ ಯೂನಿಯನ್ ಡಿಸ್ಟ್ರಿಕ್ಟ್ ನ, ಜೀಪು ಅಲಾಬಿದಸ್ಟ್ರಿ, ಗೋಕರ್ಣಕಟ್ಟೆ ಸಮಯ ಪೂ. ೮ರಿಂದ ೧೧. ೪ ಫಿಷಿಕಿಯನ್, ಬೊಕ್ಕಪಟ್ಟಣ ಮುನಿಸಿಪಲ್ ಡಿಸ್ಟ್ರಿಕ್ಟ್ ಸ್ಥಳ—ಬೊಕ್ಕಪಟ್ಟಣ ಮುನಿಸಿಪಲ್ ಡಿಸ್ಟ್ರಿಕ್ಟ್ ಸಮಯ ಪೂ. ೮ರಿಂದ ೧೦. ೫ ಫಿಷಿಕಿಯನ್, ಜಪ್ಪು ಮುನಿಸಿಪಲ್ ಡಿಸ್ಟ್ರಿಕ್ಟ್, ಸ್ಥಳ—ಮುನಿಸಿಪಲ್ ಡಿಸ್ಟ್ರಿಕ್ಟ್ ಸಮಯ ಪೂ. ೮ರಿಂದ ೧೧ ಮಂಗಳೂರು ಮುನಿಸಿಪಲ್ ಕಛೇರಿ ಎಲ್ಲಾ ಕಛೇರಿ ದಿನಗಳಲ್ಲಿ ಅರಂಭ ಗಂಟೆ ೧೦ರಿಂದ ಆ ವರೆಗೆ ಅರ್ಜಿಗಳನ್ನು ತಮ್ಮ ಅನುಕೂಲದಲ್ಲಿ ಕೊಡಬಹುದೆಂದು ತಿಳಿಸಿತ್ತಾರೆ.

ಮಂಗಳೂರು ನಗರ ಸಭೆಯ ನಿಯಾಪಿಂಗೊಂದು ಜೂನ್ ತಿ. ೧೯ ನೇ ಸೋಮವಾರ ಸಂಜೆ ೪ ಗಂಟೆಗೆ ಶ್ರೀ ಎಸ ಪಿರಿ ಎಸ್ಟರ ಅಧ್ಯಕ್ಷತೆಯಲ್ಲಿ ನಿಗದಿ ತ ಸಭೆಯಲ್ಲಿ ಕ್ಯಾನು ಎಸ್ಟಾ ಮಂಜೂರಾತಿ ಪಡೆಯುವ ವಿಷಯ ಇದೆ ಮ್ಯೂನಿಸಿಪಲ್ ಫಿಸಿಷಿಯನ್ ಡಾಕ್ಟರ್. ಎ. ಸುಬ್ಬಯ್ಯ ಶೆಟ್ಟಿಯವರಿಗೆ ಮಾರ್ಚಿಯಾಗಿಯೂ, ಜಗತ್ತಿನಲ್ಲಿ ಅಮೂಲ್ಯವಾದ ಸ್ವತಂತ್ರ ರಾಜ್ಯವಾಗಿದ್ದ ಜಿಬೀಷಿಯಾದ ಪೀಠಾನಸ್ಥೆಯಲ್ಲಿ ನಾವು ಸಹಭಾಗಿಗಳಾಗುವುದಲ್ಲದೆ ಆನ್ಯಾಯವು ಪರಿಸಿದ ಜನಂಗ ಸಂಘದ ಪರಿಸ್ಥಿತಿಯನ್ನು ಏಂದಿಸಬೇಕಾಗಿಯೂ, ಕರಾವಳಿಗಳು ಮಾನವ ಪಟ್ಟ

ತಾಲೂಕುಗಳಿಂದ.

ಕುಂದಾಪುರ:—ಒಂದು ವಾರದಿಂದ ಮಳೆಯು ತ್ರಾಸಂಭವವಾಗಿ ಆಗಾಗ್ಗೆ ಬರುತ್ತಲೇ ಇದೆ.

ಸ್ಥಳೀಯ ಬೋರ್ಡ್ ಹೈಸ್ಕೂಲಿನ ಉಸಾಧ್ಯಾಯ ಶ್ರೀ ಕೆ. ಎಲ್. ಆಚಾರ್ಯ, ಬಿ. ಎ. ಎಲ್. ಬಿ. ಇವರಿಗೆ ಬೈಂದೂರು ವಿದ್ಯಾಸಂಸ್ಥೆಯ ಮುಖ್ಯೋಪಾಧ್ಯಾಯರಾಗಿ ನೇಮಕಮಾಡಿರುವುದಾಗಿ ತಿಳಿದುಬಂದಿದೆ. ಅವರ ಸ್ಥಾನಕ್ಕೆ ಬೈಂದೂರು ಪಂಚಾಯತ್ ಪೆಡ್ಡಾಸ್ಪರಿಂಡೆಂಟ್ ಶ್ರೀ ಸದಾಶಿವರಾವ್, ಬಿ. ಎ. ಎಲ್. ಬಿ. ಇವರಿಗೆ ನೇಮಕವಾಗಿದೆ

ನಮ್ಮ ಜಿಲ್ಲೆಯವರಾದ ಸಂಗೀತ ವಿದ್ವಾನ್ ಮಂ. ರಾ. ಜಿ. ಆನಂದರಾಯರು ಕಳೆದ ತಾ. ೨೪ರಲ್ಲಿ, ಇಲ್ಲಿಯ ಪಂಚಾಯತ್ ಬೋರ್ಡ್ ಪೈಸಿಡೆಟರದಾದ ಶ್ರೀ ರಾಮ ಭಟ್ಟರವರ ಉದಾರಾಶ್ರಯತ್ವದಲ್ಲಿ ಉತ್ತಮ ಹಿಮ್ಮೇಳನ ದಿಂದ ಕೂಡಿದ ತಮ್ಮ ಮಾರ್ಮಿಕಗಾನವನ್ನು ಮಾಡಿ ನೆರೆದ ಸಭಿಕರನ್ನು ಸ್ತೂತೋಪಗೊಳಿಸಿದರು ಗಾಯನ ನಾಂತ್ಯದಲ್ಲಿ ಶೈಸ್ಯಾನಿನ ಸನ್ಮಾನ ಪಂಡಿತರಾದ ಶ್ರೀಯುತ ಬಿ. ಕಾಶ್ಯಾಚಾರ್ಯ (ವಿದ್ವಾನ್) ರು ಶ್ರೀಯ ಆನಂದ ರಾಯರ ಪರಿಚಯ-ವನ್ನು ಮಾಡಿಕೊಡುತ್ತಾ, ಕುಂದಾಪುರದ ಮಹಾಜನರ ಪರವಾಗಿ ಧನ್ಯವಾದಸನ್ಮಾನಿಸಿದರು

ಕರ್ನಾಟಕ ಸಾಹಿತ್ಯ ಸಂಘದ ನೀೀಪ ಮಹಾಸಭೆಯು ತಾ. ೨೫ರಲ್ಲಿ ಪಂಚಾಯತ್ ಬೋರ್ಡ್ ಪೈಸಿಡೆಂಟರಾದ ಶ್ರೀ ರಾಮಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ಜಿ. ಆನಂದರಾಯರ ಗಾಯನಕಚೇರಿಯಿಂದ ಜನಿಯಿಸಿದ ಮೊಲಲಗಿಸಲ್ಪಟ್ಟ ಅಧ್ಯಾಂಥ ಹಣವು ಸ್ಥಳೀಯ ಕರ್ನಾಟಕ ಸಾಹಿತ್ಯಸಂಘಕ್ಕೆ ಒಪ್ಪಿಸಲೆಂದಾಗಿ ನಿಶ್ಚಿತವಾಗಿದ್ದಿತು. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ. ನರಸಿಂಹಕಾಮತರು ಆಂದಿನ ಅಧ್ಯಕ್ಷನುಜ್ಞಾಪಯರಿಗೂ ಶ್ರೀ ಜಿ ಆನಂದ ರಾಯರಿಗೂ ಪ್ರಮಾಣಪತ್ರಗಳನ್ನು ಹಾಗೆ ಸತ್ಕರಿಸಿದರು ತದನಂತರ ಅಧ್ಯಕ್ಷರು ಗಾಯನಕಚೇರಿಯಲ್ಲಿ ಜನಿಯಸಿದ ಮೊಲಲಗಿದ್ದ ಅಧ್ಯಾಂಥಸಹಾಯವನ್ನು ಮಹಾಜನರು ಪ್ರೀತಿಯಿಂದ ಕೊಟ್ಟಿಲ್ಲ ಹಣವನ್ನು ಕೂಡಿಸಿ ಆನಂದರಾಯರಿಗೆ ಅರ್ಪಿಸಿದರು ಕಲಾಪ್ರೇಮಿ ಗಳಾದ ಜಿ ಆನಂದರಾಯರು ಈ ರೀತಿಯಾಗಿ ಕುಂದಾಪುರದ ಕರ್ನಾಟಕ ಸಂಘವನ್ನು ಪೋಷಿಸಿದ್ದಕ್ಕಾಗಿ ಸಂಘದ ಸುಂಬಂಧಿಗಳೂ ಕೃತಜ್ಞರಾಗಿರುತ್ತಾರೆ

ಉಡುಪಿ—(ಕಿದ್ಯಪಡಿ) ಕ್ರೈಸ್ತ ಹೈಸ್ಕೂಲಿನಲ್ಲಿ ೧೯೩೫ರಲ್ಲಿ IV ಫೋರ್ಮ್‌ನಿಂದ V ಫೋರ್ಮಿಗೆ ಪ್ರ ರಲ್ಲಿ ೩೮ ಮಂದಿಗೆ ಪ್ರೊಮೋಶನ್ ಕೊಟ್ಟಿದ್ದರೆಂಬುದರ ಬದಲಿಗೆ ೧೯೩೫ರಲ್ಲಿ III ಫೋರ್ಮ್‌ನಿಂದ IV ಫೋರ್ಮಿಗೆ ಪ್ರೊಮೋಶನ್ ಮಾಡಲ್ಪಟ್ಟಿದ್ದೆಂದು ಓದ ತಕ್ಕದ್ದು. ಆಯೋಜಿತ ಪ್ರಮಾದಕ್ಕೊಸ್ಕರ-ವಿಷಾದಿಸ ಲಾಗುತ್ತದೆ.

ಮುನಿಸಿಪಾಲಿಟಿಯೊಳಗಿನ ರಸ್ತೆಗಳು ಅನೇಕ ಕಡೆ ಗಳಲ್ಲಿ ತುಂಬಾ ಹಾಳಾದ ಸ್ಥಿತಿಯಲ್ಲಿವೆ. ಹಿಂದಿನ ವರ್ಷಗಳಲ್ಲಿ ಜಿ. ಬೋರ್ಡ್ ಸಮ್ಮುಖ ದೂರಬಿದೆ ಎಂಬ ಹುಗ್ಗೆ ಸ್ಥಳ ಮುನಿಸಿಪಾಲಿಟಿಯೇ ಇಲ್ಲಿ ಪ್ರಶ್ನಿಸುವಿದೆ ಎಂಬುದಾಗಿ ರಿಜೀಲಿಯು ಎಂದೋ ಯಶವಾಗಲೋ ದುರುಸ್ತಿಯಾಗುವುದು? ಕಲ್ಲುರಾಶಿಗಳು ಶೇಖರಿಸಲ್ಪ ಟ್ಟಿವೆ; ಕಾಮಗಾರಿಯನ್ನು ತೀವ್ರ ಪ್ರಾರಂಭಿಸಿದರೂ ಸಾಲ್ಕು.

ಕಲ್ಲಾಡಿ ನೇತುಮಯೂ ಬಹಳ ನಿಶ್ಚಿಷ್ಟಸ್ಥಿತಿಯಲ್ಲಿದೆ; ಸಾಧಾರಣ ಮಳೆಯಲ್ಲೇ ತುಂಬಾ ಹೊಂಡಗಳುಳ್ಳದ್ದಾಗಿದೆ; ಬೋರ್ಡಿನವರು ಇತ್ತ ಗಮನಿಸುವರೇ?

ಕೆಲಂಜಿಗರು—ಜನೀಕ ಬ್ರಾಹ್ಮಣರ ಸಹಾಯ ಥ್ರವಾಗಿ ಒಂದು ಸಹಕಾರ ಸಂಘವು ಕೆಲಂಜಿಗಲ್ಲಿ ಮೇ ೩೦ ಶನೇ ಶನಿವಾರ ಶ್ರೀ ಕೃಷ್ಣಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಶ್ರೀಯುತರುಗಳಾದ ಪಿಳಿಕಲ್ಲು ಶಿವರಾಯರೂ, ಸಿ. ಕೃಷ್ಣ ನಾಯರೆರವರೂ ಸೀತಾರಾಮಯ್ಯನವರೂ, ಎ. ಎ ಪೈ ಮತ್ತು ಜ್ಞಾನು ರಾಯರೂ ಅಭ್ಯಾಸಿಸಲ್ಪಟ್ಟಿದ್ದರು. ಹವೀಕ ಬ್ರಾಹ್ಮಣ ಒಲ್ಲಿ ನಶೆಯಲಿರುವ ಪ್ರತಿಯೊಂದು ಬಡಕಾರ್ಯಗಳ ಪರ್ಚನ್ನು ಅಡಿಯ್ತು ಕಾಪ್ಟಗೆ ಕಡಿಮೆಮಾಡಲೇಕೆಂಬು ನಿರ್ಣಯವು ಮಂಜೂರಾಯಿತು. ಶ್ರೀ ಪಿಳಿಕಲ್ಲು ಶಿವರಾಯರು ಕಾಲೋಚಿತ ಭಾಷಣವನ್ನಾಡುತ್ತಾ, ಸಂಘ ಸಮಾಜದ ಉದ್ಧಾರಕಾರ್ಯಗಳಿಗೆ ಸಹಾಯ ಕೊಡುವ ಜತ ಸಹಕಾರಿಗಳಾಗಬೇಕೆಂದು ಉಪದೇಶಿಸಿದರು. ಆ ಮೇಲೆ ಶ್ರೀ ವಿ ಸುಬ್ಬರಾಯರನ್ನು ಅಧ್ಯಕ್ಷರನ್ನಾಗಿಯೂ, ಕೆ ಗಣೇಶಕಲ್ಲಪ್ಪಯ್ಯನವರನ್ನು ಕಾರ್ಯದರ್ಶಿಯೆಂತೆಯೂ ಸಹಾಯಕ ಕಾರ್ಯದರ್ಶಿರ ನ್ನಾಗಿಯೂ ಸಹಾಯರಾಯರನ್ನು ಸಹಾಯಕ ಕಾರ್ಯದರ್ಶಿರ ನ್ನಾಗಿಯೂ ಚುನಾಯಿಸಿದ ನಂತರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು. ಇದೀ ಜಿಲ್ಲೆಯೆಲ್ಲಿ ಇಂಥ ಸಂಘವೆ ಪ್ರಥಮವು ತೆರೆದಾಗಿರುತ್ತದೆ.

ಅಡ್ಯಾರು:—ಇದೇ ಕಂದ ತಾರೀಕು ೧೫ನೇ ಸೋ ಮವಾರ ದಿನ ದಿವಂಗತ ಆತ್ಮಾವರ ಸಂಕಪ್ಪ ಪೂಜರ ಜ್ಞಿಷ್ಠ ಪುತ್ರರಾದ ಶ್ರೀಯುತ ವೈದ್ಯನಾಥ ಪೂಜರು ಪೂ ಜರು ಆತ್ಮಾಭಿವೃದ್ಧಿಗೆ ತುತ್ತಾದುದನ್ನು ತಿಸಲು ವಿಷಾ ದವಿಸುತ್ತದೆ. ಪರಮಾತ್ಮನು ಮೃತರ ಆತ್ಮಕ್ಕೆ ಚಿರ ಶಾಂತಿಯನ್ನೀಯಲಿ.

From 8-6-36. Daily Two Shows at 5-30 & 9-30 P. M.

Sri Krishna Cinema Mangalore.

The Premier Perfect Talkie House

Takes Pride in announcing to the Public that they have Booked Another.

MASTER THRILLER PICTURE

EDUCATED WIFE

A Sagar Movietones. Master Shot of the Season.

A Bounding in thrills, Romances Love Devotion Revenge & Hatred

Featuring—Glooms & Enchanting Sabita with Romantic Youth of Screen Time Julmerchant

Followed by a good Combination of Yakoob, K C Dey Mehaboob and Lahtha.

The Glory of Indian Woman hood Virtues of Indian wife Told in a Modern tone

Miss anything but not this.

ಪುನಃ ಬರುವುದು; ಪ್ರಪಂಚವನ್ನೇ ದಿಗಿಲುಗೊಳಿಸಿದ ನೂತನ ಚಿತ್ರವು ಬರುವುದು.

ಮಿಸ್ ಸದಿತಾದೇವಿ ಮತ್ತು ಜಾಲ್ ಮರ್ಚೆಂಟ್ ಇವರಿಂದ ಅಭಿನಯಿಸಲ್ಪಟ್ಟಿರುವ

ಗೃಹಲಕ್ಷ್ಮೀ

ಎಂಬ ಚಿತ್ರವು ತಾ. 8-6-36ರಿಂದ ಶ್ರೀ ಕೃಷ್ಣ ಸಿನೆಮಾದಲ್ಲಿ ಪ್ರದರ್ಶಿಸಲ್ಪಡುವುದು.

ಸಬಿತಾದೇವಿಯ ಕುಶಲತೆ, ಗಾನ, ಮಾಧುರ್ಯ, ಇವೆಲ್ಲವನ್ನೂ ಪುನಃ ಕಾಣಲು ತಪ್ಪದಿರಿ. ಕೆ. ಸಿ ಡೇ ಇವರ ಕರ್ಣಾನಂದಕರ ಗಾಯನವು ಅಲಭ್ಯವೇ ಸರಿ. ಗೃಹಲಕ್ಷ್ಮಿಯಿಂದ ಗೃಹಲಕ್ಷ್ಮಿಯೊಬ್ಬಳು ಪಾವನೆಯಾಗುವಳು! ವೇಷ್ಯೆಯು ಪ್ರವೀಣತೆಯಾಗುವಳು. ಅವಳು ಮುಖಿದಾಗ ಮಾರಿಯಾಗುವ ನಾರಿಯಲ್ಲಿ ಆಕೆ ಆದರ್ಶಭಾರತ, ರಮಣಿ. ಗಂಡನ ಹೃದಯಭೇದಕ ನುಡಿಗಳನ್ನಾಲಿಸಿಯೂ ಸೈರಿಸಿದಳು. ಪಾದಪ್ರಹಾರವನ್ನು ಪಡೆದೂ ನಕ್ಕಳು. ಅಪ್ಪಯ್ಯರ ಪಾದಸೇವೆಯನ್ನೂ ಪತಿಸೇವೆ ಎಂದು ಮಾಡಿದಳು. ಅವಳೇ ಗೃಹಲಕ್ಷ್ಮಿ.

ಗಳು ಈ ಯೋಜನೆ ಮುಂದುವರಿಯಲು ಸಹಕರಿಸಬೇಕೆಂದು ಕೋರಿಕೊಳ್ಳುತ್ತೇವೆ. ಯಂತ್ರಗಳನ್ನು ಕೊಂಡುಕೊಳ್ಳಲು ಮತ್ತು ಕಟ್ಟಡಗಳನ್ನು ಕಟ್ಟಿಸಲು ಈ ಗ್ರಾಮಗಳಿಗೂ ಬಡಕ ಉಚಿತವಾಗಿ ಸಾಲವನ್ನು ಕೊಡಲಾಗುವುದು. ಈ ಮುಖ್ಯ ನಾಲ್ಕು ಗ್ರಾಮಾಭ್ಯುದಯ ಸೇವಾ ಪದ್ಧತಿಗಳಿಗೆ ಹೊಂದುಹೋಗಬಹುದಾದ ಇತರ ಕೆಲಸಗಳಿಗಾಗಿಯೂ ಹಣವನ್ನು ಕರ್ನಾಟಕ ಸಾರ್ವಜನಿಕರಿಂದ ಸಂಗ್ರಹಿಸಲಾಗುವುದು. ಸಾರ್ವಜನಿಕರಿಂದ ಸಂಗ್ರಹವಾಗುವ ಹಣವನ್ನು ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಠೇವಣಿಯಾಗಿ ಇಡಲಾಗುವುದು. ಈ ಯೋಜನೆಯ ಮೂಲ ಉದ್ದೇಶವೇ ಹಣ ಸಂಗ್ರಹಣೆಯಾಗಿರುವುದರಿಂದ ಸಾರ್ವಜನಿಕರು ಈ ಯೋಜನೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಹಣವನ್ನು ಕೊಡಬೇಕೆಂದು ಕೋರಿಕೊಳ್ಳುತ್ತೇವೆ.

ಈ ಯೋಜನೆಯ ಮುಖ್ಯ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗುವಂತೆ ಸಹಕಾರಿ ಕಾಯಿದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಈ ತಿದ್ದುಪಡಿಗಳನ್ನು ಮಾಡಲು ಸರ್ಕಾರವು ಈಗಾಗಲೇ ಕ್ರಮ ತೆಗೆದುಕೊಂಡಿದೆ. ಈ ತಿದ್ದುಪಡಿಗಳು ಜಾರಿಗೆ ಬಂದ ಕೂಡಲೇ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು.

ಈ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಹಕಾರಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದರಿಂದ ಸರ್ಕಾರವು ಈ ಕೆಲಸಕ್ಕಾಗಿ ಸಾಕಷ್ಟು ಸಂಖ್ಯೆಯಲ್ಲಿ ಸಿಬ್ಬಂದಿಯವರನ್ನು ನೇಮಿಸಲು ಏರ್ಪಾಡು ಮಾಡಿದೆ. ಈ ಸಿಬ್ಬಂದಿಯವರಿಗೆ ಸಹಕಾರ ತತ್ವಗಳಲ್ಲಿ ಮತ್ತು ಸಹಕಾರ ಸಂಘಗಳ ಕಾರ್ಯಕ್ರಮಗಳಲ್ಲಿ ತರಬೇತಿ ಕೊಡಲು ಏರ್ಪಾಡು ಮಾಡಲಾಗಿದೆ. ಈ ಸಿಬ್ಬಂದಿಯವರು ಹಳ್ಳಿಗಳಲ್ಲಿ ಸಂಚರಿಸಿ ಜನರಲ್ಲಿ ಸಹಕಾರ ಭಾವನೆಯನ್ನು ಬೆಳೆಸಲು ಮತ್ತು ಸಹಕಾರ ಸಂಘಗಳನ್ನು ಸ್ಥಾಪಿಸಲು ಸಹಾಯ ಮಾಡಲು ಏರ್ಪಾಡು ಮಾಡಲಾಗಿದೆ.

ಈ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಹಕಾರಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರಲ್ಲದೆ ಸಹಕಾರ ಸಂಘಗಳ ಕಾರ್ಯಕರ್ತರು ಮತ್ತು ಸಾರ್ವಜನಿಕರ ಸಹಕಾರವೂ ಬೇಕಾಗಿದೆ. ಈ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಹಕಾರಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರಲ್ಲದೆ ಸಹಕಾರ ಸಂಘಗಳ ಕಾರ್ಯಕರ್ತರು ಮತ್ತು ಸಾರ್ವಜನಿಕರ ಸಹಕಾರವೂ ಬೇಕಾಗಿದೆ. ಈ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಹಕಾರಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರಲ್ಲದೆ ಸಹಕಾರ ಸಂಘಗಳ ಕಾರ್ಯಕರ್ತರು ಮತ್ತು ಸಾರ್ವಜನಿಕರ ಸಹಕಾರವೂ ಬೇಕಾಗಿದೆ.

ಈ ಯೋಜನೆಯ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸಹಕಾರಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರಲ್ಲದೆ ಸಹಕಾರ ಸಂಘಗಳ ಕಾರ್ಯಕರ್ತರು ಮತ್ತು ಸಾರ್ವಜನಿಕರ ಸಹಕಾರವೂ ಬೇಕಾಗಿದೆ.

(ಕಸೀ ಪುಟದಿಂದ ಮುಂದುವರಿಯುದು)

ಹೊಬ್ಬರುಸಿಕ್ಕಿ ತಾವಾಗಿಯೇ ನನಗೆ ಈ ಕೆಲಸದಲ್ಲಿ ನೆರವಾಗಲು ಭರವಸೆ ಕೊಟ್ಟಿರುವರು.

'ಈಗ ನನಗೆ ತಮ್ಮಿಂದ ಆಗಬೇಕಾದ ಉಪಕಾರವೆಂದರೆ ನನಗೆ ತಮ್ಮ ಪರಿಚಯ ವಿರುವ ನಮ್ಮೂರ ಕಡೆಯವರೆಲ್ಲರ ಹೆಸರು ಗಳನ್ನು ದಯಪಾಲಿಸುವುದು. ತಮಗೆ, ತಮ್ಮ ವೈಧವ್ಯವೃತ್ತಿಯಿಂದಾಗಿ, ಹೆಚ್ಚಿನವರ ಪರಿಚಯ ವಿರಲು ಸಾಧ್ಯವಿರುವುದರಿಂದ ಬಹುಶಃ ತಮ್ಮಿಂ ದಲೇ ನನ್ನ ಮಗನ ತತ್ತೆಯಾಗುವುದೆಂದು ನನಗೆ ಭರವಸೆ ಕಾಣುವುದು, ಸ್ವಾಮಿ!'' ನಾರಾಯಣರಾಯರು ಮಾತು ನಿಲ್ಲಿಸಿ ನನ್ನನ್ನೇ ದೈನ್ಯದಿಂದ ದಿಟ್ಟಿಸತೊಡಗಿದರು.

ಅವರು ಬಯಸಿದಂತೆ ನಾನು ಅವರಿಗೆ ನನ್ನ ಪರಿಚಯದವರೆಲ್ಲರ ಪರಿಚಯ ಮಾಡಿ ಕೊಟ್ಟರೂ, ಅವರು ಎರಡು ತಿಂಗಳ ವರೆಗೆ ಪ್ರಯತ್ನಪಟ್ಟರೂ, ಅವರಿಗೆ ಮಗನ ಪತ್ತೆ ದೊರೆಯಲಿಲ್ಲ. ಕಡೆಗೆ ಬಹಳ ನಿರಾಕರಾಗಿ ತಲೆಯಮೇಲೆ ಕೈಯಿಟ್ಟುಕೊಂಡು, ಬಂದಂತೆಯೇ ಮುಂಗಳೂರಿಗೆ ಹಿಂದೆ ಹೋದರು.

ಜ

'ನೋಡುವಿ ಏನನ್ನು?' ನಾಮನಿಯು, ನಾನು ಮಾರ್ಗದಲ್ಲಿ ನಿಂತುಬಿಟ್ಟು. ಒಂದು ದೊಡ್ಡ ಮನೆಯ ಕಡೆಗೆ ನೋಡುತ್ತಿರಲು, ಕೇಳಿದನು.

'ಇತ್ತ ಬಾ. ಇದೇ ನಮ್ಮ ಗೋವಿಂದ ರಾಯನಿರುವ ಹೊಟೆಲು. ಅಂದು ನಾರಾ ಯಣರಾಯರೊಂದಿಗೆ ಬಂದು ನನ್ನ ಪರಿಚಯ ವನ್ನು ಮಾಡಿಕೊಂಡ ಬಳಿಕ ಆತನು ನನ್ನನ್ನೇ ಆತನ ವೈದ್ಯನಾಗಿ ಮಾಡಿಕೊಂಡಿರುವನು. ಅಂದಿನಿಂದಲೂ ಕುಡಿಯುವ ಚಟದಿಂದ ಗಳಿ ಸಿದ ರೋಗಗಳಿಗೆ ಆಗಿಂದಾಗ ಬಲಿಬೀಳು ತ್ತಿರುವನು ಈಚೆಗೆ ಕ್ಷಯರೋಗದಿಂದ ನರಳು ತ್ತಿರುವನು. ಈ ದಿನವೇನೋ ತನಗೆ ಬಹಳ ಉತ್ತಿನವಿರುವುದೆಂದೂ, ತನ್ನ ಕಡೆಗಾಲವೇ ಬಂದಂತೆ ಕಾಣುವುದೆಂದೂ, ತನ್ನನ್ನು ಒಮ್ಮೆ ಅವಶ್ಯವಾಗಿ ಬಂದು ನೋಡಬೇಕೆಂದೂ ಕೇಳಿ ಕೊಂಡಿರುವನು,' ಮನೆಯ ಮೆಟ್ಟಲನ್ನು ಹತ್ತುತ್ತಾ ಎಂದನು.

ನಾವು ಗೋವಿಂದರಾಯನ ಕೋಣೆಗೆ ಹೋಗಿ ನೋಡುವಾಗ ಅವನು ಒಂದುಮಂಚದ ಮೇಲೆ ಮಲಗಿಕೊಂಡಿದ್ದನು ನಮ್ಮನ್ನು ನೋಡುತ್ತಲೇ ಅವನು ಎದ್ದು ಕೂತುಕೊಳ್ಳಲು ಪ್ರಯತ್ನ ಮಾಡಿದನು. ಆದರೆ, ನಿತ್ರಾಣದಿಂ ದಾಗಿ, ಅವನಿಂದ ಕೈಗೂಡಲಿಲ್ಲ.

'ಕೂತುಕೊಳ್ಳಿರಿ! ನಾನು ಮಲಗಿದಲ್ಲಿಂ ದಲೇ ಮಾತಾಡಬೇಕಾಗಿದೆ ಕ್ಷಮಿಸಿ!' ಅವನು ಬಹು ಕ್ಷೀಣ ಸ್ವರದಿಂದ, ಬಹಳ ತ್ರಾಸ ಪಡುತ್ತಾ, ಎಂದನು.

'ಏನಾಗಿರುವುದು? ಎಷ್ಟು ದಿನವಾಯಿತು ಹೀಗಾಗಿ?' ನಾನು, ಅವನ ಕೈಯ ನಾಡಿ ಯನ್ನು ಪರೀಕ್ಷಿಸುತ್ತ, ಕೇಳಿದೆನು.

'ಸ್ವಾಮೀ' ಇನ್ನು ಉಗುವುದೇನಿದೆ? ಈ ದಿನ ಕಳೆಯಲಿಕ್ಕಿಲ್ಲವೆಂದು ನನಗೆ ಖಚಿತವಾ ಗಿದೆ. ಅದಕ್ಕಾಗಿಯೇ ನನ್ನ ಕೊನೆಯ ಒಂದು ಮಾತನ್ನು ಕಪುಗೆ ತಿಳಿಸಬೇಕೆಂದು ಬಯಸಿ ತಮ್ಮನ್ನು ದಡಿಸಿದೆ. ನನಗೆ ಇನ್ನು ವಿತರ ಚಿಕಿ ತ್ಸೆಯೂ ಬೇಡ. ಖಂಡಿತವಾಗಿಯೂ ಸಾಯು ವೆನೆನಿಗೆ ಅದರಲ್ಲಿಯಾಬುದುಕುವಬಯಕೆಯೇ ಇಲ್ಲದವನಿಗೆ, ಯಾಕೆ ಚಿಕಿತ್ಸೆ?' ಗೋವಿಂದರಾ ಯನು ನಾನು ಇಂಜೆಕ್ಷನ್ ನೀರಿಂಜನ್ನು ಕೈಯೊ ಳಗೆ ತೆಗೆದುಕೊಂಡುದನ್ನು ನೋಡಿ ಒಳಕ್ಷಪ್ಪ ದಿಂದ ಎಂದನು

'ಇದು ಚಿಕಿತ್ಸೆಗಾಗಿ ಅಲ್ಲ ನಿಮ್ಮ ಕೊನೆ ಯ ಗಳಿಗೆಯಲ್ಲಿ ಬಹಳ ಶಕ್ತಿಶರ ಒಂದಿರುವುದೆಂ ಬುದು ನನಗೆ ಮನವರಿಕೆಯಾಗಿರುವುದು, ನಿಮಗೆ ಮಾತನಾಡಲು ಸ್ವಲ್ಪ ಚೈತನ್ಯ ಬರಬೇ ಕಾದರೆ ಒಂದು ಇಂಜೆಕ್ಷನ್ ಕೊಡಬೇಕಾಗಿರು ವುದು. ಇದರಿಂದ ನೀವು ನಡುವ ತ್ರಾಸ ಸ್ವಲ್ಪ ಕಡಿಮೆಯಾಗುವುದು,' ನಾನು ಇಂಜೆ ಕ್ಷನ್ ಕೊಡುತ್ತ ಎಂದೆನು. 'ಸ್ವಲ್ಪ ಸಮಯ ವಿಶ್ರಾಂತಿ ಪಡೆಯಿರಿ. ಮತ್ತೆ ಮಾತನಾಡಬ ಹುದು.'

'ನಾನು ತಮ್ಮನ್ನು ಕರೆಯಿಸಿದುದು ತಮ್ಮಲ್ಲಿ ಒಂದು ದೊಡ್ಡ ಗುಟ್ಟನ್ನು ಹೇಳಿಕೊಳ್ಳು ವುದಕ್ಕಾಗಿ,' ಗೋವಿಂದರಾಯನು, ಸ್ವಲ್ಪ ವಿರಾಮನಪಡೆದು ಬಳಿಕ ಎಂದನು.

'ಹಾಗಾದರೆ ಇನ್ನು ಕದಮಾಡಬೇಡಿರಿ,' ನಾನು ಅವನ ನಾಡಿ ಪರೀಕ್ಷಿಸುತ್ತಾ, ಎಂದೆನು.

'ನಾನು ಮೊದಲು ತಮ್ಮ ಪರಿಚಯ ಮಾಡಿಕೊಂಡ ರೀತಿಯನ್ನು ಕಾವು ಮತಿಟಿರ ಲಿಕ್ಕಿಲ್ಲ!'

'ಹೇಗೆ ಮರೆಯಲಿ? ಪಾಪ, ಆ ಬಡ ನಾರಾಯಣರಾಯರ ನೆನವು, ಅವರ ಅಂದಿನ ಆ ಗೋಳಾಟವುಂದಾಗಿ, ಎಂದೆಂದಿಗೂ ಮರೆ ಯುವಂತಿಲ್ಲ.'

'ಆದರೆ ತಾವು ಕೋಸಿಸದಿದ್ದರೆ, ಎಂದೆಂದಿ ಗೂ ಮರೆಯದಂತಹ ಅದಕ್ಕಿಂತಲೂ ಮಹ ತ್ತರ ಮತ್ತೊಂದು ಸಂಗತಿಯನ್ನು ಹೇಳ ಕೊಳ್ಳಬೇಕೆಂದಿರುವೆನು.'

'ಕೋಪವೇಕೆ?'

'ನಾನು ತಮಗೆ ಮೋಸಮಾಡಿದ ಕೃತ ಘ್ನನು' ಅದಕ್ಕಾಗಿ.'

ಕ

'ಮೋಸ' ಯಾವ ವಿಷಯದಲ್ಲಿ?'

'ನಾನು ನನ್ನ ವಿಷಯವಾಗಿ ಸುಳ್ಳು ಪರಿ ಚಯ ಕೊಟ್ಟ ವಿಷಯದಲ್ಲಿ ಆದರೆ ನನ್ನ ಮನಸ್ಸನ್ನು ತೆರೆದು ನೋಡಿದಿ ಬೇರೆ ಎಲ್ಲಾ ಸಂಗತಿಗಳಲ್ಲಿ ಒಂದೇ ಒಂದು ಕಪಟ ವಿಚಾರ ವಿಲ್ಲ ನಾನು. ಹಾಗೆ ಮಾತನಾಡಲೇಬೇಕಾದುದು ಬೇರೆ ಉಪಾಯಾಂತರವಿಲ್ಲದುದರಿಂದ ನನ್ನನ್ನು ಕ್ಷಮಿಸಲಾರಿರಾ?'

'ಆದರೆ ಸುಳ್ಳು ಪರಿಚಯ ಎಂದಿರಲ್ಲ? ಹೇಗೆ?'

'ಆ ನಾವದ ನಾರಾಯಣರಾಯರು ಹುಡುಕುತ್ತಿದ್ದರಲ್ಲ, ತನ್ನ ಮಗನನ್ನು, ಅದೇ ಪಾತ್ರಂದಿ, ಚಂಡಾಲ ನಾನು!' ಗೋವಿಂದ ರಾಯನು, ಕಣ್ಣೊಳಗಿಂದ ಸ್ಫೀರ ಕಟಕುಗಳು ಉದುರುತ್ತಿರಲು, ಎಂದನು.

'ಏನು!!! ಅವರಿಗೆ ನಿನ್ನ ಗುರುತು ಸಿಕ್ಕಿ ಲಿಲ್ಲವೇ?' ನಾನು ದಂಗು ಬರಿದು, ಕೇಳಿದೆನು.

'ಗುರುತು ? ತಾವು ಮೊದಲಿನ ಸಲ ಕಂಡ ಬಳಿಕ ನನ್ನನ್ನು ನಡುವೆಎಂದೂ ನೋಡದೆ ಈ ದಿನತಿರುಗಿ ಕಂಡಿದ್ದರೆ ಗುರುತಿಸುತ್ತಿದ್ದಿರಾ?'

'ಅದು ನಿಜ. ಆದರೆ ಅವರನ್ನು ಹಾಗೇಕ ಗೋಳಾಡಿಸಿ ಕಳುಹಿಸಿದಿರಿ?'

'ಅಯ್ಯೋ, ನನ್ನ ಅವಸ್ಥೆಯೇ! ಅಂದು ನಾನು ಮುಂಬಾಯಿಯನ್ನುಬಿಟ್ಟ್ ಇಲ್ಲಿ ಬಂದ ವನು, ಮೊದಲು ಕೆಲಸವಿಲ್ಲದೆ, ಹೊಟ್ಟೆಗಾಗಿ ಎಂತೆಂತಹ ನಿಕೃಷ್ಟ ಕೆಲಸಗಳನ್ನು ಮಾಡ ಬೇಕಾಯಿತೋ ಪರಮಾತ್ಮನೇ ಬಲ್ಲ. ಆಗ ಒಂದು ವರ್ಷದ ವರೆಗೆ ಹೀನ ಅವಕ್ತನವರ ಸಂಗದವೇ ನನ್ನ ವಾಸವಿತ್ತು. ಸಂಗದೋಷ ದಿಂದ ನಾನು ಕ್ರಮೇಣ ಕುಡಿಯುವ ಚಟಕ್ಕೆ ತುತ್ತಾದೆನು [ಸಶೇಷ.]

ದುಃಖದ ವಾರ್ತೆ

ಮಂಗಳೂರಿನ ಅಧ್ಯ ಗೌಡ ಸಾರಸ್ವತ ಮನೆತನದ ಪರಂಗಿದ್ದ ಶ್ರೀ ಕೆ. ಪಿ. ರಾಮರಾವ್, ಬಿ ಎ, ಬಿ ಎಲ್‌ರ ವರು ನಿನ್ನೆ ಸಾಯಂ. ಗಂಟೆ ೨ಕ್ಕೆ ವೃದ್ಧಾಪ್ಯ ದೆಸೆಯಿಂದ ಸ್ವರ್ಗಸ್ಥರಾದರು. ಅವರು ಇತೀನಾ ಪ್ಯೈಸ್ಕೂಲಿನ ಮತ್ತು ಕೆನರಾ ಬ್ಯಾಂಕಿನ ಮೂಲದಲ್ಲಿ ಬಹಳವಾದ ಕಾರ್ಯಕಲಾಪಗಳನ್ನು ಧೈರ್ಯದಿಂದ ನಿರ್ವಹಿಸಿ ಅವರದು ಸಂಸ್ಥೆಗಳ ಸ್ಥಿಮಿತಕ್ಕೆ ಕಾರಣರಾಗಿದ್ದರು ಇವರ ಕುಟುಂಬದೊಡನೆ ನಾವು ಸಹಾನುಭೂತಿಸುತ್ತೇವೆ ಇವರ ಅತ್ಯಕ್ಕೆ ಕಾಂತಿಯೊಂದಲಿ ಪರಮಾತ್ಮನಲ್ಲಿ ಪ್ರಾರ್ಥಿಸು ತ್ತಿದ್ದೇವೆ.

ಜೀವನದಲ್ಲಿ ಒಂದೇ ಒಂದು ಚಿತ್ರವನ್ನು ನೋಡಬೇಕೆಂದು ಸಂಕಲ್ಪಿಸಿದ್ದರೆ ಅದು

ಸಂಸಾರ ನೌಕ

ಆಭಿನಯಕಲೆಯಲ್ಲಿ
ಕಥಾ ಸಂವಿಧಾನ ರಚನೆಯಲ್ಲಿ
ಫೊಟೊಗ್ರಾಫಿ ಮತ್ತು
ಸೆಟಿಂಗ್ಸಗಳು

ಸಮಸ್ತ ಕನ್ನಡಿಗರಿಗೆ ಅಭಿಮಾನಪೂರ್ವಕ ಸಮರ್ಪಣೆ

ಬಿ. ಆರ್. ಪಂತಲು	ಸುಂದರ
ಎಂ. ಎಸ್. ಮಾಧವ ರಾವು	ಮಾಧು
ಎಂ. ಮಾಧವರಾವ್	ದಿಕ್ಕಿ
ಬಾಲಕೃಷ್ಣರಾವ್	ಆಚಾರ
ಮಿಸ್ ಪದ್ಮ	ಸುಶೀಲ
„ ರಾಜಮ್ಮ	ಸರಳ
„ ಸರೋಜ	ಗಿರಿಜ



SAMSARANOUKA

ನಿಮ್ಮನಗರಗಳ ಭವ್ಯ ಮಂದಿರದಲ್ಲಿ ಪ್ರದರ್ಶಿಸುವ ಸುದಿನವನ್ನು ಎದುರುನೋಡಿ.

For Booking Apply to:- DEVI FILMS LIMITED, 501 P. T. Madras.

ಹಬಿ ಚಕ್ರವರ್ತಿಗಳ ಲಂಡನ್ ಪ್ರಯಾಣ.

ಇವರು ಲಂಡನಿಗೆ ತೆರಳುವುದು ಯಾವ ಉದ್ದೇಶ ದಿಂದೆ ಇವರು ತಮ್ಮ ಬ್ಯಾಲ್ಮರಲಿಂದ ಲಂಡನಿಗೆ ಪ್ರಯಾಣ ಪ್ರಾರಂಭಿಸಿದರು. ಎಡಿನ್‌ಬರೋಯಲ್ಲಿ ನ್ಯಾಯವನ್ನೊದಿರಿ ತಿನಿಕೆಗಳ್ಳುಲು, ಸ್ವದೇಶವನ್ನು ರಕ್ಷಿಸಲು, ತಾವು ಯುದ್ಧರೇಖೆಗೆ ಹೋಗುತ್ತೇನೆಂದು ಚಕ್ರವರ್ತಿಯರು ಮಾತು.

ಎಡಿನೀಯಾಕ್ಕೆ ಹೊಸ ರಸ್ತೆಗಳು.

ಎಡಿನಿಯಾದಲ್ಲಿ ಮಾರ್ಗೋಪಾಯ, ಕಟ್ಟಡಗಳ ರಚನೆ ಇತ್ಯಾದಿಗಳನ್ನು ರಚಿಸುವ ಒಂದು ಮಹಾ 'ಪಬ್ಲಿಕ್ ವರ್ಕ್ಸ್' ಕಾರ್ಯಕ್ರಮವನ್ನು ಇಟೆಲಿಯು ವೇಗದ ಕೈಕೊಳ್ಳುವುದು. ಇದಕ್ಕೆ ಧಾರಳ ದ್ರವ್ಯ ಬೇಕಾಮದರಿಂದ, ಇಟೆಲಿಯನಿರು ಇದಕ್ಕಾಗಿ ಐದು ಕೋಟಿ ರೂಪಾಯಿಗಳನ್ನು ಒಟ್ಟುಗೂಡಿಸಬೇಕಾಗಿ ನಿರ್ಧರಿಸಿರುವರು. ಇದನ್ನು ಶೀಘ್ರಗಿ ರೂಪದಲ್ಲಿ ತೆರಿಸುವರಂತೆ. ಅಡಿಸ್ ಅಬಾಬ ನಗರವನ್ನು ಒಂದು ಉದ್ಯಾನ ವನವಾಗಿ ಮಾಡುವರಂತೆ. ಈ ನಗರದಲ್ಲಿ ಅಗಲವಾದ ಮಾರ್ಗಗಳನ್ನು ರಚಿಸುವರಂತೆ.

ಪೆಲೆಸ್ಟೈನಿನ ದಂಗೆ.

ಇನ್ನೂ ಶಾಂತವಾಗಲಿಲ್ಲ. ಪೋಲೀಸರಿಗೂ ಅರಬಿಯರಿಗೂ ಬಹಳ ಜಟಾಪಟಿ ನಡೆಯುತ್ತದೆ. ಯೆಹೂದ್ಯರ ಮೇಲೆ ಬಾಂಬ್ ದಾಳಿ ನಡೆಯುತ್ತಿದೆ. ಅರಬಿಯರು ಬೆಂಕಿಉಂಡೆಗಳನ್ನು ಉಪಯೋಗಿಸುತ್ತಿದ್ದಾರೆ. ಹಿರ್ವಯೆಹೂದ್ಯ ವಿದ್ಯಾರ್ಥಿಯು ಮೃತನಾಗಿರುವನಂತೆ. ಎಲ್ಲಾ ಕಡೆಗಳಲ್ಲಿ ಭಯಂಕರ ದಂಗೆಯು ಪಡೆಯುತ್ತಿದೆ ಬಗ್ಗುದ್ದಿದ ಧಾರಳ ಸೈನ್ಯ ಸಂಗ್ರಹವನ್ನು ಪೆಲೆಸ್ಟೈನಿಗೆ ಕಳುಹಿಸಿಕೊಡುವ ಏರ್ಪಾಡಾಗಿದೆ

ಮತ್ತೊಮ್ಮೆ ಚೀನಾ-ಜಪಾನು ಸಂಗ್ರಾಮವಾಗುವುದೆ?

ಉತ್ತರ ಚೀನಾದಲ್ಲಿ ಜಪಾನೀಯ ಸೈನಿಕರು ಬಾರ ದಂತೆ ಚೀನಿಯರು ಕಡೆಮಾಡುತ್ತಿದ್ದಾರೆ ಆದರೆ ಜಪಾನೀ ಯರೂ ಇಲ್ಲಿಗೆ ಹೆಚ್ಚು ಹೆಚ್ಚು ಸೇನಾಸಮೂಹಗಳನ್ನು ಕಳುಹಿಸುವ ಪ್ರಯತ್ನವಾಡುತ್ತಿದ್ದಾರೆ. ಜಪಾನೀಯ ಸೈನ್ಯವನ್ನು ಒಯ್ಯುತ್ತಿದ್ದ ರೈಲು ಟೀನ್‌ಸ್ಟೀನ್-ಟಿಯಾಂಗೂ ರೈಲು ಮಾರ್ಗದಲ್ಲಿ ಒಂದು ಸೇತುವೆಯನ್ನು ದಾಟುತ್ತಿರು ವಾಗ, ಆ ಸೇತುವೆಯ ಮೇಲೆ ಬೊಂಬು ಬಿದ್ದು, ಸೇತು ವೆಯು ಕುಸಿದುಹೋಗಿ, ಸೈನಿಕರನ್ನು ಒಯ್ಯುವ ರೈಲೆಮ್ಮು ಮುಂದರಿಸಿದಂತಾಯಿತು. ಮೆಂಚೂಲಿಯಾದಲ್ಲಿ ನಡೆದ ಚೀನಾ ಜಾಪಾನು ಕದನಕ್ಕೆ ಈ ತರದ್ದೆ ಕಾರಣ ವಾಗಿತ್ತು. ಆದುದರಿಂದ ಈ ಮೇಲಿನ ಘಟನೆಯು ಇನ್ನೊಂದು ಚೀನಾ ಜಾಪಾನು ಯುದ್ಧಕ್ಕೆ ಕಾರಣ ವಾಗುವುದೆಂದು ಒಲವಾದ ವಾರ್ತೆ ಹರಡಿದೆ ಚೀನಾ ದಲ್ಲಿ ಜಪಾನೀಯರಿಗೆ ವಿರೋಧವಾಗಿ ಭಾರಿ ಚಳವಳಿಯು ನಡೆಯುತ್ತದೆ. ಸೇತುವೆ ಅನಾಹುತಕ್ಕೆ ವಿದ್ಯಾರ್ಥಿಗಳು ಕಾರಣರಂತೆ.

ಪಂಜಾಬಿನಲ್ಲಿ ಜವಾಹರಲಾಲರು.

ರಾಷ್ಟ್ರಭ್ರಮಣ ಶ್ರೀ ಜವಾಹರಲಾಲರು ಈಗ ಪಂಜಾಬಿನಲ್ಲಿ ಪ್ರವಾಸಗಯ್ಯುತ್ತಿದ್ದಾರೆ ಪಂಜಾಬಿನ ಗ್ರಾಮಗಳನ್ನು ಸುತ್ತಿಕೊಂಡು ಅಲ್ಲಿನ ಗ್ರಾಮಸ್ಥರ ಸ್ಥಿತಿ ಗತಿಗಳನ್ನು ತಿಳಿಕೊಳ್ಳುತ್ತಿದ್ದಾರೆ. ಅವರ ಭಾಷಣಗಳನ್ನು ಕೇಳಲು ಅವರು ಹೋದಲ್ಲಿ ಅಸಂಖ್ಯಾತ ಜನರು ನೆರೆ ತ್ತಿದ್ದಾರೆ. ಪಂಡಿತರ ಅನೇಕ ಕಡೆಗಳಲ್ಲಿ ಪ್ರಚಂಡ ಮೆರವಣಿಗೆಗಳಿಂದ ಸ್ವಾಗತೀಕರಿಸಿದರು. ಅಮೃತಸರದ ಸಂತ್ಸಾಲಿ ಎಂಬ ಗ್ರಾಮದಲ್ಲಿ ಭಾಷಣಮಾಡುತ್ತ "ಕಾಂಗ್ರೆಸ್ಸು ಅರ್ಥ ಹೊಟ್ಟೆ ತುಂಬಿದ ರೈತಾಪಿ ಜನರ ಸಂಸ್ಥೆ" ಎಂದರು. ಹಾಗೆಯೆ ಗುರುಜನ್‌ವಾಲದ ರಾಜ ಕೀಯ ಪರಿಷತ್ತಿನಲ್ಲಿ ಭಾಷಣಮಾಡುತ್ತಾ, ಕೋಮು ವಾರು ವಿರ್ವಾಹವನ್ನು ಖಂಡಿಸಿ "ಸ್ವಕಂಠ್ರ ಪ್ರತಿನಿಯಾದ ಯಾವನೊಬ್ಬನು ಕೋಮುವಾರು ನಿರ್ಣಯವನ್ನು ಅಂಗೀಕರಿಸುವುದಿಲ್ಲ. ಸೌಮ್ಯವಾದದ ಈ ನಮ್ಮ ವ್ಯಾಧಿಗಳೆಲ್ಲಾ ಪರಮೌಷಧ" ಎಂದು ಹೇಳಿದರು.

ಬೆಂಗಳೂರಿನಲ್ಲಿ ಮಹಾತ್ಮಾಜಿಯವರು.

ವಿಶ್ರಾಂತಿಗಾಗಿ ಕೆಲವಿವಸ ನಂದಿಬೆಟ್ಟದಲ್ಲಿದ್ದು, ಮಹಾತ್ಮಾಜಿಯವರು ಈಗ ಕೆಳಗಿಳಿದು, ಬೆಂಗಳೂರಿನ ಸಮೀಪ ದಲ್ಲಿರುವ ಚಿಲ್ಲರೆಗಳಲ್ಲಿ ಪ್ರಯಾಣಮಾಡುತ್ತಿದ್ದಾರೆ. ಬೆಳ್ಳ ಬಳ್ಳಾಪುರ, ತಿಪ್ಪಚೆಟ್ಟಿ, ಚಿಂತಾಮಣಿ, ಇತ್ಯಾದಿ ಸ್ಥಳ ಗಳನ್ನು ಸಂದರ್ಶಿಸಿ, ಕೆಲವು ಭಾಷಣಗಳನ್ನು ಮಾಡಿ ದರು. ಚಿಂತಾಮಣಿಯಲ್ಲಿ ಮೈಸೂರಿನ ಶ್ರೀಮನ್ಮಹಾ ರಾಜರ ಕುರಿತು "ಪ್ರಜೆಯೊಬ್ಬ ಮಹಾರಾಜರು ನಿಮಗೆ ಶ್ರೀಮನ್ಮಹಾರಾಜರ ಆದರ್ಶವನ್ನು ಸಾಧಿಸಬೇಕೆಂಬುದೆ ನನ್ನ ಆಶಯ" ಎಂದು ಅಭಿಪ್ರಾಯಪಟ್ಟರು. ಕೂಲಿಗಳ ಕೊಲೊನಿಗಳನ್ನು ಸಂದರ್ಶಿಸಿ, ಅವುಗಳ ಕುರಿತು ಬಹಳ ಆತ್ಮಸ್ತುತಿಯನ್ನು ಹೊಂದಿದರು.

ಭರತಖಂಡದಲ್ಲೆಲ್ಲಾ ಸ್ವರಾಜ್ಯದ ಕೂಗು ಕೇಳಿಸುತ್ತದೆ.

"ಭಾರತದ ಸಾಂವಿಧಾನಿಕ ಪರಿಸ್ಥಿತಿಯು ಏನೂ ಮಾರ್ಪಾಟಾಗಲೇ ಇಲ್ಲ. ಅದು ಇನ್ನೂ ಬ್ರಿಟಿಷ ದನಿಧ್ಯರ ಆಸ್ತಿಯಂತಿದೆ. ಕಂಗಾಲಾದ ಕೋಟ್ಯಾಂತರ ಭಾರತೀಯರು, ಈ ದನಾಢ್ಯರ ಗುಲಾಮರಾಗಿರುತ್ತಾರೆ. ಆದರೆ ಭರತಖಂಡವು ಸ್ವಂತಃಜ್ಞವನ್ನು ಪಡಕೊಳ್ಳಲು ಉದ್ಯೋಗವಾಗಿದೆ. ಅನೇಕ ಪ್ರತಿಭಾನಾಯಕರು, ಸ್ವತಂತ್ರ ಸಾಧನೆಯ ಶ್ರದ್ಧೆಗಳನ್ನು ಬಹಿರಂಗದರು ಎಲ್ಲಿ ನೋಡಿದರೂ ಸ್ವರಾಜ್ಯದ ಪ್ರಜ್ಞಾಗಾಗುತ್ತಿದೆ. ಕಾಂಗ್ರೆಸ್ ಅಧ್ಯಕ್ಷರ ಸೌಮ್ಯವಾದ ಸೂತ್ರಗಳ ಪ್ರಭಾವ ಎಲ್ಲೆಲ್ಲೂ ಹರಡುತ್ತಿದೆ" ಎಂಬ ಅಭಿಪ್ರಾಯವನ್ನು ಆಮೇರಿಕಾದ ಪ್ರಖ್ಯಾತ ವೃತ್ತಪತ್ರಿಕೆಗಳು ಎಂಬ ಪತ್ರಿ ಕೆಯು ಪ್ರಕಟಿಸಿರುತ್ತದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಬಜೆಟು ಅಧಿ ವೇಶನವು ಮೇಸ್ತ್ರಿ ತಾ. ತಿಂದ ಪ್ರಾರಂಭವಾಗಿರುತ್ತದೆ ಮಜ್ಯಾಸ ಗವರ್ನರರೆದ ಎಕ್ಸಿಸ್ ಪ್ರಭುಗಳು ಈ ಅಧಿವೇಶನಕ್ಕೆ ಚಿತ್ರಿಸಿದ್ದಾರೆ. ದಿವಾನರಾದ ಸರ್ ಮಿರ್ಜಾರವರು ಇಂದಿನಿಂದಲೆ ೪೦ ಮಿಲಿಯ ಹಣವನ್ನು ಕೈಗಳಿಸಲು ಪ್ರಯತ್ನಿಸುತ್ತಿದ್ದಾರೆ. ಕೃಷ್ಣ ರಾಜ ಪಿಯ ಚ್ಛಕ್ತಿಯ ಮತ್ತು ಪರಾಧಿಕಾರ ಕಾಯ್ದೆಗಳಿಗೆ ತಿದ್ದು ಪಡಿಗಳನ್ನು ಪ್ರಸ್ತಾಪಿಸಿದ್ದಾರೆ. ಮೈಸೂರು ರೈಲ್ವೆಗಳು ೬ ಭಧ್ರಾವತಿ ಕಬ್ಬಿಣ ಕುರಿತು ಉತ್ತಿನ ಕಾರ್ಖಾನೆ, ೮. ಮೈಸೂರು ಸಂಯುಕ್ತ ನದ ಸಕ್ಕರೆ ಕಾರ್ಖಾನೆ, ೫. ಶ್ರೀ ಚಾಮರಾಜೇಂದ್ರ ಶಾಲಾಕಯದ ನೀರು ಸರಬರಾಯಿ ಕಾಮಗಾರಿಗಳು, ೬ ಗಂಧದ ಎಣ್ಣೆ ಕಾರ್ಖಾನೆ, ೭. ಸಾಬೂನಿನ ಕಾರ್ಖಾನೆ, ೮. ರೇಷ್ಮೆ ಕೈಗಾರಿ, ೯. ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಶೋಪ್ ೧೦ ಹೊಗೆಸೊಪ್ಪಿನ ಕೈಗಾರಿ, ೧೧. ಹಿಂಗಾಣಿ ಕಾರ್ಖಾನೆ, ೧೨ ಸರಕಾರದ ವಿದ್ಯುಚ್ಛಕ್ತಿ ಕಾರ್ಖಾನೆ, ೧೩ ಇಂಡಸ್ಟ್ರಿಯಲ್ ಮತ್ತು ಟ್ರೈನಿಂಗ್ ಲಿಬಾರೆಟರಿ ಎಂಬ ಪಸ್ತುಗಳ ತಯಾರಿಯ ಮತ್ತು ಪಸ್ತು ಪರೀಕ್ಷೆ ಪ್ರಯೋಗಶಾಲೆ, ೧೪ ಮನೆಗಳಲ್ಲಿ ನಡೆ ಯಿಸಬಹುದಾದ ಕೈಗಾರಿಗಳು ಈ ಎಲ್ಲಾ ಕೈಗಾ ರಿಕೆಗಳಲ್ಲಿ ಅಭಿವೃದ್ಧಿ ಇದೆ ಎಂದು ದಿವಾನರ ಭಾಷಣ ದಿಂದ ತಿಳಿಯಬರುತ್ತದೆ.

ಎಡಿನೀಯಾಕ್ಕೆ ಹೊಸ ರಾಜಶಾಸನ.

ಎಡಿನೀಯಾ, ಎರಿಟ್ರಿಯಾ, ಇಟೆಲಿಯಾಸ ಸೋಮಾ ಲಿಲೆಂಡ್ ಇವುಗಳನ್ನೊಳಗೊಂಡು ಆಫ್ರಿಕಾದಲ್ಲಿ ಇಟೆ ಲಿಯಾಸ ರಾಜ್ಯತ್ವ ಸ್ಥಾಪನೆಯಾಗಿವುದು. ಈ ಸಮಸ್ತ ರಾಜ್ಯತ್ವ ವೈಸರಾಯನ, ಅಧೀನದಲ್ಲಿದ್ದು, ಇವನ ಕೈಕೆಳಗೆ ೫ ಮಂದಿ ಗವರ್ನರರಿರುವರು. ದೈನಂದಿಯ ಗೊಂದು ಆಡಳಿತ ಮಂಡಳಿಯಿರುವುದು. ಇವರಲ್ಲಿ ೬ ಮಂದಿ ಇಟೆಲಿಯಾನ ಸದಸ್ಯರು, ೬ ಮಂದಿ ನೇಟಿವ್ ಸದಸ್ಯರು (ಶ್ರೀಮಂತರಾಗಬೇಕು) ಈ ಸದಸ್ಯರುಮ್ಮ ವೈಸರಾಯರೇ ಆರಿಸುವರು. ಅಡಿಸ್ ಅಬಾಬ, ಇಟೇಲಿ ಯಾನ್ ಆಫ್ರಿಕಾ ರಾಜ್ಯದ ನವಡೆಲ್ಲಿಯಾಗುವುದು. ಇದೊಂದು ಪ್ರತ್ಯೇಕ ಗವರ್ನರನ ಆಡಳಿತಕ್ಕೊಳಪಡಿಸಿ ದರು. ಗವರ್ನರರ ಪ್ರಾಂತ್ಯಗಳು, ಎರಿಟ್ರಿಯಾ (ಮುಖ್ಯ ಪಟ್ಟಣ ಅಸ್ಮಾರ) ಅಂಹಾರ (ಮುಖ್ಯ ಪಟ್ಟಣ ಗೊಂ ಡಾರ್) ಗಲ್ಲಾಸಿಂಧ್ (ಮುಖ್ಯ ಪಟ್ಟಣ ಜೀರು) ಹರಾರ್ (ಮುಖ್ಯ ಪಟ್ಟಣ ಹರಾರಿ) ಸೋಮಾಲಿ ಪ್ರದೇಶ (ಮುಖ್ಯ ಪಟ್ಟಣ ಮೋಗದಿಸಿಯೋ).

ಹಿಂದೂ ದೇಶದ ಬಡತನ.

ಶ್ರೀ ಜವಾಹರಲಾಲರಾ ನೆಹರುಗಳು ಇತ್ತೀಚೆಗೆ ಪ್ರಕಟ ಪಡಿಸಿದ ಹಿಂದೂ ದೇಶದ ಬಡತನ ಕುರಿತು ಅಭಿಪ್ರಾಯಗಳ ಕುರಿತು, ಸರ್ ಚಿಮನ್‌ಲಾಲ ಸಿಟಲ್‌ವಾದರು ಹಿಂದೂ ದೇಶದ ಬಡತನಕ್ಕೆ ಸರಕಾರವೆ ಕಾರಣ ವೆಂದೂ, ಭೂಕಂಡಾಯರ ಬಡತನಕ್ಕೆ ಮತ್ತು ವಿದ್ಯಾವಂತರ ಮಧ್ಯೆ ತರಗತಿಕತೆಯವರಲ್ಲಿ ನಿರುದ್ಯೋಗವು ಇವತ್ತಿಗೆ ಬಹಳ ಸಮಯದಿಂದ ಇದುತ್ತಿದೆ ಆದರೂ ಯಾವ ದಾದರೂ ಫಲಿತಾಂಶ ಸಿಕ್ಕುವ ರೀತಿಯಲ್ಲಿ ಇವುಗಳ ನಿವಾರಣೆ ಕುರಿತು ಯಾವತ್ತೂ ಪ್ರಯತ್ನಗಳನ್ನು ಮಾಡಲಿಲ್ಲವೆಂದರು. ಆದರೆ ಸರ್ ಚಿಮನ್‌ಲಾಲರಂತಹ ಮಹಾನೀಯರು ನರಳುವ ಬಡ ಭಾರತೀಯರಾಗಿ ಮೇ ಲಿನ ವಿಚಾರದಲ್ಲಿ ಸರಕಾರವನ್ನು ಒತ್ತಾಯಪಡಿಸಬಲು ವಿತ್ತು, ನಡರಂಜಲಾಸನವನ್ನು ಯಾವತ್ತು ರೀತಿಗಳಲ್ಲಿ ಮೇ ಲಿನ ಸ್ಥಿತಿಯನ್ನು ಮಾರ್ಪಾಡುಮಡಿಸಲೆಂದೊಲ್ಲಿದೆಯು ಇದ ರಿಗೆ ತೆಳಿದೆ ಇದೆ. ಆದರೂ ಈ ಕುರಿತು ಈ ಮಹಾನೀಯರು ಯಾವತ್ತು ಪ್ರಯತ್ನಗಳಿಗೆಳಸ್ಸು ಮಾಡಿದ್ದಿಲ್ಲ ಆದುದರಿಂದ ಇವರ ಅಭಿಪ್ರಾಯದಿಂದ ಯಾವ ಸಾರ್ಥಕವಾಗುವುದು?

ಹರಿಜನರಿಗೆ ಯೋಗ್ಯಸ್ಥಾನವು ದೊರಕುವುದೇ?

ಹರಿಜನರು ಹಿಂದೂ ಧರ್ಮವನ್ನು ತ್ಯಜಿಸಿ, ಕೆಲುಗೆ ಹೊಕೊಡುವ ವೇಳೆಯಾದು ಮತವನ್ನು ಅಚರಿಸುವರು ಎಂದು ಡಾ! ಅಂಬೇದ್ಕರರು ಆಡಿದ ಮಾತುಗಳಂತಾಗಿ ಭೂ ಇಂ ಸ್ಕೋಟ್ಲೆಂಡ್‌ನವರಲ್ಲಿ ಒಂದು ಚೀನ ನವು ಉಂಟಾಗಿ, ೫೦ ಮಿಲಿಯ ಹಿಂದೀಯ ಹರಿಜನರಿಗೆ ಸ್ವರ್ಗ ದೊರಕಿಸುವ ಪ್ರಯತ್ನಗಳು ಈಗಾಗಲೇ ಪ್ರಾರಂ ಭವಾಗಿದೆ. "ನಾವು ಇನ್ನಾಸ್ಟೆ ೧೫೦ ವರ್ಷಗಳಿಂದ ಹಿಂದೂದೇಶಕ್ಕಾಗಿ ಮಾಡಿದ ಪ್ರಾರ್ಥನೆಗೆ ತಕ್ಕ ಫಲ ಸಿಕ್ಕಿದಂತಾಗಿದೆ" ಎಂದು ಈ ಚರ್ಚಿನ ಹಿರ್ವ ಪ್ರಸಾದಕ್ಷರ ಮಾತು ೬೦ ಮಿಲಿಯ ಆತ್ಮಗಳಿಗೆ ಮುಕ್ತಿ ತರುವುದು ನಿಜವಾಗಿಯೂ ಒಂದು ಮಹಾ ಕಾರ್ಯವೇ ಸರಿ. ಆಲ್ಲದೆ ಅವರ ದೆಸೆಯಿಂದ ಭಯಂಕರ ರಾಜಕೀಯ ಬದಲಾವಣೆಗಳೂ ಆಗುವುವು. ಆದರೆ ಚೊಚ್ಚಿಗಳಂತೆ ಹಿಂ ದೂ ಹೊರಡುವ ಮೊದಲೇ ಈ ಮಿಶನರಿಗಳು ಭೂಂ ಗಳ ಲೆಕ್ಕ ಹಾಕಿದಂತೆ ಕಾಣುತ್ತದೆ. ಆದಲ್ಲಿ ಮೈಚಣ್ಣ ಆಗುಗಿರುವ ಈ ಹರಿಜನರಿಗೆ ಸಮಾಜದಲ್ಲಿ ಬೇರೆ ಜಾತ ಸ್ಥಾನವಿತ್ತು ದೊರಕುವುದೆಂದು ಈ ಮಿಶನರಿಗಳು ಗ್ಯಾರಂಟಿ ಕೊಡಬಲ್ಲರೇ?

ಭಯಂಕರ ವೃತ್ತಾಸ

ಫ್ರಾನ್ಸಿನಲ್ಲಿ ಕೆಲವು ದಿವಸಗಳ ಹಿಂದೆ ಮಹಾ ಮನಾ ನಡೆ ನಡೆದು, ಸೊಷಲಿಸ್ಟರು ಮಂತ್ರಪಾದಿಗಳು ಅಧಿಕಾರಕ್ಕೆ ಬಂದಿದಾವರು. ಸೊಷಲಿಸ್ಟ ಪಕ್ಷಗಳಕ್ಕೆ ಮಹಾ ಆಧಾರವೆನಿ ಸುವ ಟ್ರೇಡ್ ಯೂನಿಯನ್ ಸಂಘಿದವರು, ಸರಕಾರವು ವೇಗದೆ ನಿರುದ್ಯೋಗ ನಿವಾರಣೆಯ ಕಾರ್ಯವನ್ನು ಕೈಕೊಳ್ಳಬೇಕೆಂದು ಸಲಹೆಕೊಟ್ಟಿರುತ್ತದೆ. "ಪಬ್ಲಿಕ್ ವರ್ಕ್ಸ್" ಕಾರ್ಯಕ್ರಮಗಳನ್ನು ನಡೆಯಿಸುವರೆ ಫ್ರೇಂಚ್ ಒಫ್ ಫ್ರಾನ್ಸಿನವರು ೫೦೦ ಮಿಲಿಯ ಬೇಕೆಂತು ಸಾಲ ವನ್ನು ಕೊಡಬೇಕಾಗಿ ಅಪ್ರಿಹೆಗಳು ಹೊಂಟಿವೆ. ಪಬ್ಲಿಕ್ ವರ್ಕ್ಸ್ ಕಾರ್ಯಕ್ರಮದಿಂದ ಅನೇಕರಿಗೆ ಉದ್ಯೋಗ ದೊರಕಬಹುದು. ಆದರೆ ಹಿಂದೂ ದೇಶದಲ್ಲಾ ಗುವ ನಿರುದ್ಯೋಗ ನಿವಾರಣೆಯೊಂದಿಗೆ ಹೋಲಿಸಿದರೆ, ಈ ಎರಡು ದೇಶಗಳಲ್ಲಿ ಏರುದ್ಯೋಗದ ಕುರಿತಾಗಿ ನಡೆ ಯುವ ಕಾರ್ಯಕಲಾಪಗಳಲ್ಲಿ ವೈತ್ಯಾಸದ ಒಂದು ಸಮುದ್ರವೇ ಕಾಣಸುವುದು. ಅಲ್ಲಿನವರಿಗಾದ್ಯರು ಈ ಯೋ ಜನೆಗಳಿಂದ ದಿಗಿಲುಗೊಂಡು ತಮ್ಮ ಹಣವನ್ನು ಹೊರಗಿನ ದೇಶಗಳಲ್ಲಿ ಸಂಚಯಿಸಲು ಪ್ರಯತ್ನಿಸುತ್ತಿದ್ದಾರಂತೆ

ಶ್ರೀ ಸಭಾಸ್ವಂಯುಮೋಷಾಗೆ ಕಾರ್ಯಾರಂಭಿಸಿ ಹವಾ ಗುಣವು ಒಳ್ಳೆತ್ತಿರಾದರೂ ಅವರಿಗೆ ಕಾಲಕಾಲಕ್ಕೆ ಸರಿ ಪ್ರಮತ್ಯಯಗಾಗುವುದಿಲ್ಲವೆಂದು ತಿಳಿದುಬರುತ್ತದೆ ಇವರ ಸಂಚಾಲನದ ಕುರಿತು ಸರಕಾರದಿಂದ ಯಾವುದೂ ಆಜ್ಞೆಗಳು ಬಂದಿಲ್ಲ.

ಕಲ್ಕತ್ತಾದಲ್ಲಿ ಗ್ರೀಕ್ ಚರ್ಚ್ ಶಾಲೆಯ ಮಿಸ್ ಮ್ಯಾಕ್ಲಿಯಾನ ಪೋಟೋಗ್ರಾ ಎಂ. ಎ. ಪಿ. ಹೆಚ್. ಡಿ. (ಕ್ಯಾಂಟಿಬ್) ಇವರು ಹಿಂದೂಧರ್ಮಕ್ಕೆ ಮತಾಂತರ ಹೊಂದಿರುವರು. ಈಕೆಯ ಹೊಸ ನಾಮವು ಶ್ರೀಮತಿ ಸಾವಿತ್ರಿದೇವಿ ಎಂದು.

ಅಬ್ದುಲ್ಲಾ ಗಾಂಧಿ.

ಮಹಾತ್ಮಾಜಿಯವರ ಹಿರೇ ಪುತ್ರರಾದ ಹಿರಾ ಲಾಲ ಗಾಂಧಿಯವರು ಕೆಲವು ದಿವಸಗಳ ಹಿಂದೆ ಮುಸ್ಲಿಮು ಧರ್ಮವನ್ನು ಅಚರಿಸಿದರು. ಎಲ್ಲಾ ಮತಗಳಿಗಿಂತ ತನಗೆ ಇಸ್ಲಾಮು ಧರ್ಮವು ಶ್ರೇಷ್ಠವಾದುದೆಂದು ಕಂಡು ಬಂದಿದೆ ಎಂದೂ, ತಾನು ಇಸ್ಲಾಮು ಧರ್ಮಾದಲ್ಲೇ ಮುಂದಕ್ಕೆ ಕಾಲಹರಣ ಮಾಡುವೆನೆಂದೂ, ಮುಸ್ಲಿಮ ನಾಗಿಯೇ ಸಾಯುವೆನೆಂದೂ, ೫೦೦ ಮುಸ್ಲಿಮರು ನೆರೆದು ಒಂದು ಸಭೆಯಲ್ಲಿ ಬಹಳ ಗಂಭೀರ ಭಾಷಣ ಮಾಡಿದರು. ಈ ವಾರ್ತೆಯನ್ನು ತಿಳಿದ ಮಹಾತ್ಮಾಜಿ ಯವರು ಹೀಗೆಂದರು. "ಇದು ದರ್ಮ ಪ್ರಪಂಚದ ನನ್ನ ಹಿರೀ ಮಗನಾದ ಹಿರಾಲಾಲ ಗಾಂಧಿಯವರು ಮುಸ್ಲಿಮು ಮತಕ್ಕೆ ಸೇರಿರುವೆನೆಂದು ನನಗೆ ವರ್ತಮಾನ ಪತ್ರಿಕೆಗಳ ಮೂಲಕ ತಿಳಿದಿರುವುದು. ಇಸ್ಲಾಮು ಮತವು ನನ್ನ ಮತ ದಷ್ಟೇ ಶ್ರೇಷ್ಠವಾದುದೆಂದೂ, ಪವಿತ್ರವಾದುದೆಂದೂ ನನ್ನ ಅಭಿಪ್ರಾಯ. ನಿಜವಾಗಿ ಧರ್ಮ ವಿಚಾರಕ್ಕಾಗಿ ಇವನು ಈ ಮತವನ್ನು ಮನಃಪೂರ್ವಕ ಸೇರಿದ್ದಾದರೆ, ನನಗೆ ಇವನೊಡನೆ ಯಾವತ್ತೂ ಜಗಳವಿರುವುದಿಲ್ಲ. ಆದರೆ, ಇವನು ಮತ ಬದಲಾಯಿಸಿದ್ದುದು ಧರ್ಮ ವಿಚಾರ ಕ್ಕಾಗಲ್ಲ. ಬರೇ ಸ್ವಾರ್ಥ ಬಾಧಿಸಲು"

ಅಂಡಮಾನ ದ್ವೀಪಗಳ ಕಾರಾಗೃಹಗಳ ಮೇಲೆ ವರದಿಮಾಡಲು ಒಂದು ಸಮಿತಿಯು ರಚನೆಯಾಗಿರು ವುದು. ಈ ಸಮಿತಿ ಅಂತಾಮಾನಗಳನ್ನು ಸಂದರ್ಶಿಸಿ, ತಮ್ಮ ವರದಿಯನ್ನು ಸಿದ್ಧಪಡಿಸುವುದಕ್ಕೆ.

ಮಿ! ಥಾಮ್ಸ್‌ರವರು ಅಪರಾಧಿಗಳೆಂದು ನ್ಯಾಯ ಸಮಿತಿಯ ನಿರ್ಧಾರ

ಬ್ರಿಟಿಷ ಬಜೆಟ್ಟು ಪಾಸಾಗುವ ಮೊದಲೇ ಅದರ ರಹಸ್ಯಗಳು ಕೆಲವರಿಗೆ ತಿಳಿದುಹೋಗಿದ್ದುವು ಇದರಿಂದ ಅನೇಕ ಸಿರಿವಂತ ಜನರಿಗೆ ಹಣಮಾಡಲು ಅವಕಾಶವು ದೊರಕಿದ್ದಿತು. ಹೀಗೆ ಬಜೆಟಿನ ರಹಸ್ಯವು ಮೊದಲೇ ಪ್ರಕಟವಾಗುವುದು ನ್ಯಾಯವಲ್ಲ ಈ ರಹಸ್ಯವು ಹೇಗೆ ಹೊರಬಿದ್ದುವು ಎಂಬುದನ್ನು ಕಂಡುಹಿಡಿಯಲು ಒಂದು ಸಮಿತಿಯನ್ನು ರಚಿಸಿದ್ದರು ಸಿಸಿಲ್ ಸ್ಪ್ರಿಂಗರವರ ಮೇಲೆ ಕೆಲವರಿಗೆ ಸಂಶಯವು ಹುಟ್ಟಿತು. ಸಸಾಹಸು ಕಾರ್ಯ ದರ್ಶಿಗಳಾದ (ಈಗ ಬಜೆಟ್ಟಾದರೆ) ಮಿ! ಥೋಮ್ಸರು ಇವರಿಗೆ ಹೊಸ್ಟೆಗಾರರೆಂದು ವಾರ್ತೆ ಹರಡಿತ್ತು. ಇದರಿಂದಲೇ ತಮ್ಮ ಹುದ್ದೆಗೆ ಅವರು ರಾಜಿನಾಮೆಯನ್ನಿತ್ತರು ಪ್ರಧಾನ ಸಮಿತಿಯು ತಮ್ಮ ಕಾರ್ಯಕಲಾಪಗಳನ್ನು ಮುಗಿಸಿ ಸಿಸಿಲ್ ಸ್ಪ್ರಿಂಗರವರು ನಿರಾಪರಾಧಿಗಳೆಂದೂ, ರಹಸ್ಯಗಳು ಹೊರಬೀಳಲು ಮಿ! ಥೋಮ್ಸರೇ ಕಾರಣ ರೆಂದೂ ತೀರ್ಮಾನಮಾಡಿರುವುದು.

ಶ್ರೀ ಜವಾಹರಲಾಲರು ವಿಶ್ರಾಂತಿ ಗೊಳ್ಳುತ್ತಿದ್ದಾರೆ

ಗಂಟಲುನೋವಿನ ಪ್ರಯುಕ್ತ ಶ್ರೀ ಜವಾಹರಲಾಲ ನೆಹರುಗಳು ಪಂಜಾಬಿನ ತಮ್ಮ ಕಾರ್ಯಕ್ರಮಗಳ ನೆಲ್ಲಾ ಏಪ್ರಿಲ್‌ವರೆಗೆ ನಿಲ್ಲಿಸಿಬಿಟ್ಟಿರುತ್ತಾರೆ. ಹೀಗ ಇವರೊಂದಿಲ್ಲ ಸಂಪೂರ್ಣ ವಿಶ್ರಾಂತಿಯನ್ನು ಪಡಕೊಳ್ಳುತ್ತಿದ್ದಾರೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ರಾಜಿನಾಮೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ರಾದ ಶ್ರೀಮಾನ್ ಗಂಗಾಧರರಾವ್ ದೇಷಕಾಂಡಿಯವರು ಆಸಾಕಲೀಯ್ಯದ ಏಮಿತ್ತ, ತಮ್ಮ ಅಧ್ಯಕ್ಷ ಪದ ವಿಗೆ ರಾಜಿನಾಮೆಯನ್ನಿತ್ತಿರುವರು.

ಚೀನಾ-ಜಪಾನು ಯುದ್ಧವ

ಶೀತದಿಂದ ದೂರವಾಗಿರಿ

ಶೀತವು ಶೀನುಗಳಿಗೂ, ಕೆಮ್ಮುಕ್ಕೂ ಉಗ ದುಸ್ಥಾನವಾಗಿದೆ ಇದರಿಂದಾಗಿ ಯಾವಾ ಗಲು ಕಣ್ಣುಗಳು ನೀರಿನಿಂದ ತುಂಬಿಬಿಡು, ಭಾಸವಾಗಿಯೂ, ತಲೆಭಾರವೂ ಆಗುವುದು ಶ್ವಾಸನೀಯೆ ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಈ ತೊಂದರೆಗಳನ್ನೆಲ್ಲಾ ನೀಗಿರಿ ಪೆಪ್ಸ್ ಗುಳಿ ಗೆಗಳ ರುಚಿಕರವೂ ವಿಷಹಾರಿಯೂ ಆದ ನೊರೆಯು ಶ್ವಾಸಕೋಶಗಳನ್ನು ಹೊಕ್ಕ ಅಲ್ಲಿ

ರುವ ಕಫದ ರೋಗಾಣುಗಳನ್ನು ನಾಶವಡಿಸುತ್ತದೆ ಇದರಿಂದಾಗಿ ನಿಮಗೆ ಸೌಖ್ಯವು ಲಭಿಸುವುದು ಈಗಲೇ ಒಂದು ಸೀಸೆ ಪೆಪ್ಸ್ ಗುಳಿಗೆಗಳನ್ನು ಪಡೆ ಯಿರಿ ಕೆಮ್ಮು ಗಂಟಲು ನೋವು, ಎದೆನೋವು ಶೀತ ಜ್ವರಗಳನ್ನೆಲ್ಲಾ ಹೋಗ ಲಾಡಿಸುತ್ತದೆ ಪೆಪ್ಸ್ ಗುಳಿಗೆಗಳು ಅಂದವಾದ ಸೀಸೆಗಳಲ್ಲಿ ಸೀಸೆಯೊಂದಕ್ಕೆ ರೂ ೨೦೦ ಮಾತ್ರಲ್ಲರುತ್ತದೆ

ಸಜಂಟರು -ಧಾಧಾ ಎಂಡ್ ಕಂಪೆನಿ, ಬಿ ಟಿ ದಾಸು

ಪೆಪ್ಸ್ PEPS

ನಿಮ್ಮ ಜಾಹೀರಾತನ್ನು
ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

ನೀವು ಎಂದಾದರೂ ಬಿಹಾರ್ ರಸಾಯನಿಕ ವೈದ್ಯಶಾಲೆಯಕೇಶಪುಷ್ಪಸಾರಕೂಡಿದ ಮಹಾ ಭೃಂಗರಾಜತೈಲ್ಯ ಉಪಯೋಗಿಸಿರುವಿರೋ?

ನಿಮ್ಮ ಬೋಳು ತಲೆಯನ್ನು ರಿಪೇರಿ ಆಗಬೇಕೋದಿಂದ ವಿಷ್ಣುವಾದ ಕೂದಲಿನಿಂದ ರಕ್ಷಿಸ ವುದು ಅನೇಕರು ಕೂದಲು ಉದುರುವದರಿಂದ ಮುರುಕಪಡುವರು ಅಂಥವರು ಒಂದು ಸೀಸೆ ಮೇಲೆ ಕಾಣಿಸಿದ ತೈಲವನ್ನು ಉಪಯೋಗಿಸಿ ದಿನದಿನಕ್ಕೂ ಉದುರುವ ಕೂದಲಿಗೆ ತಡೆಮಾಡಿ ಬಂಧುಮಿತ್ರರಿಂದ ಶ್ಲಾಘಿಸಲ್ಪಡಿರಿ

ಇದು ಪ್ರತಿ ದಿನದ ಲೇಪನೆಯಿಂದ ಉದುರುವಿಕೆಯುವ ಕೂದಲನ್ನು ತಡೆಕಟ್ಟುವದು ವಿಷ್ಣುವಾಗಿ ಬೆಳೆದು ಕೂದಲಿಗೆ ಸಲ್ಪನೆಯನ್ನು ಕೊಟ್ಟು ಆಕರ್ಷಿಲ್ಲದ ನರಕ ಕೂದಲು ಕಪ್ಪಾಗುವದು ಇದು ಶಾಸ್ತ್ರೋಕ್ತವಾಗಿ ತಯಾರಿಸಿದುದರಿಂದ ಕಡಿ ತಿರುಗುವಿಕೆ ಬಿಳಿ ಕೆನ್ನೆ ನೋವು ಕಣ್ಣು ಮಂದು ಸ್ಮರಣಶಕ್ತಿ, ಇವುಗಳಿಗೂ ಗುಣವಾಗುವದು ಇನ್ನಷ್ಟಿಕ ಕೆಲಸದ ಭಾರದಿಂದಾ ಸ್ತ್ರೀಯರಿಗೂ, ಬೇಸಿಗೆ ಕಾಲಕ್ಕೆ ವಿಶೇಷವಾಗಿದೆ ಸೀಸೆ ೧೪ ೦-೫-೦ ವಿಳಾಸ —Behar Chemical Works,

SREE GAURANGA BHAVAN, BHAGALPUR.

ಸಜಂಟರು— ಷಾ ಕಂಪೆನಿ, ಮಂಗಳೂರು, ದ. ಕ.

Wanted

active partners on co operative basis educated young men for employment in an agricultural and industrial colony on a monthly allowance of Rupees 7 8-0 Cash security of Rs 100/ is essential along with the applications to

Kanjarpane Gopalkrishnaya,
Sullia Post South Kanara

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ
ಹೊಸ ರಾಶಿ ಅಕ್ಕಿ	3— 4	3— 0
ಹೊಸ ಮ್ಯಾಸ	3—10	4— 8
ಗುಮ್ಮು ಸುಗ್ಗಿ	3— 6	3—12
ಉಡುಪಿ ಅಪ್ಪರ್ ಬೆಲ್ಲಗೆ	4— 0	1— 8
ರಂಗೂನು ಬೆ ಗೋ ಗಂಡ್ಡೆ	6— 4	7— 0
ಎಲ್ಲೂರು ಬೆ ಮು ಗಂಡ್ಡೆ	4— 4	4— 8
ಗೋವಿ ಗೋಚೆ ಗಂಡ್ಡೆ	8 — 8	10— 4
ತೊಗರಿ ಗೋಚೆ ಗಂಡ್ಡೆ	9 —0	9 — 8
ಹುರುಳಿ ಗೋಚೆ ಗಂಡ್ಡೆ	5— 4	5 —12
ಕಡಲೆ ಗೋಚೆ ಗಂಡ್ಡೆ	7 — 4	9 — ೯
ತೊಗರಿಬೇಳೆ ಗೋಚೆಗಂಡ್ಡೆ	11— 0	15— 8
ಉದ್ದು ಗೋಚೆ ಗಂಡ್ಡೆ	9— 8	10 — 0
ಹೆಸರು ಗೋಚೆ ಗಂಡ್ಡೆ	9— 4	9—12
ಊರುಬೆಲ್ಲ ಒಂದಿ ಗಂಡ್ಡೆ	30— 0	೨೨— 0
ಉಪ್ಪು ಗೋಚೆ ಗಂಡ್ಡೆ	4— 8	4— 8
ಖೊಪ್ಪ ಒಂದಿ ಗಂಡ್ಡೆ	60— 0	70— 0
ಖೊಪ್ಪ ಹಂದಿ ಒಂದಿ ಗಂಡ್ಡೆ	28— 0	29— 0
ಎಳ್ಳಂದಿ ಒಂದಿ ಗಂಡ್ಡೆ	32 — 8	33—12
ಖೊಪ್ಪ ಎಳ್ಳೆ ಮಣ ಗಂಡ್ಡೆ	4—15	6— 0
ಎಳ್ಳೆಣ್ಣೆ ಮಣ ಗಂಡ್ಡೆ	7— 0	7— 0
ಚಿಮಿಣಿಎಣ್ಣೆ ಕೆಟ್ಟಿಗೆ ಗಂಡ್ಡೆ	6— 5	6— 5
ಹೊರಸ ಸಕ್ಕರೆ ಮ ಗಂಡ್ಡೆ	೨— 9	೨— 9
ಮೆಣಸು	2— 8	4— 0
ಸಾಸಿವೆ ಮುಡಿ ಗಂಡ್ಡೆ	5 — 8	6— 0
ಕಾಳುಮೆಣಸು ಒ ಗಂಡ್ಡೆ	102— 8	100
ಯೆಲಕ್ಕಿಬೀಜ ಮಣಗಂಡ್ಡೆ	38— 0	9— 0
ಗೇರುಬೀಜ ಮು ಗಂಡ್ಡೆ	೨— ೬	3 — 10
ಕಕ್ಕೆಣ ಒಂದಿ ಗಂಡ್ಡೆ	35— 0	37— 8
ಕಾಯಿಮ್ಯಕಡಿ ಮ ಗಂಡ್ಡೆ	9— 12	9— 14
ಕಾಯಿಮ್ಯಪಾತ್ರೆಗಳು ಮ ಗಂಡ್ಡೆ	12— 8	14— 0
ಚೀಪಾಲ್ಲೆ ಸೀಲು ಗಂಡ್ಡೆ	17— 8	18— 0
ಹಿತ್ತಾಳೆ ತಗಡು ಮ ಗಂಡ್ಡೆ	10— 0	10—
ಪನಸು ಗಂಡ್ಡೆ	22— 8	೨೨— 8
ಹುಣಸೆ ಹುಳಿ ಮಂಡಿ ಗಂಡ್ಡೆ	೨೦— 0	೨೨— 0
ನೇಟಿವ್ ಕಾಫಿ ಒಂದಿ ಗಂಡ್ಡೆ	140— 0	150— 4
ಪೀಬೇರಿ ಕಾಫಿ ಒಂದಿ ಗಂಡ್ಡೆ	170— 0	185— 0
ಮೆಣಸಿಕಾಯಿ ಬಿಲಕ್ಕೆ	20— 0	20 — 8

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO. POST - CHALAPURAM, MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು ವನಸ್ಯರನ್ನು ಆಕರ್ಷಿಸ ವಂತಹುದು ಏನೆಂದು ಅರಿಗೆ ಗೊತ್ತು ಮನುಷ್ಯನ ಹೆಂಗ ಸೋರ್ಯಕ್ಕೆ ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲುವುದೇಕೆ ಅಲ್ಲಿಯ ಗೋಲ ಕಾರವಾಗಿ ತಾರುಣ್ಯ ಭಾವವನ್ನು ಸೂಚಿಸುತ್ತಿವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಾಪಸು.

ಇದೆಲ್ಲವೂ ಮಲೆಯಾಳೀ ರಹಸ್ಯಮಯ ದಿವ್ಯಔಷಧವಾದ ಸ್ತನೋ ಸ್ತೇಧಾದಿಂದ ಸಾಧ್ಯ ನಿಮ್ಮ ಸ್ತನಗಳು ಅಸೌಷ್ಠವಿಂದಲೂ ವೇದನಾ ಭಾವ ತಿಂತಿಣಿ ರಲಿಲ್ಲ ಸ್ಪರ್ಶ ವು ಕಠಿಣ ವಾಂದಲೂ ರಕ್ಷಹೀನವಾಗಿ ನೋಡಲು ಅಸಹ್ಯವಾಗಿದ್ದರೂ ಅವುಗಳ ಜೋಲು ಬಿದ್ದಿದ್ದರೂ ಸರಿ ಯ್ಯಾಗಿ ಬೆಳೆಯದೆ ಇದ್ದರೂ ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ, ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು ಅವರ ದಿವ್ಯಔಷಧವು ಹೇಳುವಷ್ಟರ ಸ್ತನಗಳನ್ನು ಪುಷ್ಟ ಪುಷ್ಟವಾಗಿಯೂ, ದೇಹಯಷ್ಟಿಗೆ ತಕ್ಕಂತೆಯೂ ಗೋಲಾಕಾರದಲ್ಲಿಯೂ ಮನೋ ಹರವಾಗಿಯೂ ನಿಲ್ಲುವಂತೆ ಮಾಡಿ ದೇಹದೊಳಗೆ ಹೋಗುವ ದಿವ್ಯಔಷಧ ರಕ್ತ ಸ್ನಾಯುಗಳನ್ನೂ ಸ್ತನಗಳ ಪೌಷ್ಟಿಕತೆಯನ್ನೂ ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತನಾಳಗಳನ್ನು ಸಂಗೋಪಿಸಿ ಸ್ತನಗಳನ್ನು ಇನಮನಾಕರ್ಷಕಗಳನ್ನಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು ಇವರಿಂದ ಸಾಧ್ಯ ವಿಲ್ಲದ ಬಂಧಕವಿಲ್ಲ ಮಲೆಯಾಳೀ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ಪೂರ್ಣ ಗುಣ ಲಾಭವನ್ನ ಕೊಂಡಿರವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋ ಸ್ತೇಧ ಸಂಖ್ಯೆ 20 (ತಿನ್ನುವ ದಿವ್ಯಔಷಧ) ರೂ 3 ಸಂಖ್ಯೆ 21 (ಹೊರಗೆ ಲೇಪಿಸುವ ಮದ್ದು) ರೂ 1 ಧರ್ಮಾರ್ಥವಾಗಿ ನಿಗುವ ಕೆಲಸಕ್ಕಾಗಿ ಕಂಪೆನಿಗೆ ಬರೆದುಕೊಳ್ಳಿ

• ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ನೆಲಬಾರು

ಇವಲ್ಲದೆ ಬೇರೆ ದಿವ್ಯಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1 ಮುಟ್ಟುಡೋಷ 2. ಸಂತತ ಪ್ರತಿಬಂಧಕ್ಕೆ 3 ಧಾತುಪುಷ್ಟಿ 4 ಲಿಂಗದೌರ್ಬಲ್ಯ 5 ಸ್ತ್ರೀರೋಗ 6. ಕ್ಷಯ ಸಂಹಾರಿ 7 ವಾತರೋಗ

ಮೈಸೂರು ಮೋಡರ್ನ್ ಹಿಂದೂ ಹೊಟೆಲಿನಲ್ಲಿ ರಾಮನವಮಿ ಉತ್ಸವ

ಕಳೆದ ಎಪ್ರೀಲು ತಿಂಗಳಲ್ಲಿ ಜರಗಬೇಕಾ ಗಿದ್ದ ಶ್ರೀರಾಮನವಮಿ ಮಹೋತ್ಸವವನ್ನು ಕಾರಣಾಂತರಗಳಿಂದ ಅಂದು ಜರಗಿಸಲಾಗ ದಿದ್ದುದರಿಂದ, ಮೇ ತಿಂಗಳ ತಾ ೩೩ನೇ ಬಿಡ ಮೈಸೂರಿನ 'ಮೋಡರ್ನ್ ಹಿಂದೂ ಹೊಟೇ ಲಿ'ನಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಮೋಡರ್ನ್ ಹಿಂದೂ ಹೊಟೆಲಿನ ಮಾಲಿಕ ರಾದ ಶ್ರೀ ಕೆ ಸೀತಾರಾಮರಾಯರು ಅವ ಕಾಹ್ನ ೬೦೦-೮೦೦ ಮಂದಿಯ ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿಸಿದರು ಅಲ್ಲದೆ ಅಂದು ರಾತ್ರೆ ೮ ಗಂಟೆಗೆ ಸರಿಯಾಗಿ ಅನ್ನಾನ ವಿದ್ವಾನ್, ಸಂಗೀತ ಶಾಸ್ತ್ರರತ್ನ ಶ್ರೀ ಕೆ ವಾಸು ದೇವಾಚಾರ್ಯರ ಗಾಯನ ಕಚೇರಿಯು ನೆರ ವೇರಿಸಲ್ಪಟ್ಟಿತು ಶ್ರೀ ಆಚಾರ್ಯರ ಸಂಗೀತ, ಶ್ರೀಗಳಾದ ಅಸ್ಥಾನ ವಿದ್ವಾನ್ ಜಾಡಯ್ಯ ಮತ್ತು ಗುರುರಾಜಪ್ಪನವರ ಪಿಟ್ಟುನಾದ, ಶ್ರೀ ಪುತ್ತು ಸ್ವಾಮಿಯವರ ಮೃದಂಗವಾದನ ಈ ನೈಭವಗಳಿಂದೊಡಗೂಡಿದ ಗಾಯನವು ಬಂದ ಮಹನೀಯರಿಗೆಲ್ಲ ಅನಂದದನ್ನುಂಟುಮಾಡಿತು ಈ ಸಮಾರಂಭಕ್ಕೆ ನಗರ ಸಭಾಧ್ಯಕ್ಷರಾದ ಶ್ರೀ ಎಂ. ಎ ಶ್ರೀನಿವಾಸನ್, ಶ್ರೀ ನರಸಿಂಹಯ್ಯ (ಎಡ್ವಕೇಟು) ಶ್ರೀ ರಾಮಸ್ವಾಮಿ, (ವಲ್ಲಿಕಾ ಪ್ಲೊನೆಕ್ಟೊಟರ್) ಮಹಾರಾಜಾ ಕಾಲೇಜಿನ ರಾಘವೇಂದ್ರಾಚಾರ್ ಮತ್ತು ಟಿ ಕೃಷ್ಣರಾವ್ ಇವರೇ ಮೊದಲಾದ ಮಹನೀಯರು ಚಿತ್ತೈಸಿ ರಾಮನವಮಿ ಉತ್ಸವವನ್ನಲಂಕರಿಸಿದರು

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ಜ್ಯೇಷ್ಠ ಬ ೧೧ ಶನಿವಾರದಿಂದ ಜ್ಯೇಷ್ಠ ಬ ೨ ಶುಕ್ರವಾರದ ವರೆಗಿನ ಪಂಚಾಂಗ (೧೯೩೬ನೇ ವ್ಯಷಭ ಬಾಕ)

ತಾರೀಕು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯೋದಯ	ವಿಶೇಷ
6	ಶನಿ	೧೧	೧೬	ಪಾಂಚ	ಕಿಪ	೫೪	*
7	ರವಿ	೩	೧೬	ಪೂ ಫಾಲ್ಗು	ಬವ	೫೪	
8	ಸೋಮ	೩	೧೪	ಉ ಫಾಲ್ಗು	ಬಾಲ	೫೩	
9	ಮಂಗ	೪	೧೩	ಹಸ್ತ	ಕೌಲ	೫೩	
10	ಬುಧ	೫	೧೪	ಚಿತ್ತಾ	ತೈತಿ	೫೩	
11	ಗುರು	೬	೪೪	ಶತಭಿಷಾ	ಜಾಂ	೫೫	
12	ಶುಕ್ರ	೪	೪೭	ಪೂ ಭಾದ್ರ	ಕಿಪ	೫೦	

ಜಗತ್ತಿನ ರಾಜಕೀಯದಲ್ಲಿ ಭರತಖಂಡದ ಸ್ಥಾನ

ಪಾಶ್ಚಾತ್ಯ ಜನಾಂಗಗಳ ಬಹಿರ್ ಮುಖ ವ್ಯವಹಾರಗಳಲ್ಲಿ ಹಿಂದೂದೇಶದ ಪ್ರೇರಕಶಕ್ತಿಯು ಹೇಗೆ ವರ್ತಿಸುತ್ತಿದೆಯೆಂದು, ಯಾವತ್ತೂ ಭಾರತೀಯರಿಗೆ ತಿಳಿಯದ ಸಂಗತಿಯಾಗಿರುತ್ತದೆ. ಹಿಂದೂದೇಶವು ಬ್ರಿಟಿಷರ ಆಳ್ವಿಕೆಗೆ ಒಳಗಾಗಿದ್ದಲ್ಲಿ, ಯೂರೋಪು ಖಂಡದ ರಾಜಕೀಯ ಸ್ಥಿತಿ ಬೇರೆಯಾಗುತ್ತಿತ್ತು ಎಂದು ಹೇಳಿದರೆ ಎಲ್ಲರೂ ಆಶ್ಚರ್ಯಪಡಬಹುದು. ಆದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಅದು ಒಂದು ಸತ್ಯದ ಮಾತಾಗಿರುತ್ತದೆ. ಬ್ರಿಟಿಷರ ಬಹಿರ್ ಮುಖ ವ್ಯವಹಾರದ ಕುರಿತು ವರ್ತನೆಯು, ಭರತಖಂಡವು ತಮ್ಮ ಕೈಯಿಂದ ತಪ್ಪಿಹೋಗುವುದೋ? ಎಂಬ ಭಯದ ಮೇಲೆ ಹೊಂದಿಕೊಂಡಿದೆ ಸಾಮ್ರಾಜ್ಯದ ಸಮುದ್ರ ಮಾರ್ಗಗಳಲ್ಲಿ ಬೇರೆ ಜನಾಂಗಗಳಿಂದ ಆತಂಕಗಳು ಬಾರದಂತೆ ನೋಡಬೇಕು ಇದರಿಂದಲೇ ಹಿಂದೆ ಅನೇಕ ಘಟನೆಗಳು ನಡೆದಿವೆ ಬ್ರಿಟಿಷರು ಐಗುಪ್ತದಲ್ಲಿ ನೆಲೆಸಿದ್ದುದು, ಹಿಂದೂದೇಶದ ದೆಸೆಯಿಂದ ಎಂದು ಅಲ್ಲಿನವರು ಬಹಳ ಹಿಂದಿನಿಂದ ಸಾರುತ್ತಿದ್ದಾರೆ ಸುಯೇಜ್ ಕಾಲಿವೆ ಮತ್ತು ಐಗುಪ್ತವು ಬೇರೆ ಜನಾಂಗಗಳ ವಶವಾಗಬಾರದು ಹಿಂದೆ ಲೋರ್ಡ್ ಕರ್ಜನ್ನರು, ವರ್ಸಿಯೂವನ್ನು ವಿಂಗಡಿಸಲು ಪ್ರಯತ್ನಿಸಿದುದು ಹಿಂದೂದೇಶವನ್ನು ಭದ್ರೀಕರಿಸಲು. ಇಷ್ಟರ ಜನಾಂಗಗಳಿಂದ ಹಿಂದೂದೇಶದ ಹಾದಿಯಲ್ಲಿ ಬರಬಹುದಾದ ಆತಂಕಗಳನ್ನು ದೂರಪಡಿಸಲು ಹಿಂದೂದೇಶಕ್ಕೆ ಬರುವ ಮಾರ್ಗವನ್ನು ರಕ್ಷಿಸಲು, ಅಲ್ಲಲ್ಲಿ ಹಾದಿಯಲ್ಲಿ ಹಿಂದೂದೇಶದ ಖರ್ಚಿನಲ್ಲಿ, ಪೊಲಿಟಿಕಲ್ ಏಜನ್ಸಿ ಏರ್ಪಾಡುಗಳನ್ನು ಇಟ್ಟಿರುವರು ಎಡೆನ್ನಿನ ಭದ್ರತಾ ಏರ್ಪಾಡಿನ ಧ್ಯೇಯವನ್ನು ಹಿಂದೂದೇಶವು ಹೊರುತ್ತಿದೆ ಭಾರತೀಯ ಶಾಸನಸಭೆಗಳಿಗೆ, ಈ ವಿಚಾರಗಳ ಮೇಲೆ ಅಧಿಕಾರವಿರುತ್ತಿದ್ದರೆ, ಹಿಂದೂದೇಶದ ವ್ಯಯಧನಪಟ್ಟಿಯಿಂದ ಇವುಗಳು ಯಾವಾಗಲೋ ಮಾಯವಾಗುತ್ತಿದ್ದವು.

ಹಿಂದೂದೇಶವನ್ನು ತಮ್ಮೊಡನೆ ಭದ್ರವಾಗಿಡುವ ಉದ್ದೇಶದಿಂದಲೇ, ಬ್ರಿಟಿಷರು ಇರೇಕಿನಲ್ಲಿ ಮತ್ತು ಪೆಲೆಸ್ಟೈನ್ನಿನಲ್ಲಿ ಕೋಟಿ ಕೊತ್ತಳಗಳನ್ನು ಕಟ್ಟಿರುವರು ಅರಬೀಯರೊಡನೆ ಕಳೆದ ಮಹಾಯುದ್ಧದ ನಂತರ, ಬ್ರಿಟಿಷರು ಹಲಕೆಲವು ಒಪ್ಪಂದಗಳನ್ನು ಮಾಡಿದೇನೊ ನಿಜ ಆದರೆ, ಆ ಒಪ್ಪಂದಗಳಿಂದ ಅರಬಿಯರಿಗೆ ಅಷ್ಟು ಫೆಲಸಿಕ್ಕಿದಂತೆ ಕಾಣುವುದಿಲ್ಲ ಬ್ರಿಟಿಷರು ಇವರನ್ನು ಇನ್ನೂ ಬಿಗಿಯಲು ಪ್ರಯತ್ನವದುತ್ತಿದ್ದಾರೆ ಈ ಕಾರಣದಿಂದಲೆ ಅಸ್ಯಾ ಖಂಡದ ಅನೇಕ ಕಡೆಗಳಲ್ಲಿ ಬ್ರಿಟಿಷರ ಕುರಿತು ಅಸಮಾಧಾನವುಂಟಾಗಿದೆ ಇದೇ ಅಲ್ಲಿ ಇತ್ತೆಲಾಗೆ ನಡೆದ ಅನೇಕ ದುರ್ಘಟನೆಗಳಿಗೆ ಕಾರಣವಾಗಿದೆ ಇಷ್ಟೆಲ್ಲಾ, ಗದ್ದಲವೇಕೆ? ಹಿಂದೂದೇಶಕ್ಕಾಗಿ ಕರ್ನೆಲ್ ಲೊರೆನ್ಸರು ಅರಬಿಯರಿಗೆ ಅನೇಕ ವಾಗ್ದಾನಗಳನ್ನು ಮಾಡಿದ್ದರು ಆದರೆ ಬ್ರಿಟಿಷರು ಅವುಗಳನ್ನು ಪೂರೈಸದೆ ಹೋದರು ಇದರಿಂದ ಲೊರೆನ್ಸರು ಮರಣಕಾಲದಲ್ಲಿ ಬಹಳ ದುಃಖಿತರಾದರು

ಎಟಿಸೀಸ್ಥಿಯಾವು ಇಟೇಲಿಗೆ ಸೇರಿದುದರಿಂದ, ಈಗ ಮೆಡಿಟರೇನಿಯನ್ ಸಾಗರದಲ್ಲಿ ಮತ್ತು ಕೆಂಪು ಸಾಗರದಲ್ಲಿರುವ ಬ್ರಿಟಿಷರ ನಿರಂಕುಶ ಪ್ರಭುತ್ವಕ್ಕೆ ಹಾನಿಬಂದತಾಗಿದೆ ಆದರಿಂದ ಬ್ರಿಟಿಷರು ಈ ವಿಚಾರದ ಕಡೆಗೆ ಹೆಚ್ಚಿನ ಗಮನಕೊಡುತ್ತಿದ್ದಾರೆ ಆಸ್ಯಾದ ತನ್ನ ಆಶ್ರಿತ ರಾಜ್ಯಗಳ ಕಡೆಗೆ ಹೆಚ್ಚಿನ ಗಮನಕೊಡಲಾರಂಭಿಸಿದೆ. ಸುಯೇಜ ಕಾಲಿವೆಯಲ್ಲಿ ಬೇರೆ ಜನಾಂಗಗಳ ಅಧಿಕಾರದಲ್ಲಿರುವುದು ಬ್ರಿಟಿಷರಿಗೆ ಒಪ್ಪುವುದಿಲ್ಲ ತಮ್ಮದೇ ಆದ ಬೇರೊಂದು ಹಾದಿಯ ನಿರ್ಮಾಣದ ಕುರಿತು ಈಗ ಆಲೋಚನೆಗಳು ನಡೆಯುತ್ತಿವೆ.

ಆದರೆ ಬ್ರಿಟಿಷರ ಕತ್ನಗಳು ಕಾಲಕ್ಕೆಮೀಣ ಹೆಚ್ಚುವ ಸಂಭವಗಳಿವೆ. ಕಾರಣ ಅರಬೀಯರು ಮತ್ತು ಐಗುಪ್ತದವರು ಇನ್ನು ಸುಮ್ಮನಿರಲಾರರು. ತಾವು ಬ್ರಿಟಿಷರ ಕಡೆಗೆ ತೋರಿಸಿದ ರಾಜನಿಷ್ಠೆಗೆ ತಕ್ಕ ಪ್ರತಿಫಲವನ್ನು ಅವರು ಕೇಳಲ್ಪಟ್ಟಿಬಿಡರು. ಇಟೇಲಿಯನ್ನು ಬಗ್ಗಿಸದೆ ಸುಮ್ಮನಿರಲು ಇವರಿಗೆ ಸಾಧ್ಯವಿಲ್ಲ. ಆದರಿಂದ ಇನ್ನೊಂದು ಮಹಾಯುದ್ಧದಲ್ಲಿ ಇಟೇಲಿಯು ಬ್ರಿಟನ್ನನ್ನು ವಿರೋಧಿಸುವುದು ಖಂಡಿತ ಇಲ್ಲದಿದ್ದರೆ ಬ್ರಿಟಿಷರು ಅಷ್ಟು ಕಾದ ತನ್ನ ಕೆಲವು ವಸಾಹತುಗಳನ್ನು ಕಳಕೊಳ್ಳಬೇಕಾಗುವುದು. ಹಿಂದೂದೇಶವು ಒಂದಲ್ಲದಿದ್ದರೆ, ಬ್ರಿಟಿಷರು ಪಾಶ್ಚಾತ್ಯದ ಈಗಿನ ರಾಜಕೀಯ ಪರಿಸ್ಥಿತಿಯಿಂದ ಹೊರಬಿಲ್ಲುತ್ತಿತ್ತು ಇಟೇಲಿಗೂ ಬ್ರಿಟನಿನ ಹಿಂದು ದೃಷ್ಟಾಂತದಿಂದ ವಸಾಹತುಗಳ ಕುರಿತಾಗಿ ಬಹಳ ಆಶೆ ಹುಟ್ಟಿರುತ್ತದೆ.

ಹಿಂದೂದೇಶದಿಂದ ಬ್ರಿಟನಿಗೆ ಆದ ಲಾಭವು ಎಲ್ಲಾ ಪಾಶ್ಚಾತ್ಯ ಜನಾಂಗಗಳ ಕಣ್ತೆರೆದಿದೆ. ಹಾಗೆ ಲಾಭಹೊಂದಲು ಅಲ್ಲಿನ ಜನಾಂಗಗಳಲ್ಲಿ ಆಶೆಗಳು ಮೂಡಿವೆ ಹಿಂದೂದೇಶದಿಂದ ಬ್ರಿಟಿಷರು ಗಳಿಸಿದ ವೈಶ್ಯರ್ಯವು ಪಾಶ್ಚಾತ್ಯದ ಭಂಡವಾಳಿಗರನ್ನು ಮರಳುಗೊಳಿಸಿದೆ ಇದರಿಂದಲೆ ಇವರಲ್ಲಿ ಪರಸ್ಪರ ಕಲಹಗಳು ಪ್ರಾರಂಭವಾಗಿವೆ ಹಿಂದೂದೇಶದ ನಿಮಿತ್ತ ಬಹಿರ್ ಜನಾಂಗಗಳ ಬಹಿರ್ ಮುಖ ವ್ಯವಹಾರದ ಕುರಿತು ವರ್ತನೆಯು ಈಗಿನ ಸ್ಥಿತಿಯನ್ನು ಹೊಂದಿರುತ್ತದೆ ಆದರಿಂದ ಇನ್ನೊಂದು ಮಹಾಯುದ್ಧಕ್ಕೆ ಹಿಂದೂದೇಶವೇ ಮೂಲ ಕಾರಣವು

ಹೆಚ್ಚೇಕ ಕಾಲಾಂತರದಲ್ಲಿ, ಬ್ರಿಟಿಷರಿಂದ ಹಿಂದೂದೇಶದ ಅಧಿಕಾರವನ್ನು ಕಿತ್ತುಕೊಳ್ಳಲು, ಇತರ ಪಾಶ್ಚಾತ್ಯ ಜನಾಂಗಗಳು ಪ್ರಯತ್ನಿಸಬಹುದು ಸಂಭವಗಳು ಬರಬಹುದು ಸಾಯಾನು ದೇಶವು, ಜಪಾನಿಯರ ಪ್ರೇರಣೆಗೆ ಒಳಗಾಗಿದೆ ಇಲ್ಲಿನ ಕ್ಯಾ ಇಸ್ತಮಸ್ಸಿನತ್ತರ ಹಿಂದು ಕಾಲಿವೆಯನ್ನು ತೋಡಬೇಕಾಗಿ ಜಪಾನಿಯರು ಪ್ರಸ್ತಾಪಿಸಿದ್ದಾರೆ ಈ ಕಾಲಿವೆಯಿಂದ ಬ್ರಿಟಿಷರ ಪೌರ್ವಾತ್ಯ ವ್ಯಾಪಾರಕ್ಕೆ ಬಹಳ ಹಾನಿ ಉಂಟಾಗುವುದು ಎಚ್ಚರಿಂದಲೇ, ಬ್ರಿಟಿಷರು ಈ ಕ್ಯಾ ಕಾಲಿವೆಯ ತೋಡುವಿಕೆಯನ್ನು ವಿರೋಧಿಸುತ್ತಿದ್ದಾರೆ ಪೌರ್ವಾತ್ಯದಿಂದ ಹಿಂದೂದೇಶದ ಮೇಲೆ ಅಧಿಕ್ಯಮನವಾಗ ಸಂಭವಗಳಿವೆ ಪಾಶ್ಚಾತ್ಯದಲ್ಲಿ ಇಟೇಲಿಯು ಇವರ ಮೇಲೆ ಮುಂದುನರಿಸಬರಬಹುದು ಹಿಂದೂದೇಶದ ಮೇಲೆ ಅನ್ಯರು ಅಧಿಕ್ರಮಿಸಿದರೆ ನಮ್ಮ ಗತಿಯೇನು? ನಾವೆಂತೂ ಸಂಪೂರ್ಣ ಆಶಸ್ವರಾಗಿದ್ದೀವೆ ಸರಕಾರವು ಈ ಸಂಭವದಲ್ಲಿ ನಮ್ಮೊಡನೆ ಸಂಗ್ರಾಮ ಇಲಾಖೆಗೆ ಹೆಚ್ಚಿನ ಹಣವನ್ನು ಕೇಳುತ್ತದೆ ಹೊರತು, ಬೇರೆ ವಿಚಾರಗಳನ್ನು ಆಲೋಚಿಸುವುದಿಲ್ಲ

ಅಖಿಲ ಭಾರತ ಆಧಿ ಹಿಂದೂಗಳ ಪರಿಷತ್ತು.

ಈ ವರ್ಷದ ಪರಿಷತ್ತು ಲಕ್ನೌದಲ್ಲಿ ಜರಗಿತು ಈ ಪರಿಷತ್ತಿನಲ್ಲಿ ಹರಿಜನರು, ಬೇರೊಂದು ಮತವನ್ನು ಆಚರಿಸುವ ವಿಚಾರದಲ್ಲಿ, ಡಾ। ಅಂಬೇಡ್ಕರರು, ದೃಢವಾದ ನಿಶ್ಚಯಗಳನ್ನು ಮಾಡುವರೆಂದು ವಾರ್ತೆಯಾಗಿತ್ತು ಇದರಿಂದಿಗೆ ಧರ್ಮಗಳ ಪರಿಷತ್ತೊಂದು ಜರಗಿಸಲು ಏರ್ಪಾಡುಗಳಾಗಿದ್ದವು ಎಲ್ಲಾ ಧರ್ಮದ ಶಾಸ್ತ್ರಗಳಿಗೆ ಆಹ್ವಾನಗಳು ಹೋಗಿದ್ದವು

ಈ ಪರಿಷತ್ತಿಗೆ ಎಲ್ಲಾ ಪ್ರಾಂತ್ಯಗಳಿಂದ ಧಾರಾಳ ಪ್ರತಿನಿಧಿಗಳು ಬಂದಿದ್ದರು. ಬಂಗಾಳ, ಪಂಜಾಬ, ಮಹಾರಾಷ್ಟ್ರ ಮತ್ತು ತಮಿಳು ನಾಡಿನಿಂದ ಪ್ರತಿನಿಧಿಗಳು ಬಹಳ ಕೂತೂಹಲದಿಂದ ಬಂದಿದ್ದರು ಹೊಸ ಧರ್ಮವನ್ನು ಹುಡುಕುತ್ತಿರುವ ೬೦ ಮಿಲಿಯ ಹರಿಜನರ ಆತ್ಮಗಳನ್ನು ರಕ್ಷಿಸಲು, ೧೪ ಧರ್ಮಗಳ ಶಾಸ್ತ್ರಿಗಳು ಅಲ್ಲಿ ನೆರೆದಿದ್ದರು.

ಹರಿಜನರು ಮತಬದಲಾಯಿಸುವ ಕುರಿತು ದೃಢವಾದ ನಿರ್ಣಯಗಳಾಗಲು ಇಲ್ಲಿ ಸರ್ವ ಸಿದ್ಧತೆಗಳಾಗಿದ್ದವು. ಆದರೆ, ಇವುಗಳಿಗೆ ಮುಖ್ಯ ಕಾರಣಭೂತರಾದ ನಾಯಕರೆ, ಕಾಣಿಸಿಕೊಳ್ಳದಿರಲು ಅದು ಹೇಗೆ ಸಾಧ್ಯವಾಗುವುದು? ಡಾ। ಅಂಬೇಡ್ಕರರು ಬಾರದಿದ್ದರೆ ಹರಿಜನರು ಸ್ವತಂತ್ರರಾಗಿ ಏನು ಮಾಡಬಲ್ಲರು? ಡಾ। ಅಂಬೇಡ್ಕರರು ಇಲ್ಲದೆ, ತಮಗೆ ಯಾವದು ಒಳ್ಳೆದು ಯಾವದು ಕೆಟ್ಟದು ಎಂದು ಅವರು ಸ್ವತಂತ್ರರಾಗಿ ಹೇಗೆ ತೀರ್ಮಾನಿಸಬಲ್ಲರು? ಡಾ। ಅಂಬೇಡ್ಕರರಿಗೆ, ಈ ಮುಹೂರ್ತದಲ್ಲಿ ಕಾಯಿಲೆ ಆದುದು ಬಹಳ ವಿಕಾರದಕರಸಂಗತಿ ಲಾಹೋರಿನಲ್ಲಿ ಇವರಿಗೆ ಸಿಕ್ಕಿದ ಸತ್ಕಾರವು ಇವರ ಆರೋಗ್ಯವನ್ನು ಕೆಡಿಸಿರಬಹುದು.

ಲಾಹೋರಿನಲ್ಲಿ ಇವರ ಅಧ್ಯಕ್ಷತೆಯಲ್ಲಿ ಜರಗಿದ ಮಂತ್ರಿಕಡಿವರಿಂದ, ಹರಿಜನರ ಕಷ್ಟ ನಿವಾರಣೆಮಾಡಲು ಮತಬದಲಾವಣೆ ಕುರಿತು ದೃಢನಿಶ್ಚಯವಾಗುವ ಉದ್ದೇಶ ಅಂಬೇಡ್ಕರರಲ್ಲಿ ದ್ದರೂ, ಅವರು ಅಂಬೇಡ್ಕರರ ಮಾತುಗಳಿಗೆ ತಲೆ ಅಲ್ಲಾಡಿಸದೆ ಹೋದರು ವೇದಗಳನ್ನು ಮತ್ತು ಶಾಸ್ತ್ರಗಳನ್ನು ಕೆದವಲು ತಂದ ಅಂಬೇಡ್ಕರರ ಸೂಚನೆಗಳನ್ನು ಇವರು ಅನುಮೋದಿಸದೆ ಹೋದರು ಶಾಸ್ತ್ರಗಳು ಜಾತಿವಾರು ಭೇದಗಳಿಗೆ ಮುಖ್ಯ ಆಧಾರ ಆದರೆ ಜಾತಿಗಳು ಮಾಯವಾದರೂ ಶಾಸ್ತ್ರಗಳು ಉಳಿಯುವವು, ಎಂದು ಅಂಬೇಡ್ಕರರ ಮಾತು ಇದರಿಂದಲೇ ಇವರ ಸೂಚನೆಯ ಬಲವು ಕಡಿಮೆಯಾಯಿತು ಹೀಗಿರುವಾಗ ಹರಿಜನರು ಹಿಂದೂಧರ್ಮವನ್ನು ತೃಟಿಸಿ, ಹೊರಗೆ ನಡೆಯುವಂತೆ ಇವರು ಯಾವ ಬಾಯಿಯಿಂದ ಹೇಳಬಹುದು

ಅಂಬೇಡ್ಕರರು ಲಕ್ನೋ ಪರಿಷತ್ತಿನಲ್ಲಿ ಹಾಜರಾಗದಿದ್ದರೂ ಅಲ್ಲಿ ನೆರೆದ ನಿವಿಧ ಧರ್ಮಗಳ ಶಾಸ್ತ್ರಿಯರ ಉತ್ಸಾಹವು ಕುಂದುಲಿಲ್ಲ ಪತ್ತು ಮಹಮ್ಮದೀಯರು, ಕ್ರೈಸ್ತರು, ಬೌದ್ಧರು, ಜೈನರು, ಸಿಕ್ಕರು, ಆರ್ಯರು, ಬಾಹಾನರು, ಮತ್ತು ಸನಾತನಿಗಳೂ ಹರಿಜನರನ್ನು ತಮ್ಮ ತಮ್ಮ ಮತಗಳು ತ್ರೈಷ್ಯವಾದುದೆಂದು ಹುರಿದುಂಬಿಸಲು ತಮ್ಮತಮ್ಮೊಳಗೆ ಬಹಳ ಹೋರಾಡಿದರು ಸ್ವರ್ಗದ ಹಾದಿಯು ತಮ್ಮ ಮತದಲ್ಲಿ ಇರುವುದೆಂದು ಅವರು ವಾದಿಸಿದರು ಆದರೆ ಇವರ ಇಷ್ಟು ಪ್ರಯತ್ನಗಳು ನಿಷ್ಫಲವಾದವು ಅನೇಕರು ಅನೇಕ ತರದ ಸ್ವರ್ಗದ ಹಾದಿಗಳನ್ನು ಅವರಿಗೆ ತೋರಿಸಿದರೂ, ನಾಯಕರಾದ ಅಂಬೇಡ್ಕರರಿಲ್ಲದೆ, ಅದರಲ್ಲಿ ಯಾವ ಮಾರ್ಗವು ಒಳ್ಳೆದೆಂದು ಚುನಾಯಿಸಲು ಅವರಿಗೆ ಕಷ್ಟಸಾಧ್ಯವಾಯಿತು ಬಹುಶಃ ಯಾವ ಧರ್ಮದಲ್ಲೂ ಕನುಗೆ, ಯೋಗ್ಯ ಆಧ್ಯಾತ್ಮಿಕ ಸ್ಥಾನವು ದೊರಕದು, ಎಂಬ ಅಭಿಪ್ರಾಯವು ಅವರಲ್ಲಿ ಹುಟ್ಟಿದುದರಿಂದ, "ಇನ್ನೊಂದು ಅಖಿಲಭಾರತ ಪರಿಷತ್ತಿನಲ್ಲಿ ನಿರ್ಣಯಗಳಾಗುವ ವರೆಗೆ ಯಾವತ್ತು ಹರಿಜನರು ತಮ್ಮ ಮತಬದಲಾವಣೆ ಮಾಡಬಾರದೆಂದು" ನಿರ್ಧಾರವಾಗಿರುತ್ತದೆ ಇದರಿಂದ ಡಾ। ಅಂಬೇಡ್ಕರರಿಗೆ ಇನ್ನೊಂದು ವರ್ಷ ದೊರಕಿದಂತಾಗಿದೆ ಇನ್ನೂ ೧ ವರ್ಷ ವರ್ಯಂತಕ ಕೆಲವು ಪಾದ್ರಿಗಳು ಮತ್ತು ಮೌಲಿಗಳು ಕಾಲುಬದಿಯಲ್ಲಿ ನಲಿದಾಡುವ ಯೋಗ್ಯತೆಯು ಡಾ। ಅಂಬೇಡ್ಕರರಿಗೆ ಸಿಕ್ಕಿದಂತಾಯಿತು ಇನ್ನೂ ಒಂದು ವರ್ಷದ ಸಮಯವಿದ್ದುದರಿಂದ, ವಿವಿಧ ಮತಪ್ರಸಾರಕರು ನಿರುತ್ಸಾಹವಡಬೇಕಾಗಿಲ್ಲ. ಮತಬದಲಾವಣೆಯ ಕುರಿತು, ಡಾ। ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ರಚನೆಯಾಗಿದೆ ಇವರ ವರದಿಯು ಇನ್ನೊಂದು ವರಿಷತ್ತಿನಲ್ಲಿ ಒಪ್ಪಿಸಬೇಕೆಂದಾಗಿದೆ. ಆದರೆ ಡಾ। ಅಂಬೇಡ್ಕರರು ಹೇಗೆ ವರ್ತಿಸುವರೆಂದು ನೋಡಲಿದೆ

ಲಕ್ನೋ ಪರಿಷತ್ತಿನಲ್ಲಿ, 'ಹರಿಜನ' ವೆಂಬ ಶಬ್ದದ ಕುರಿತು ಬಹಳ ಚರ್ಚೆಯು ನಡೆಯಿತು. ಅಸ್ಪೃಶ್ಯರನ್ನು ನಮೂದಿಸಲು, ಈ ಶಬ್ದವನ್ನು ಉಪಯೋಗಿಸಬಾರದಾಗಿ ಕೆಲವರ ವಾದ ಹರಿಜನವೆಂಬ ಶಬ್ದವು ಇವರಿಗೆ ಅವಮಾನಕರ ವೆನಿಸಿದೆ ಮಹಾತ್ಮಾ ಗಾಂಧಿಯವರೊಡನೆ ಜಹಳ ಪ್ರತಿಕೂಲಿಸಿದಾಗ್ಯೂ ಈ ಶಬ್ದವು ಉಪಯೋಗಿಸಲಾಗುತ್ತಿದೆ ಎಂದು ಕೆಲವರ ಮಾತು. ಆದರೆ, 'ಹರಿಜನ'ವೆಂಬುದು, ಇವರ ಮೇಲೆ ಪ್ರೇಮದಿಂದ ಮಹಾತ್ಮಾಗಾಂಧಿಯವರು, ನಾಮಕರಣ ಮಾಡಿದ್ದಾಗಿರುತ್ತದೆ 'ದೇವರ ಜನರು' ಎಂಬ ಈ ಹೆಸರು ಅವರು ಹೇಗೆ ನೋಯಿಸುತ್ತದೆ ಎಂಬುದನ್ನು ತಿಳಿಯಲು ಅಸಾಧ್ಯ. ಯಾವತ್ತೂ ವರ್ಗದವರು ಈ ಹೆಸರಿನ ಕುರಿತು ಬಹಳ ಗರ್ವ ಪಡಬೇಕಾಗಿತ್ತು. ಬಹುಶಃ ಇದರಲ್ಲಿ ಹರಿಯೆಂಬ ಶಾಸ್ತ್ರೀಯ ಶಬ್ದವಿರುವುದರಿಂದ ಹರಿಜನರು, ಹೀಗೆ ನೊಂದರಬಹುದು. ಏನೆಲ್ಲಾ ವಿಚಿತ್ರಗಳು ನಡೆಯುತ್ತಿವೆ ನೋಡಿ.

ಗಡಿನಾಡಿನ ವರಾಣರು ಗಾಂಧೀ ಭಕ್ತರು.

ಗಡಿನಾಡಿನ ಗಾಂಧಿಯವರೆಂದು ಪ್ರಖ್ಯಾತರಾದ ಖಾನ್ ಅಬ್ದುಲ್ ಘಫರ್ ಖಾನರ ನೋಡರೆಯ ಖಾನ್ ಅಬ್ದುಲ್ ಹನಾನ್ ಖಾನರು ಬೆಂಗಳೂರಿಗೆ ಬಂದಿದ್ದರು. ಆಗ ಸ್ಥಳೀಯ ಕಾಂಗ್ರೆಸ್ಸಿನವರು ಅವರಿಗೊಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಖಾನ್ ಹನಾನ್ ಖಾನರು ಸತ್ಕಾರಕ್ಕೆ ಕೃತಜ್ಞತೆತೆಯನ್ನರ್ಪಿಸುತ್ತಾ ರಾಜಕೀಯ ಪ್ರಶ್ನೆಗೆ ಬಂದರು

"ಗಡಿನಾಡಿನ ಜನರು ವರಾಣರು, ಸ್ವಲ್ಪ ತೋಷಿಷ್ಟರು. ಯಾವಾಗಲೂ ಅವರು ತಸ್ಸು ಪಾಡಿಗೆಲು. ಇದು ಅವರಿಗೆ ಬಹುಕಾಲದಿಂದ ಬಂದಿರುವ ಪದ್ಧತಿ ಆದರೆ, ಮಹಾತ್ಮಾಗಾಂಧಿಯವರು ಗರ್ಜಿಂರಲ್ಲಿ ಹೂಡಿದ ಅಸಹಕಾರ ಚಳುವಳಿಯಿಂದ ಗಡಿನಾಡು ಸಂಪೂರ್ಣವಾಗಿ ಅಹಿಂಸಾಮಯವಾಯಿತು ವರಾಣರ ತೋಪವೆಲ್ಲ ಕರಗಿಹೋಯಿತು. ಆದರೆ, ಅವರ ಧ್ಯೇಯವು ಇಮ್ಮಡಿಯಾಯಿತು 'ಖುದಯ್ ಖಿದ್ಮತ್‌ಗಾರ್' ಸಂಸ್ಥೆಯನ್ನು ಕಾಂಗ್ರೆಸ್ ಮೊದಮೊದಲು ಒಪ್ಪಿರಲಿಲ್ಲ ಕಾಲಕ್ರಮದಲ್ಲಿ ಅದರ ಒಪ್ಪಿಗೆಯೂ ದೊರಕಿತು ಅನಂತರ ಅದಕ್ಕೆ ಮತ್ತಷ್ಟು ಕಳೆಕಟ್ಟಿತು.

"ಗರ್ಜಿಂ—ಇಗರಲ್ಲಿ ನಡೆದ ಸತ್ಯಾಗ್ರಹದಲ್ಲಿ ಸುಮಾರು ೩೦ ಸಹಸ್ರ ರಕ್ತಕವಚಧಾರಿಗಳು ಭಾಗವಹಿಸಿದ್ದರು, ಅವ್ವ ಜನರೂ ಅಹಿಂಸಾವಾದಿಗಳಾಗಿದ್ದರೆಂದು ನಾನು ಧಾರಾಳವಾಗಿ ಹೇಳುತ್ತೇನೆ ಅವರು ಕೆಂಪುವಸ್ತ್ರಗಳನ್ನು ಧರಿಸಿದ್ದರಿಂದ, ಬ್ರಿಟಿಷ ಸರಕಾರದವರು ಅವರನ್ನು ಕ್ರಾಂತಿಕಾರರೆಂದು ಬಗೆದು ಅಸಹನೀಯವಾದ ಕಿರುಕುಳವನ್ನೂ, ಚಿತ್ರಹಿಂಸೆಯನ್ನು ಕೊಟ್ಟರು ಇಷ್ಟು ಹಿಂಸೆಯನ್ನು ಈ ರಕ್ತವಸ್ತ್ರಧಾರಿಗಳು ಶಾಂತರೀತಿಯಿಂದ ಸಹಿಸಿಕೊಂಡರು ಇದರಿಂದ ಅವರು, ಕ್ರಾಂತಿಕಾರರು ಹೌದು ಅಲ್ಲವೆಂಬುದು ವ್ಯಕ್ತವಾಗುತ್ತದೆ ಗಡಿನಾಡಿನಲ್ಲಿ ನಡೆಯುತ್ತಿರುವ ಕೆಲಸಗಳು ಹೊರಗಡೆಗೆ ತಿಳಿಯಕೂಡದೆಂದು ಸರಕಾರದವರು ಅನೇಕ ಕಾರ್ಯಕ್ರಮಗಳನ್ನು ಹವಣಿಸಿಕೊಂಡಿದ್ದರು ಅನೇಕ ಕಾಂಗ್ರೆಸ್ಸಿನವರಿಗೆ ಗಡಿನಾಡನ್ನು ಮೆಟ್ಟಲು ಅವಕಾಶವೇ ಕೊಡಲಿಲ್ಲ "

'ಗಡಿನಾಡಿನವರು ಮಹಮ್ಮದೀಯರು. ಅವರಿಗೆ ಭೇದಭಾವವಿಲ್ಲ ಎಲ್ಲರನ್ನೂ ಭ್ರಾತೃವಾತ್ಸಲ್ಯದಿಂದ ಕಾಣುತ್ತಾರೆ ಗಡಿನಾಡಿನಲ್ಲಿ ಒಂಬತ್ತರು ಹಿಂದೂ ದೇವಾಲಯಗಳಿವೆ ಅವುಗಳಿಗೆ ಮಹಮ್ಮದೀಯರು ಉದಾರ ದೃವ್ಯ ಸಹಾಯ ಮಾಡಿದ್ದಾರೆ. ನಮಗೆ ಮತಭೇದವು ಮುಖ್ಯವಲ್ಲ

'ವಿ ಕ'

ದಿ ಬಿಲ್ಲವರ ಎಸೋಸಿಯೇಶನ್, ಮುಂಬಾಯಿ.

ಈ ಕೆಳಗಿನವರನ್ನು ಈ ಸಂಸ್ಥೆಯ ೧೯೩೬-೩೭ನೇ ಸಾಲಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರನ್ನಾಗಿ ಆರಿಸಲಾಯಿತೆಂದು ತಿಳಿಸಲಾಗಿದೆ.

ಶ್ರೀಯುತರಾದ ಎಂ ಆರ್. ಚಂದರ್ (ಅಧ್ಯಕ್ಷ), ಎಂ. ಅಪ್ಪಣ್ಣ (ಉಪಾಧ್ಯಕ್ಷ), ಕೆ. ಕಾಮುಲಾಲ್ (ಜನರಲ್ ಕಾರ್ಯದರ್ಶಿ), ಯಂ. ಈಶ್ವರ (ಸಹಾಯಕ ಕಾರ್ಯದರ್ಶಿ), ಎಸ್. ಪಿ. ಅಂಚನ್ (ಕೋಶಾಧಿಕಾರಿ), ಎಂ. ಪಿ. ಸನಿಲ್ (ವಿದ್ಯಾಸಮಿತಿಯ ಅಧ್ಯಕ್ಷ), ಮಂಜುನಾಥ ಪಿ. ಅಮಿನ್ (ವಿದ್ಯಾಸಮಿತಿಯ ಕಾರ್ಯದರ್ಶಿ), ಕೆ. ಪಿ. ಸುವರ್ಣ (ಸರ್ವಸಾಧಾರಣ ಸಹಾಯ ಸಮಿತಿಯ ಅಧ್ಯಕ್ಷ), ಯಂ. ಎನ್. ಸುವರ್ಣ (ಸರ್ವಸಾಧಾರಣ ಸಹಾಯಸಮಿತಿಯ ಕಾರ್ಯದರ್ಶಿ), ಎಸ್ ಪಿ.ಸನಿಲ್ ಯಂ. ಜೊಗ್ಗ, ನೇಸ ಅಪ್ಪಯ್ಯ, ಪಲ್ಮಾರ್ ಅಪ್ಪಣ್ಣ, ಯಸ್. ಕೆ ಬೇಲಾರ್‌ಕಾರ್, ಗಂಗಯ್ಯ ಕುಳ್ಳನ್, ಎಂ. ಕುಪ್ಪಯ್ಯ, ಮುಂಜಪ್ಪ ಕುಳ್ಳನ್, ಪಿ. ಎಸ್ ಅಮಿನ್, ವೀರಪ್ಪ ಡಿ ಸುವರ್ಣ, ಪಿ. ಎಸ್. ಕರೋಡಿಯನ್, ಪಿ. ಸಂಕಪ್ಪ ಅಮಿನ್, ಯಸ್. ರಾಮು ಸಾಲಿಯಾನ್, ಲಿಂಗಪ್ಪ ಎ. ಕೋಟಿಯನ್, ದಿಳ್ಳ ಡಿ. ಸುವರ್ಣ, ಎಸ್. ಪಿ. ಕೋಟಿಯನ್

ವಿದ್ಯಾರ್ಥಿವೇತನ

ಇದು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ದಾನ ಕೊಡಲ್ಪಡುವುದು. ವೇತನವನ್ನು ಅಪೇಕ್ಷಿಸುವವರು ಈ ಕೆಳಗೆ ಸೂಚಿಸಿರುವ ಪ್ರಶ್ನೆಗಳ ಉತ್ತರ ಸಹಿತ ತಾ. ೩೦-೬-೩೬ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆ ಕೊಂಡಲ್ಲಿ, ಆರ್ಜಿಯಿಂದು ತಂದುಬಂದವರಿಗೆ ಈ ಸಂಸ್ಥೆಯಿಂದ ವೇತನವನ್ನು ಕೊಡಲಾಗುವುದು.

೧೫೫ ಮಿಲಿಯ ಜನರು ಕ್ಷಾಮದ ತುತ್ತಾಗಿರುವರು.

ಒಂದಾನೊಂದು ಕಾಲಭಲ್ಲಿ ಸಂತುಷ್ಟವಾಗಿದ್ದ ಚೀನಾದೇಶದ ಒಂದು ಕಡೆಯಲ್ಲಿ ಇಂತಹ ಭೀಕರ ಘಟನೆಯ ಸಂಭವಿಸಿದೆ. ಈ ದೇಶವು ಶಾಂಗಾಹಿಯಿಂದ ೧೧೦ ಮೈಲು ದೂರದಲ್ಲಿರುವುದು. ಒಂದಾನೊಂದು ಕಾಲದಲ್ಲಿ ಈ ಸ್ಥಳವು ಸಮಸ್ತ ಚೀನಾದೇಶದ ಉಗ್ರಾಣವೆಂಬ ಬಿರುದನ್ನು ಪಡೆದಿತ್ತು ಈಗ ಅಲ್ಲಿ ಭಯಂಕರ ಕ್ಷಾಮವು ಉಂಟಾಗಿರುತ್ತದೆ. ಕೆಲವರು ಆಹಾರಕ್ಕಾಗಿ ತಮ್ಮ ಹೆಂಡತಿ ಮಕ್ಕಳನ್ನು ಮಾರಾಟಮಾಡುತ್ತಿದ್ದರು ಇನ್ನೂ ಕೆಲವರು ದಿಂಗೆಬೋರರಾಗಿ, ಆಹಾರಕ್ಕಾಗಿ ಸನಿಹದ ನಗರಗಳ ಮೇಲೆ ದಾಳಿ ನಡೆಯಿಸುತ್ತಿದ್ದಾರೆ ಈ ಕ್ಷಾಮವು ಇವತ್ತಿಗೆ ನಾಲ್ಕು ವರ್ಷಗಳಿಂದ ಬೆಳೆಯುತ್ತಿದೆ ಇದಕ್ಕೆ ಕಾರಣ ಅಲ್ಲಿನ ಎರಡು ರಾಜ ಮನೆತನದವರಿಗೆ ಉಂಟಾದ ಯುದ್ಧವಂತೆ. ರಾಜ ಮನೆತನದವರು, ತಮ್ಮ ಕೂಡ ಉಳಿದ ಐಶ್ವರ್ಯವನ್ನು ಕಟ್ಟಿಕೊಂಡು ಬೇರೊಂದು ನಗರದಲ್ಲಿ ಸುಖವಾಗಿ ಕಾಲಹರಣೆಮಾಡುತ್ತಿದ್ದಾರಂತೆ.

ಅಮೇರಿಕಾದ ಸಿದ್ಧತೆಗಳು.

ಅಮೇರಿಕಾಕ್ಕೂ ಕೂಡ ಯುದ್ಧದ ಭೀತಿಯುಂಟಾಗಿರುತ್ತದೆ ಅವರ ವ್ಯಾಪಾರದ ಮುಖ್ಯ ಅಡಿಕಟ್ಟಾಗಿರುವ, ಪನಾಮಾ ಕಾಲಿವೆಯು ಎಷ್ಟರಮಟ್ಟಿಗೆ ಒಂದು ವ್ಯರಿಯ ಅಧಿಕ್ಯಮವನ್ನು ತಡೆಯಬಲ್ಲುದು ಎಂಬುದನ್ನು ತಿಳಿಯಲು, ಪರೀಕ್ಷೆ ಈಗ ನಡೆಯುತ್ತದೆ ಇದಕ್ಕಾಗಿ ಪನಮಾಕಾಲಿವೆಯಲ್ಲಿ ಒಂದು ಕೃತಕ ಯುದ್ಧವು ನಡೆಯುವುದಂತೆ ಆದರೆ ಇವು ಗಳು ಬಹಳ ರಹಸ್ಯವಂದ ನಡೆಯುವವು. ಯಾರಿಗೂ ಫೊಟೊಗಳನ್ನು ತೆಗೆಯಲು ಅವಕಾಶವಿಲ್ಲ ಪನಾಮಾಕಾಲಿವೆಯ ರಕ್ಷಣೆ ಕುರಿತು, ಅಮೇರಿಕಾ ಸರಕಾರವು ಹೆಚ್ಚಿನ ಕ್ರಮಗಳನ್ನು ನಡಿಸಬೇಕಾಗಿದೆ ಈ ಹಾದಿಯು ಅಮೇರಿಕಾದ ಕೈಗಳಿಂದ ತಪ್ಪಿದರೆ, ಅವರ ವ್ಯಾಪಾರಕ್ಕೆ ಎಷ್ಟು ಹಾನಿ ಉಂಟಾಗುವುದು..

ಸ್ವೀಕಾರ ವಿಮರ್ಶೆ:

ವಿಮಾವಾಣಿಜ್ಯ ಜನ್ಮೋತ್ಸವ ಸಂಚಿಕೆ: ಸಂಪಾದಕರು—ಜೆ ವಿ ದೊಡ್ಡವಿರಪ್ಪನವರ ಪುರಗಳು ೨೦೦ಕ್ಕೆ ಮಿಕ್ಕಿವೆ ಬೆಲೆ ೪ ಆಣೆ

ವಿಮಾ ವಾಣಿಜ್ಯವು ಕನ್ನಡ ನಾಡಿನಲ್ಲಿ ಸುಮಾರು ವರ್ಷ ವನ್ನು ಕಳೆದು, ವಿಮಾ ಪ್ರವರ್ಧಕದಲ್ಲಿ ಉಪಯುಕ್ತವಾದ ಸೇವೆಯನ್ನು ಮಾಡಿ, ಈಗ ಕನ್ನಡ ದ್ವಿತೀಯ ವರ್ಷಕ್ಕೆ ಕಾಲಿಟ್ಟಿರುತ್ತದೆ ದೀಪಾವಳಿ ನಡು, ಇದರ ವಾರ್ಷಿಕೋತ್ಸವ ಸಂಚಿಕೆಯಾಗಿರುತ್ತದೆ ಈ ಸಂಚಿಕೆಯಲ್ಲಿ, ಇದರ ನವ ವರ್ಷದ ಕಾರ್ಯಕಲಾಪಗಳನ್ನು ಶ್ಲಾಘಿಸಿಯೂ ಇವರ ಶ್ರೇಯಸ್ಸನ್ನು ಕೋರಿ, ಕರ್ನಾಟಕ, ಮತ್ತು ಭರತ ಖಂಡದ ಅನೇಕ ಪ್ರಮುಖರ ಸಂದೇಶಗಳು ಕೋಡಲಾಗಿವೆ ವಿಮಾ, ಬ್ಯಾಂಕಿಂಗ್, ಇತ್ಯಾದಿ ಸಾಂಪತ್ತಿಕ ವಿಚಾರಗಳ ಮೇಲೆ ಅನೇಕ, ಲೇಖಗಳು ಇದರಲ್ಲಿ ಕೊಡಲಾಗಿವೆ. ಅಲ್ಲದೆ ಭರತ ಖಂಡದ ಸಾಧಾರಣ ಎಲ್ಲಾ ವಿಮಾ ಸಂಸ್ಥೆಗಳ ವರಿಚಯವು ಇದರಲ್ಲಿ ಕೋಡಲಾಗಿವೆ. ಕನ್ನಡಿಗರು ವಿಮಾ ಸಂಸ್ಥೆಗಳ ವರಿಚಯವನ್ನು ಈ ಸಂಚಿಕೆಯಿಂದ ಸಾಕಷ್ಟು ಪಡೆಯಬಹುದಾಗಿದೆ ಈ ಜನ್ಮೋತ್ಸವಸಂಚಿಕೆಯ ಬೆಲೆ, ೪ ಆಣೆಗಳಾಗಿದ್ದರೂ, ಇದರಲ್ಲಿ ಕ್ರೌನ್ ೪ ಸ್ಯಾಜ್ ೨೦೦ ಪುಟಗಳಿವೆ. ಮುದ್ರಣವು ಚಲೋವಾಗಿದೆ.

ವಿಷಯಸೂಚಿ.

ಪುಟ.

ಸಂಪಾದಕೀಯ ... ೩
ಸಂಪಾದಕರಿಗೆ ಪತ್ರಗಳು ... ೪
ಮಹಾತ್ಮರ ಭಾಷಣ ... ೪
ವಿವಿಧ ಸಮಾಚಾರಗಳು ... ೧೩

ಅಗ್ರಲೇಖ.

ಹಿಂದೀ ಪ್ರಚಾರ ... ೧೦
ಸ್ಫುಟವಿಚಾರಗಳು ... ,,
ಮುಂಗಳೂರು, ತಾಲೂಕುಗಳಿಂದ ... ೧೧

ವರ್ತಮಾನ ಸಂಗ್ರಹ.

ದಸಚಾ ವೈಭವ ... ೯
ಸರಕಾರದವರ ವಿಜ್ಞಾಪನೆಪತ್ರಿಗೆ ... ೧೩

ಸ್ವದೇಶಾಭಿಮಾನಿ.

ಬಾ. ೧೯ನೇ ಶುಕ್ರವಾರ ಜೂನ್ ೧೯೩೬

ಹಿಂದೀ ಪ್ರಚಾರ.

"ಯಾವನೊಬ್ಬನು ತನಗೆ ಬೇಕಾಗಿರು ವಷ್ಟು ಜ್ಞಾನವನ್ನು ತನ್ನ ಮಾತೃಭಾಷೆಯ ಮೂಲಕವಾಗಿಯೆ ಪಡೆಯಲು ಸಮರ್ಥನಾಗಿರುವನು, ಆ ಮೂಲಕವಾಗಿಯೆ ಅತನು ಸಂಪೂರ್ಣ ಮಾನಸಿಕವಿಕಸನ ಹೊಂದಬಹುದು ಎಂದೇ ನನ್ನ ವಿಶ್ವಾಸವಿದೆ ಈ ಅಭಿಪ್ರಾಯದಲ್ಲಿ ನಂಬಿಕೆ ಇಲ್ಲದವರು ಮಾತೃದ್ರೋಹಿಗಳು!" ಹೀಗೆಂದು ಬೆಂಗಳೂರಿನ ಹಿಂದೀ ಪ್ರಚಾರ ಸಂಘದ ಸದಸ್ಯರಿಗೆ ಮಹಾತ್ಮಾಜೀಯವರು ಕಳೆದ ವಾರ ಬೋಧಿಸಿದರು

ಕರ್ನಾಟಕದಲ್ಲಿರುನ ಪ್ರತಿಯೊಬ್ಬನಿಗೂ ಹಿಂದೀ ಕಲಿತುಕೊಳ್ಳುವ ಅವಶ್ಯಕತೆಯಿದೆ, ಅದೇ ರಾಷ್ಟ್ರಭಾಷೆ ಅದನ್ನು ಕಲಿಯದಿದ್ದರೆ ಕೂಪಮಂಡೂಕಗಳಂತಿರಬೇಕಾಗುವುದು ನಮ್ಮ ವಿದ್ಯಾ ಇಲಾಖೆಯಲ್ಲಿ, ಪ್ರಾಥಮಿಕ ತರಗತಿಗಳಲ್ಲಿಯೆ ಹಿಂದಿಯನ್ನು ಕಲಿಸಬೇಕೆ? ಎಂಬ ಪ್ರಶ್ನೆಯನ್ನು ಆಗಾಗ ಮಹಾತ್ಮರಿಗೆ ಕೇಳುವವರೂ ಇದ್ದಾರಂತೆ ಮಹಾತ್ಮರ ಅಭಿಪ್ರಾಯದಲ್ಲಿ ಈ ತರಗತಿಗಳಲ್ಲಿ ಹಿಂದಿಯನ್ನು ಕಲಿಸಿದರೂ, ಅದು ಬಾಧಕವಲ್ಲವೆನಿಸದು, ಕಲಿಸದಿದ್ದರೆ ತಪ್ಪಾಗಲಾರದ ಅನುಕೂಲತೆಗೆ ತಕ್ಕಂತೆ ಮಾಡಬಹುದು

ವಿಲಾಯತಿಯಲ್ಲಿ ಪ್ರತಿಯೊಂದು ಮಗುವೂ ತನ್ನ ಮಾತೃಭಾಷೆಯನ್ನಲ್ಲದೆ ಮತ್ತೊಂದು ಭಾಷೆಯನ್ನು ಮೂಲದಿಂದಲೇ ಕಲಿಯಬೇಕಾಗಿದೆ ಹೀಗಿರುವುದರಿಂದ ನಮ್ಮ ವಿದ್ಯಾರ್ಥಿಗಳು ಮೇಲ್ತರಗತಿಗಳಲ್ಲಿಯಾದರೂ ಹಿಂದಿಯನ್ನು ಅರಿತುಕೊಂಡು, ಯಾವತ್ತು ಪಾಠಗಳನ್ನು ಮಾತೃಭಾಷೆಯಲ್ಲಿ ಹೇಗೆಯೊ ಹಾಗೆಯೆ ಹಿಂದಿಯಲ್ಲೂ ಕಲಿತುಕೊಳ್ಳುವ ಯೋಗ್ಯತೆಯುಳ್ಳವರಾಗಬೇಕು

ಹಿಂದೀ ಪ್ರಚಾರಕರು ಹಿಂದೀ ಪ್ರಚಾರವನ್ನಲ್ಲದೆ, ಗ್ರಾಮಾಂತರಗಳಲ್ಲಿ ಕನ್ನಡ ಪ್ರಚಾರವನ್ನು ಮಾಡುವ ಅಗತ್ಯವು ಈಗ ಇಲ್ಲ ಸಾಕಷ್ಟು ಜನರಾಗಿ ಎಲ್ಲರೂ ಹಿಂದಿ ತಿಳಿದ ಬಳಿಕ, ಅವರು ಉಳಿದ ಅವಕಾಶವನ್ನುಮುಂಜಿ ಹಿಂದುಳಿದವರಿಗೆ ಕನ್ನಡ ಕಲಿಸಲು ವಿನಿಯೋಗಿಸಬಹುದು ಈ ಸ್ಥಿತಿಗೆ ಬರಲು ಅವರಿಗೆ ವರ್ಷಗಳು ಬೇಕಾಗಬಹುದಾಗಿದೆ

ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಾಗಿ ಎಷ್ಟೋ ವಿಷಯಗಳನ್ನು ಸಂಗ್ರಹ ಮಾಡುವರಾದರೂ, ಪರೀಕ್ಷೆ ಮುಗಿದ ಬಳಿಕ ಅವನ್ನೆಲ್ಲಿ ಮರತೇ ಬಿಡುವರು ಜ್ಞಾನಸಂಪಾದನೆಯಮೇಲೆ ಅವರಿಗೆ ಮಮತೆ ಇಲ್ಲ, ಪಾಸಿನ ಮೇಲ್ಕೆ ಅವರಿಗೆ ಬಹಳ ವೋಹವಿದೆ ಆದರೆ, ಹಿಂದೀಕಲಿಯುವವರು ಆಯಾ ಭಾಷಾ ಶರೀಕ್ಷೆಯಲ್ಲಿ ಪಾಸಾಗಬೇಕೆಂಬ ಆಸೆ ಆಸೆಯಿಟ್ಟುಕೊಂಡು ಕಲಿಯುವದರಿಂದ ಜ್ಞಾನವನ್ನೂ ಸಂಪಾದಿಸಿಕೊಳ್ಳಲು ಅತುರರಾಗಿರಬೇಕು. ಜೀವನೋಪಾರ್ಜನೆ ಮಾಡುವ ಒಂದು ಸಾಧನವಾಗಿ ಜನರು ಹಿಂದಿಯನ್ನು ಕಲಿಯಬೇಕಾಗಿ ಹಿಂದೀ ಪ್ರಚಾರಕರು ಎನ್ನುವುದಿಲ್ಲ.

ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಲ್ಲಿ ಎಷ್ಟೋ ಸ್ತ್ರೀಯರು ಇರುವುದು ತೃಪ್ತಿಕರವಾಗಿದ್ದು, ದೇಶಾಭ್ಯುದಯವು ಸಾಗುವ ದೆಂಬುದಕ್ಕೆ ಹೆಚ್ಚಿನ ಭರವಸೆಯನ್ನು ಕೊಡುವುದಾಗಿದೆ ಸ್ತ್ರೀಯರು ಎಷ್ಟು ಚೆನ್ನಾಗಿ ದೇಶಕಾರ್ಯಗಳಲ್ಲಿ ಸೇವಾಬುದ್ಧಿಯಿಂದ ನೆರವಾಗಬಲ್ಲರೋ, ಅಷ್ಟು ಚೆನ್ನಾಗಿ ದೇಶಕಾರ್ಯವು ಮುಂಬರಿಯುವುದು

ಅಂದು ಸೀತೆಯು ಇಲ್ಲದಿದ್ದಲ್ಲಿ, ಇಂದು ಶ್ರೀ ರಾಮನ ಪೂಜಾದಿಗಳೇ ನಡೆಯುತ್ತಿರಲಿಲ್ಲ ನಾವು ಸೀತಾರಾಮ ಎನ್ನುವುದನ್ನೆ ಸ್ಮರಿಸಬೇಕಲ್ಲದೆ ರಾಮಸೀತೆಯರನ್ನಲ್ಲ, ರಾಮಾಯಣದ ಕಾಲದಿಂದಲೂ ಭಾರತವರ್ಷದಲ್ಲಿ ಸಾರ್ವತ್ರಿಕವಾಗಿ ಹರಡಲಿರುವ ಒಂದು ಭಾಷೆಯು ಹಿಂದಿಯಾಗಿದೆ, ಅದು ಹಾಗಾಗಲೇ ಬೇಕು

ಕರ್ನಾಟಕದಲ್ಲಿರುವವರು, ತಮ್ಮ ಮೇರೆವಿಡಿರಿ ಭಾವಿಸಬಲ್ಲವರಾಗದಿರುವಲ್ಲಿ ಹಿಂದಿಯು ಸುಹತ್ಕವನ್ನು ತಿಳಿಯಲಾರರು ಆದರೆ ಕರ್ನಾಟಕದ ಗ್ರಾಮುಗಳ ಸಂದುಗೊಂದುಗಳಲ್ಲಿ ಸಹ, ಜನರ ದೃಷ್ಟಿಯು ಭಾರತ ವರ್ಷದ ಕಡೆಗೆ, ಕರ್ನಾಟಕದ ಗದಿಗಳಾಚೆಗೆ ಹರಿದೇ ಇದೆ ಹೀಗಿರುವ ಕಾರಣ, ನಾವು ಈ ದೃಷ್ಟಿಯ ಹರಿವನ್ನು ತಿಳಿಯದೆ, ಅದಕ್ಕಾಗಿ ಅನುಕೂಲತೆಗಳನ್ನು ಸಿದ್ಧಮಾಡಿಕೊಳ್ಳದೆ ಇರುವುದು ಅನ್ಯಾಯವು

ಸರಪ್ರಾಂತ್ಯಗಳಿಗೆ ತೆರಳಿದರೆ, ಅಲ್ಲಿ ಇಂಗ್ಲಿಷಿಂದಲೇ ಎಲ್ಲ ವ್ಯವಹಾರವನ್ನು ನಡೆಸಬಲ್ಲೆವೆಂದು ನಂಬುವವರಿದ್ದಾರೆ ಪ್ರಾಂತ್ಯಗಳಲ್ಲಿ ಎಲ್ಲ ವ್ಯವಹಾರವನ್ನು ನಡೆಸಬಲ್ಲೆವೆಂದು ನಂಬುವವರಿದ್ದಾರೆ ಪ್ರಾಂತ್ಯಗಳಿಗೆ ಎಲ್ಲ ವ್ಯವಹಾರವನ್ನು ನಡೆಸಬಲ್ಲ ಹತ್ತು ಪ್ರತ್ಯು ಸಾವಿರ ಮಂದಿ ನೂತ್ಯರೇ ಇದ್ದರೆ ಸಾಕೆಂದು ನಿನ್ನ ಅಭಿಪ್ರಾಯವಾದರೆ, ಇಂಗ್ಲಿಷು ಬಲ್ಲ ಇನ್ನೂ ಇನ್ನೆ ನೂರು ಮಂದಿ ಲ್ಕಂತಹ ವ್ಯವಹಾರವನ್ನು ನಡೆಸಬಹುದು ಆದರೆ, ಇನ್ನೂ ಮೊತ್ತ ವ್ಯವಹಾರ ನಡೆಸುವುದಿಲ್ಲ ಇಂಗ್ಲಿಷು ಮಾತ್ರವೇ ವ್ಯವಹಾರದ ಭಾಷೆಯಾಗಲಾರದು

ಕೋಟ್ಯಾಂತರ ಜನರಿಗೆ ಅಲ್ಲದಿದ್ದರೂ ಲಕ್ಷಾಂತರ ಜನರಿಗಾದರೂ ಹಿಂದಿಯ ಜ್ಞಾನವು ಅತ್ಯಾವಶ್ಯಕವಾಗಿದೆ ಆದುದರಿಂದ ಇನ್ನೆಷ್ಟು ವರ್ಷಗಳ ತನಕ ಹಿಂದೀ ಪ್ರಚಾರವು ನಡೆಯು ತಕ್ಕದಾಗಿದೆ ಲಕ್ಷಾನುವಿ ಜನರು ಇಂಗ್ಲಿಷು ಬಲ್ಲವರಾಗುವುದು ಕಷ್ಟ ಹಿಂದೀ ಬಲ್ಲವರಾಗುವುದು ಸುಲಭ ಇಂಗ್ಲೀಷು ಜ್ಞಾನವು ಅನ್ನ ಸಂಪಾದನೆಯೊದಗಿಸದಿರುವಲ್ಲಿ ವ್ಯರ್ಥವಾಗಿದೆ ಹಿಂದೀ ಜ್ಞಾನವು ಅನ್ನ ಸಂಪಾದನೆಗಾಗಿಯಲ್ಲ, ಅದು ಮಾತೃಭಾಷೆಯಲ್ಲದವರೂ ಕಲಿತ ಕೊಳ್ಳುವುದು ಕಷ್ಟವಲ್ಲ

ಹಿಂದೀ ಭಾಷೆಯನ್ನು ೫೦ ಕೋಟಿಜನರು ಆಡುತ್ತಿರುವರು ನೂರಹತ್ತು ಲಕ್ಷ ಕನ್ನಡ ಮಾತಾಡುವ ಕರ್ನಾಟಕ ೧೨೫ಕೋಟಿ ಜನರು ಆಡಬಲ್ಲ ಭಾಷೆಯನ್ನು ಕಲಿತುಕೊಳ್ಳಬೇಕೆನ್ನು ಉತ್ಪ್ರೇಹವಿಲ್ಲದ್ದಲ್ಲವೇ?

ಕನ್ನಡ ಬಲ್ಲವರು ಹಿಂದೀ ಕಲಿಯುವುದು ಕಷ್ಟವೆನ್ನುವ ಕೆಲವರಿರುವರು, ಇದಿಲ್ಲಿ ಸುಸ್ಪಷ್ಟವಾಗಿ ಒಂದೇ ಒಂದು ತಾಸಿನಾದರೂ ಹಿಂದೀ ಭಾಷೆ ಕಲಿಯಲು ಯತ್ನಿಸಿದ ಕನ್ನಡಿಗರು ಇದೊಂದು ಕಷ್ಟ ಕೆಲಸವೆನ್ನಲಿಲ್ಲವಾರರು ಈ ದೇಶದ ಎಲ್ಲ ಭಾಷೆಗಳಿಗೂ ಸಂಬಂಧವಿದ್ದೇ ಇದೆ ಎಷ್ಟೋ ಮಾತುಗಳು ಹಿಂದೀ ಕನ್ನಡ ಎರಡಿರಲ್ಲೂ ಸಾಮಾನ್ಯವಾಗಿವೆ ಇನ್ನು ತ್ತೆರಡು ಕೋಟಿ ಭಾರತೀಯರು ಆಡುವ ಭಾಷೆಯನ್ನು, ಕನ್ನಡಿಗರು, ದಿನಕ್ಕೆ ನಾಲ್ಕು ತಾಸು ನಂತೆ ಅಭ್ಯಾಸ ಮಾಡುವಲ್ಲಿ ಒಂದೇ ತಿಂಗಳಲ್ಲಿ ಕಲಿತುಕೊಳ್ಳಬಹುದಾಗಿದೆ. ವ್ಯಾಕರಣದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿರುವುದು: ಆದಷ್ಟಕ್ಕೆ ಮಾತ್ರ ಇನ್ನು ಅವಕಾಶ ಬೇಕಾಗಿದೆ.

ಮುಸ್ಲಿಮರು ಎಲ್ಲಿದ್ದರೂ, ಆಯಾ ಪ್ರಾಂತಿಕ ಭಾಷೆಯನ್ನು ಕಲಿಯುವರು, ಆದರೆ ಅವರಲ್ಲಿ ಪ್ರತಿಯೊಬ್ಬರೂ ಉರ್ದು ಭಾಷೆಯನ್ನು ಕಲಿಯದೆ ಇಲ್ಲ. ಹಿಂದಿ, ಹಿಂದುಸ್ಥಾನಿ, ಉರ್ದು ಭಾಷೆಗಳ ಮೂಲ ತತ್ವವು ಒಂದೇ ವ್ಯಾಕರಣ ಒಂದೇ ರೀತಿ ಹೀಗಿರುವುದರಿಂದ ಮುಸ್ಲಿಮರು ಎಲ್ಲಿ ನೇರಿದರೂ ಒಂದೇ ನೂತನನ್ನು ಆಡಬಲ್ಲರು ಹಿಂದಿಯು ಪ್ರಚಾರಗೊಂಡದೆ ಸರಕಾರೂ ಒಂದೇ ಭಾಷೆಯನ್ನಾಡಲು ಅನುಕೂಲವಾಗುವುದು ಇದಕ್ಕಿಂತ ಹೆಚ್ಚಿನ ಭಾಗ್ಯವುಂಟೆ?

ಹಿಂದಿ ಕಲಿತರೆ ಕನ್ನಡವು ಮೂಲೆಪಾಲಾಗುವುದೆಂಬ ಬೆದರಿಕೆ ವ್ಯರ್ಥವಾಗಿದೆ ಪ್ರಾಂತಿಕ ಭಾಷೆಗಳಿಗೆ ಹಿಂದಿಯಿಂದ ಬಲಬರುವುದು ಹಿಂದಿ ಕಲಿತವರು ಪ್ರಾಂತಿಕ ಭಾಷೆಯನ್ನು ಅಪ್ಪೆ ಅಥವಾ ಇನ್ನಷ್ಟು ಚೆನ್ನಾಗಿ ಆಡಬಲ್ಲರು

ಹಿಂದೀ ಪ್ರಚಾರಕರಿಗೆಂದು ಕೊಟ್ಟ ಈ ಭಾಷಣದಲ್ಲಿ ಅವರಿಗೆ ಸರಿಯಾದ ತಿಳಿವಳಿಕೆಯಿದೆ ಕನ್ನಡಿಗರಿಗೆ ಹಿಂದೀ ಕಲಿಯಲು ಆಶ್ವಾಸನವಿದೆ ಹಿಂದೀ ಕನ್ನಡಿಗರೊಳಗೆ ವೈಷಮ್ಯ ಬರಲು ಉಂಟಾದ ಕಾರಣಗಳು ಬೇರೆ ಇವೆ ಅವನ್ನು ಎಣಿಸದೆಯೆ, ಹಿಂದಿಯ ಕಡೆಗೆ ಗಮನವಿರಲಿ ಕನ್ನಡವನ್ನು ಬಲಗಡಿಸಲು ಹಿಂದಿ ಅಭ್ಯಾಸವಾಗಲಿ ಕನ್ನಡವನ್ನು ಗಳಹದೆ, ಮೂಲೆಗೊತ್ತದೆ, ಹಿಂದಿಯನ್ನುವಿಧ್ವಂಸದೆ ಪ್ರಚಾರಕರು ಸಾಗಿದರೆ ಹಿಂದಿಗೆ ವೃದ್ಧಿಯುಂಟು, ಕನ್ನಡಕ್ಕೆ ಕುಂದಿಲ್ಲ

ಸ್ಫುಟವಿಚಾರಗಳು

ಇಟಲಿಗೆ ಬುದ್ಧಿ ಕಲಿಸುವುದಕ್ಕೆಂದು

ಜನಾಂಗ ಸಭಾ ಸದಸ್ಯರುಹೊರಿಸಿದ್ದ ಬಹಿಷ್ಕಾರ ವಿಧಾನವು ಇನ್ನು ಇರಬೇಕೇ, ಅಥವಾ ಸಾಕೇ ಎಂಬ ವಿಚಾರದೀಗ ಸಭೆಯ ಮುಂದೆ ಬಂದಿದೆ ಆರ್ಬೀಟಾಯಿನ ರಾಜ್ಯದ ಪತಿ ಸಿಧಿಯು ಅಬಿಸಿನಿಯದಲ್ಲಾಗುತ್ತಿದ್ದ ಯುದ್ಧವು ಕೊನೆಗೊಂಡ ಬಳಿಕ ಇನ್ನೇಕೆ ಈ ಬಹಿಷ್ಕಾರ ಎಂದು ಸೂಚನೆಕೊಟ್ಟರುವನು ಆದರೆ, ಯಾವನೊಬ್ಬನು ನಿಷ್ಕಾರಣವಾಗಿ ಮತ್ತೊಬ್ಬನ ಮೇಲೆ ಬಿದ್ದು ಗಾಯಗೊಳಿಸಿರಲು, ಅವನನ್ನ ಕೈದುಮಾಡಿ, ಗಾಯಗೊಂಡವನು ಸತ್ತ ಕೂಡಲೆ ಕೈದುಮಾಡಿದವನನ್ನು ಬಿಡುಗಡೆ ಮಾಡುವುದು ನ್ಯಾಯವಾದೀತೆ ಎಂದು ನ್ಯಾಯವಾದಿಗಳ ಕೆಲವರು ಪ್ರಶ್ನೆಯಾದ ತ್ರಿರುವರ ಬ್ರಿಟನ್ನ ಆರ್ಜೆಂಟಾಯಿನದ ಸೂಚನೆಯನ್ನು ಮನ್ನಿಸ ವುವಿಲ್ಲವಾದರೂ, ಅಬಿಸಿನಿಯಕ್ಕೆ ನ್ಯಾಯ ಸಲ್ಲಿಸ ಬೇಕಾದರೆ, ಸೈನ್ಯಗಳನ್ನ ಅಲ್ಲಿಗೆ ಕಳಹಿ ಇಟಲಿಯವರನ್ನು ಅಲ್ಲಿಂದ ಹೊರಗೆಡವದೆ ನ್ಯಾಯವುಂಟಾಗಲಾರದು ಎಂಬೀ ಕಾರಣದಿಂದ, ಮುಂದೆ ಹೇಗೆ ನಡೆಯಬೇಕೋ ಅದನ್ನು ಜನಾಂಗ ಸಭೆಯೇ ನಿರ್ಣರ್ಸಿಸಬೇಕಾಗಿದೆ ಯುದ್ಧವಾಯಿತು ಆತುರತೆಯು ಇಂಗ್ಲೆಂಡಿಗೆಯಿಲ್ಲ, ಇಟಲಿಯನರು ಅಬಿಸೀನಿಯದವರನ್ನ ತನ್ನ ಕಡೆಗೆ ಒಲಿಸಿಕೊಳ್ಳುವುದಕ್ಕೆ ನಾನಾ ಬಗೆಯ ಪ್ರಲೋಭನೆಗಳನ್ನುತೋರಿಸುತ್ತಿರುವರು ಅವರಾದರೂ ಈ 'ಸುಧಾರಣೆ'ಗೆ ಒಪ್ಪಬಹುದೆಂಬ ಸಂದೇಹವೂ ಇದೆ ಆದರೆ, ಯುದ್ಧ ಕಾಲದಲ್ಲಿ ಇಟಲಿಯು ತಪ್ಪಿತ ಸ್ಥರಾಜ್ಯವೆಂದು ಸೆಂಕ್ಷನುಗಳನ್ನು ಜ್ಯಾರಿಗೆ ತಂದ ಜನಾಂಗ ಸಭೆಯು, ಈಗ ತಪ್ಪಿತಸ್ಥನು ಗೆದ್ದೊಡನೆಯೆ ಸೆಂಕ್ಷನುಗಳನ್ನು ಹಿಂತೆಗೆದರೆ, ಇದ್ದೂ ಕಾಯೋ ಗವೇನಾದೀತು? ಹೀಗಿರುತ್ತ, ಈ ಪ್ರಶ್ನೆಯನ್ನು ಜನಾಂಗ ಸಭೆಯು ಇತ್ಯರ್ಥಿಸುವುದೂ ಅಷ್ಟು ಸುಲಭವಾಗಿಲ್ಲ.

ತಪ್ಪು ತಿಳಿವಳಿಕೆ ಹರಡಿಸುವ ವಿಧಾನಗಳು

ವಂಡಿತ ಜವಾಹರಲಾಲರು ಸಮಾಜವಾದವನ್ನು ಕುರಿತಾಗಿ ತಮ್ಮ ಅಧ್ಯಾಯಗಳನ್ನು ಹೇಳುವುದರೊಳಗೆ, ವೆಲ್ಲಿಂಗ್ಟನಲ್ಲಿ ಜಮದಗ್ನಿ ನಾಯಕರೆಂಬವರು ಈ ತತ್ವವನ್ನು ಅಂಗೀಕರಿಸುವುದರಿಂದ ರಾಮರಾಜ್ಯವು ಹೇಗೆ ಸ್ಥಾಪನೆ ಹೊಂದುವುದೆಂಬುದರಲ್ಲಿ ವಿವರಿಸಿ ಒಂದು ಉಪನ್ಯಾಸ ಮಾಡಿದರು ಹುಚ್ಚು ಕನವು ಎನ್ನುವರ ನುಟ್ಟಿಗೆ ಏರಬಹುದೆಂಬುದಕ್ಕೆ ದುರ್ಯೋಧನೆಯೆ ಪ್ರಮಾಣವಾಗಿದೆ. ಸ್ವರ್ಗದಿಂದ ಇಂದ್ರನ ವೈಭವಗಳನ್ನೆಲ್ಲವನ್ನು ಭೂಮಿಗೆ ತಂದೊಡಗಿಸುವರೆ ಈ ಬಗೆಯ ರಾಜ್ಯಭಾರವೇ ಕಾರಣವೆನ್ನುತ್ತಾ, "ಮೈದಾನುಗಳಲ್ಲಿ ಭತ್ತವನ್ನು ರಾಶಿಯಾಗಿಟ್ಟು, ಯಾರಿಗೆ ಅದು ಎಷ್ಟು ಬೇಕೋ ಅಷ್ಟನ್ನು ಅವರು ಎತ್ತಿಕೊಳ್ಳಬಹುದು, ನವರತ್ನಗಳನ್ನು ಸಿಕ್ಕಲ್ಲಿ ರಾಶಿ ಹಾಕಿಡಬಹುದು ಕಳ್ಳರೂ, ವ್ಯಭಿಚಾರಿಗಳೂ ಇರಲಾರರು, ಕಳ್ಳ ಕನವೆಂಬುದಕ್ಕೆ ಅವ್ಯದವೇ ಇರಲಾರದು, ಸಾಲ ವೆಂಬುದೂ ಇಲ್ಲ, ಸಾಲಕ್ಕಾಗಿ ಜೈಲು ದೊರೆವುದೂ ಇಲ್ಲ, ಹೊಳೆಗಳು ನೆರೆ ಏರಿ ಹಾವಳಿಯೆಬ್ಬಿಸಬಹುದೆಂಬುದೊಂದೇ ಮಾತ್ರ ತಕ್ಕೀರು ಉಂಟಾಗಬಹುದು, ಬ್ರಾಹ್ಮಣರಿಗೆ ಪ್ರತಿದಿನವೂ ಮೃಷ್ಟಾನ್ನ ಭೋಜನವಿರುವುದು, "ಇನ್ನೂ ಬೆಲ್ಲ ಇಕ್ಕಿ" ಎಂಬುದೇ ಕೊಗು ಎಲ್ಲೆಲ್ಲಿಯೂ ಕೇಳಿ ಬಂದೀತು, ಕೇಳಿದಷ್ಟು ಬೆಲ್ಲ ಬಡಿಸುವರು' ದರಿದ್ರರೇ ಉಳಿಯಲಾರರು, ಎಲ್ಲರ ಹೊಟ್ಟೆಗಳು ಕುಂಬಿಕುಳುಳುವುವು," ಎಂದು ವಿವರಿಸಲಾಯಿತು

ಈ ನಗ್ನನೆಯನ್ನು ಬ್ರಾಹ್ಮಣರು ಕೇಳಿ ಕಮ್ಮಂತಹ ಹೊಟ್ಟೆಚಾಕರ ಕೃಪೆಗಾಗಿಯೆ ನಾನ ಬಗೆಯ ವಿಚಿತ್ರರಾಜಭಾರ ಕ್ರಮವೊಂದು ಉಂಟಾಗುವುದಾಗಿ ಹಿಗ್ಗಿದರೇನೊ? ,, ಪ್ರತಿಯೊಬ್ಬರು ರವೀಂದ್ರನಾಥರಂತೆ ಕವಿಗಳೂ, ರಾಮರಂತಹ ವಿಜ್ಞಾನಿಗಳೂ ಆಗುವರು '' ಎಂಬುದನ್ನೋದುವಾಗ ಈ ಜನ ದಗ್ಗಿಗಳಂತೆ ಪ್ರತೀಯೊಬ್ಬರೂ ಆಗಲಾರದೆಂದರೂ ಅವರು ಹೇಳಿದ ಮಾತನ್ನು ಸ್ಮರಿಸಿಕೊಂಡು, ಅವರ ಉನ್ನತಿವು ಅಲ್ಲಿಗೆ ನುಗಿಯತಕ್ಕೆಂದು ಕೃತ್ರಿಮ ಬೇಕಾಗಿದೆ ಭಾಷಣವನ್ನು ಕೇಳಿದನರಲ್ಲಿ ಹೆಚ್ಚಿನವರ ಹೃದಯಂಗಮವಾದ ನೂತನಗಳಿಂದ ಅವರು ವೋಸಗೊಳ್ಳದಂತ ಎಲ್ಲ ರಾಜಕೀಯ ಪಕ್ಷಗಳವರೂ ಈ ಬಗೆಯ ಭಾಷಣಗಳನ್ನು ಬಂಡಿಸಲೇ ಬೇಕಾಗಿದೆ ಇಲ್ಲದಿದ್ದರೆ ರಾಷ್ಟ್ರ ಸಭೆಯು ಇದರ್ಗಳಿಗೆ ಈ ಟಾಗುವ ಹಾನಿ ಗಿಂತ, ದೇಶದ ಜನತೆಯು ಮನಸ್ಸಿನಲ್ಲಿ ವಿಷವ ಈ ಟಾಗುವ ಬೆದರಿಕೆಯುದೆ

ಭಾರತೀಯ ಸಾಹಿತ್ಯ ಪರಿಷತ್ತು

ಎಂಬೊಂದು ಸಭೆಯು ಕಳೆದ ಎಪಿಲ್ ತಿಂಗಳಲ್ಲಿ ನಾಗಪುರದಲ್ಲಿ ಸ್ಥಾಪನೆ ಹೊಂದಿತು ಮೂಲತ ಭಾರತೀಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ಫೋತವು ಮಹಾ ಭಾರತರಾಮಾಯಣಾದಿಗಳ ಕಾಲದಿಂದಲೂ ಹರಿಯುತ್ತಲೇ ಇದೆಯಾದ ದರಿಂದ ಅದನ್ನು ಪುನಃ ಸರಾಗವಾಗಿ ಸಮಸ್ತ ಭಾಷೆಗಳಲ್ಲಿ ಸಾಹಿತ್ಯಕ್ಕೆ ಅನುಕೂಲವಾಗುವ ಹಾಗೆ ತಿದ್ದಿಕೊಡುವಂತೆ ಪ್ರಯತ್ನಿಸುವುದೇ ಈ ಪರಿಷತ್ತಿನ ಉದ್ದೇಶವಾಗಿದೆ ಹಂಸ ಎಂಬೊಂದು ಹಿಂದೀ ಪತ್ರಿಕೆಯನ್ನು ಹೊರಡಿಸಿ ಇತರ ಭಾಷೆಗಳಲ್ಲಿನ ಸಾಹಿತ್ಯಕೃತ್ಯಗಳನ್ನು ಇದರಲ್ಲಿ ತೀಖರಿಸುವುದೂ ಹಂಸದಲ್ಲಿನ ರತ್ನಗಳ ಸಭೆಯು ಇತರ ಭಾಷಾ ಸಾಹಿತ್ಯಗಳಿಗೂ ದೊರೆಯಂತೆ ಭಾಷಾಂತರಗಳ ಮೂಲಕ ವ್ಯವಸ್ಥಿಸುವುದೂ ಈ ಪರಿಷತ್ತಿನ ಉದ್ದೇಶವಾಗಿದೆ ಎಷ್ಟೋ ಇತರ ಭಾಷೆಯಲ್ಲಿ ಬರೆದ ಲೇಖಗಳನ್ನು ಇಂಗ್ಲಿಷಿಗೆ ತರ್ಜುಮೆಮಾಡಿ, ಅನಂತರ ಇಂಗ್ಲಿಷಿನಿಂದ ಹಿಂದಿಗೆ ಪರಿವರ್ತಿಸಿಕೊಂಡು ಈಗ ಪ್ರಕಟಿಸುತ್ತಿರುವ ಕಮವು ತೀರ ಅಕ್ಷೇಪಕರವಾಗಿದೆ ಪ್ರತಿಯೊಂದು ಪ್ರಾಂತ್ಯದ ಬೇರೆ ಬೇರೆ ಭಾಷೆಗಳಲ್ಲಿನ ಸಾಹಿತ್ಯವು ಭಿನ್ನಭಿನ್ನ ಮಾರ್ಗಗಳಲ್ಲಿ ನಡೆವ ಬದಲಾಗಿ, ಎಲ್ಲವೂ ಒಂದೇ ದಾರಿಯಾಗಿ ನಡೆವಂತೆ ಮಾಡುವುದು ಸರಿಯೇಅಸಂಗತವೇ ಎಂಬುದು ಒಂದು ತರ್ಕಾಸ್ಪದವಾದ ವಿಷಯವಾಗಿದೆ 'ಹಂಸ'ಕ್ಕೆ ಬೇಕಾದಷ್ಟು ಪ್ರಚಾರ ದೊರೆವಂತೆ ಮಾಡಲು ಇದೊಂದು ಉಪಾಯವೂ ಆಗಿರಬಹುದೆಂಬ ಊಹವೆಯುಂಟಾಗಿದೆ

ಮಂಗಳೂರು.

ಶ್ರೀ ಜೋರ್ಜ್ ಸಾರ್ವಜನಿಕರ ಸ್ಮಾರಕನಿಧಿಯ ಫಂಡಿಗೆ ಧನಸಹಾಯ ಮಾಡಿದ ಮಹಜನ್ಮರ ಹೆಸರುಗಳು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ತೀಯಾ ಶಕ್ತಿ ಸಂಘ—ತಾ. ೨೧ನೇ ಆದಿತ್ಯವಾರ ಬೆಳಿಗ್ಗೆ ೧೦ಕ್ಕೆ ಶ್ರೀ ರಾಮಚಂದ್ರಪ್ಪ ಮಿಸ್ತ್ರಿಯವರ ಮನೆ ರಾಜಾಂಔಟ್‌ನಲ್ಲಿ ಮತ್ತು ಎಂ. ಕೆ ಗೋಪಾಲಿಂದರ್‌ರವರ ಛಾಪಣದಿರುವುದು.

ಮಂಗಳೂರು ಮುಸ್ಲಿಂ ಉಪಾಧ್ಯಾಯರ ಸಂಘದ ತನೇ ಮಾಸಿಕ ಸಭೆಯು ಇದೇ ಕಳೆದ ತಾ ೧೫ನೇ ಶನಿವಾರ ದಿನ ಮಂಗಳೂರು ಮಹಮ್ಮದನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಿಬಂತು. ಈ ಸಭೆಗೆ ಕೆನರಾ ಮಹಮ್ಮದನ್ ರೇಂಜಿನ ಶಾಲೆಗಳ ವಿಶೇಷ ಇನ್ಸ್‌ಪೆಕ್ಟರ್ ಮೋಹಮ್ಮದ್ ಬಿ ಎ ಎಲ್. ಬಿ ಯವರು ಅಧ್ಯಕ್ಷರಾಗಿದ್ದರು. ಸಭಾರಂಭದಲ್ಲಿ ಮದ್ರಾಸಲ್ ಬಿರಾಯಿ ಶಾಲೆಯ ವಿದ್ಯಾರ್ಥಿಗಳಿಂದ ದೇವರ ಪ್ರಾರ್ಥನೆ ಮಾಡಿ ಸಂಗೀತಗಳು ಹಾಡಿದ ಮೇಲೆ ದಿವಂಗತ ಡಾಕ್ಟರ್ ಅನ್ಸಾರಿ, ನಮ್ಮ ಜಿಲ್ಲಾ ಕಲೆಕ್ಟರ್ ಜಾನ್ ಬಹದ್ದೂರ್ ಮುಹಮ್ಮದ್ ಹ ದಾಯಿಜ್ ಸಹೇಬ್ ಬಹದ್ದೂರರವರ ಪ್ರಿಯ ಪುತ್ರ ದಿವಂಗತ ಮುಹಮ್ಮದ್ ಅಕ್ಬರ್ ಬಿ ಎ ಯವರು ಮುಂತಾದ ಸ್ಮಾರೋ ಕೊಲೀಜಿನ ಪ್ರೊಫೆಸರ್ ಡಾಕ್ಟರ್ ಹಾಮಿದ್. ಲಿ ಸಹೇಬ್ ಬಹದ್ದೂರ್ ಬಾರೆಟ್-ಲಾ ದಿವಂಗತ ಸ್ಥಿಯ ಪತ್ನಿಯವರ ಹೈದರಾಬಾದಿನ ಕೋಲೇಜ ಪ್ರೊಫೆಸರ್ ದಿವಂಗತ ಮುಹಮ್ಮದ್ ಮರ್ಮಾಡಿಯೋ ಸಿಕ್ಸ್‌ಹಾಲ್‌ರವರ ಗಾಬಿಯೋರ್ ಚೀಫ್ ಜಸ್ಟೀಸರಾಗಿದ್ದ ದಿವಂಗತ ಆಕ್ರಾಸ್ ತಯಬ್ಜಿ ಇವರುಗಳ ಅಕಾಲ ಮರಣದ ಕುರಿತು ಡುಆಸಾಚರಿಯ ಕಂಬಾವುಗಳನ್ನು ಪಾಡಿದ ಮೇಲೆ ಮೃತರುಗಳ ಆತ್ಮಕ್ಕೆ ಪರಲೋಕ ಶಾಂತಿಯನ್ನು ಬಯಸಿ ಸ್ವಾರ್ಥಿಸಲಾಯಿತು. ತು ಮತ್ತು ಮೃತರ ಕುಟುಂಬದಕ್ಕೂ ಪಾಗಿರುವ ಈ ಅಪಾರವಾದ ದುಃಖದಲ್ಲಿ ನಮ್ಮ ಸಂಘದವರೂ ಸಹಭಾಗಿಗಳಾಗಿರುವರೆಂಬ ಈ ದುಃಖಸೂಚಕವನ್ನು ಕೊಡುವಿಗಳು ಮೃತರುಗಳ ಕುಟುಂಬಕ್ಕೆ ಕಳುಹಿಸಿಕೊಡಬೇಕೆಂದೂ ನಿರ್ಣಯಿಸಲಾಯಿತು.

ತರುವಾಯ ಕಾರ್ಯದರ್ಶಿಯವರು ಒಂದಿ ಸಭೆಯು ಮುಂದಿನ ಗತ ಸಭೆಯ ವರದಿಯು ಸರ್ವಾನು ಮತದಿಂದ ಮಂಜೂರು ಮಾಡಲ್ಪಟ್ಟಿತು. ಆ ಮೇಲೆ ಮುಂಗ್ಲೂರು ಗ ಹ ಎ ಟ್ರೈನಿಂಗ್ ಶಾಲೆಯ ಅಧ್ಯಾಪಕರಾದ ರಾ ಹೋಬಯ್ಯನವರು ಕನ್ನಡದಲ್ಲಿ ಮಾಡಿದ ಸಾರವನ್ನು ಕೊಟ್ಟು ಉಪಾಧ್ಯಾಯ ಟ್ರೈಂಡಕ್ಕೆ ಹೊಸ ಮಾಗ್ಗವನ್ನು ಗುರುತ್ಸಿಗೆ ಒಪ್ಪುವಂತಹ ಲೇಖನಿಯಲ್ಲಿ ತೋರಿಸಿಕೊಟ್ಟರು. ತರುವಾಯ ಕೆನರಾ ಹೈಸ್ಕೂಲಿನ ಉಪಾಧ್ಯಾಯರಾದ ಮಿ ರಾ ಎಂ ಎನ್ ಕಾಮತರವರು ಸದರೀ ಪಾಠವನ್ನು ಕೊಂಡಾಡಿ ಈ ರೀತಿಯ ಕಲಿಸಿ ವಿಕಯಿಂದ ಮಕ್ಕಳಿಗೆ ಉಂಟಾಗುವ ಅನುಕೂಲ ನಿದ್ಯಾಭ್ಯಾಸ ಎಂಬ ವಿಷಯವಾಗಿ ಭಾಷಣ ಮಾಡುತ್ತಾ ಸಭೆಯವರನ್ನು ಆನಂದಸಾಗರದಲ್ಲಿ ಮುಳುಗಿಸಿದರು. ಇವರ ಭಾಷಣವು ಮುಗಿಯುವ ಪರಿಯಂತರವೂ ಇಡೀ ಸಭೆಯು ಅನಂದದ ನೆಗೆಗಡಿಯಲ್ಲಿ ತೇಲಾಡುತ್ತಿತ್ತು.

ತರುವಾಯ ಸದ್ ಕಮಿಟಿಯವರ ಕೆಲವು ನಿರ್ಣಯಗಳನ್ನು ಸಭೆಯು ಮುಂದಿಟ್ಟಿದ್ದು, ಮುಂಜಾವು ಮಾಡಲಾಯಿತು. ಮತ್ತು ಮುಂದಿನ ಸಭೆಯು ತಾರೀಕು ೪-೬-೬೬ನೇ ಶನಿವಾರ ದಿನ ನಡೆಯುವೆಂತಲೂ ನಿರ್ಣಯಿಸಿದ ಮೇಲೆ ಅಧ್ಯಕ್ಷರು ಸುರಸವಾದ ಉಚಿತ ಭಾಷಣವನ್ನು ಮಾಡಿದರು. ತರುವಾಯ ಕಾರ್ಯದರ್ಶಿಯವರು ಅಧ್ಯಕ್ಷರಿಗೂ ಭಾಷಣಕರ್ತರಿಗೂ ಮಾದರೀ ಪಾಠ ಕಲಿಸಿದವರಿಗೂ ಧನ್ಯವಾದ ಸಲ್ಲಿಸಿದ ಮೇಲೆ ಸಭೆಯು ಬರಕಾಸ್ತು ಮಾಡಲಾಯಿತು.

ಜಿಲ್ಲಾ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲಾ ಮುಖ್ಯ ಅಧ್ಯಾಪಕರ ಅವಗಾಹನೆ ಬಗ್ಗೆ—ತಾರೀಕು ೭-೬-೬೬ರಲ್ಲಿ ಕೊಟ್ಟ ಸರ್ಕಲಿನ ನಂಬ್ರ ೩೧ ಮೇರೆಗೆ ಜಿಲ್ಲಾ ಬೋರ್ಡಿಗೆ ಅಡಕೆಯಲ್ಲಿರುವ ಎಲ್ಲಾ ಹೊಸ ಉಪಯೋಗಿಸಲ್ಪಟ್ಟ ಪುಸ್ತಕಗಳನ್ನೆ (ಅವುಗಳ ಟೆಕ್ಸ್ಟ್ ಬುಕ್ ಕಮ್ಮಿಟಿಯವರಿಂದ ಪೋರ್ಟ್ ಸೈಂಟ್ ಜೋರ್ಜ್ ಗಡೆಗು Book No 1B, 26-5-35, 12-6-36ರ ಪ್ರಕಾರ ಹೊಂಜೂರಾತಿ ಹೊಂದಿದ್ದರೆ ಮಾತ್ರ) ಉಪಯೋಗಿಸಬಹುದೆಂದು ಜಿಲ್ಲಾ ಬೋರ್ಡಿನ ವಿದ್ಯಾ ಆಫೀಸರರಾದ ಕೆ. ಸಂಜೀವ ಭಟ್ಟರು ಒಂದು ಸರ್ಕಿಲಾರನ್ನು ಹೊರಡಿಸಿರುವರು.

ಜಿಲ್ಲಾ ಬೋರ್ಡಿನ ನೌಕರರ ಸಂಘದ ಸಭೆಯು ಇದೇ ತಾ. ೨೦-೬-೬೬ನೇ ಆದಿತ್ಯವಾರ ದಿವಸ ಗಣಪತಿ ಹೈಸ್ಕೂಲಿನಲ್ಲಿ ಸೇರಲಿದೆ. ಜಿಲ್ಲಾ ಬೋರ್ಡಿನವರು ಇವರ ತಲಬಿನ ಮೇಲೆ ಹಾಕಿದ ರೂ. ೧೮ ಒಂದಾಣೆ ಕಡಿತ ಜಿಲ್ಲಾ ಬೋರ್ಡಿನ ಅಧ್ಯಕ್ಷರಿಗೆ ಒಂದು ಮನವಿ ಮಾಡಿ ಕೊಳ್ಳಲು ಸ್ಥಿತಿ ಸಮಿತಿಯು ರಚಿಸಿ ಇತ್ಯಾದಿ ವಿಚಾರ ಈ ಸಭೆಯಲ್ಲಿ ಚರ್ಚಿಸಲಾಗುವುದೆಂದು ಸಂಬಂದಪಟ್ಟವರು ತಿಳಿಸುತ್ತಾರೆ.

ರೈತರಿಗೆ ಸುಸಂಧಿ—೦೪೬೬, ಸಾಗುವಳಿ ಎತ್ತಿಗೆ ೧೯೫ ಪಿಡ್ಡಲ್ಪಟ್ಟು ನೀರಿಗೆ ಈ ಜಿಲ್ಲೆಗೆ ನೇಮಕರಾದ ಸ್ಪೆಶಲ್ ಲೋನ್ಸ್ ಅಧಿಕಾರರು ಈ ಕೆಳಗಿನ ಸ್ಥಳಗಳಿಂದ ಸಾಲದ ಅರ್ಜಿಗಳನ್ನು ಸ್ವೀಕರಿಸುವರು. ೧. ಮಂಗಳೂರು ತಾಲೂಕು—ಪಾಣೆಮಂಗಳೂರು ಮತ್ತು ಮಂಗಳೂರು ಪಿರ್ಕಾ. ೨ ಪುತ್ತೂರು ತಾಲೂಕು ವಿಟ್ಲ ಮತ್ತು ಪುತ್ತೂರು ಪಿರ್ಕಾ ಅರ್ಜಿ ಮಾಡುವವರಿಗೆ ರೂ. ೫೦೦೦ ಬೆಲೆಬಾಳುವ ಜಮೀನು ಇರತಕ್ಕದ್ದು ರುತ್ತು ಅವರಿಗೆ ರೂ ೨೦೬೯೦ ಕ್ಕಿಂತ ಮೇಲಲ್ಕ ಸಾಲಗಳಿರಬಾರದು. ಈ ಬಗ್ಗೆ ಅರ್ಜಿಕಾರದ ಇತ್ಯಾದಿಗಳನ್ನು ಅಯಾಯ ಪಿರ್ಕಾಗಳ ಟೌನ್ ಇನ್ಸ್‌ಪೆಕ್ಟರವರಿಂದ ಯೂ ಮಂಗಳೂರಿನ ಕಾಲೂರು ಆಫೀಸಿನ ಮುಂಗಡಯ ಲ್ಲಿರುವ ಸ್ಪೆಶಲ್ ಲೋನ್ಸ್ ಆಫೀಸರರ ಆಫೀಸಿನಿಂದ ಪಡೆ ಕೊಳ್ಳಬಹುದು ಬಡ್ಡಿ ದರವು ಶೇಕಡಾ ೫॥ ಸರೆ.

"ಬಾಂಧವ ಬಳಗ" ಈ ಸಲದ ಮಾಸಿಕ ಸಭೆಯು ಎಂದಿನಂತೆ ಕೆನರಾ ಹೈಸ್ಕೂಲಿನ ಭೂಪಟೇಂದ್ರ ಸಭಾಸದನದಲ್ಲಿ ಇದೇ ತಾ ೨೦ನೇ ಆದಿತ್ಯವಾರ ಗಂಟೆ ೪ ಕ್ಕೆ ಸರಿಯಾಗಿ ಜರಗಲಿದೆ ಬಳಗದ ಸದಸ್ಯರೆಲ್ಲರೂ ದಯ ವಿಟ್ಟು ಹಾಜರಾಗಬೇಕಾಗಿ ಬೇಡುತ್ತೇವೆ

ಕಳೆದ ಆದಿತ್ಯವಾರ ಮಂಗಳೂರು ಆರ್ಯ ಸಮಾಜ ಮಂದಿರದಲ್ಲಿ ಮಹಮ್ಮದ್ ಇಬ್ರಾಹಿಂ ಎಂಬ ಒಬ್ಬ ಮುಸಲ್ಮಾನ ಯುವಕನ ಶುದ್ಧಿಸಂಸ್ಕಾರವಾಯಿತು ಆತನು ಮಂಗಳೂರಿ ಒಂದು ಮನ್ನ ಸಾರಸ್ವತ ಕುಟುಂಬದವನಾಗಿದ್ದು ಐದಾರು ವರ್ಷಗಳ ಹಿಂದಲು ಇಸ್ಲಾಂ ಮತವನ್ನು ಸ್ವೀಕರಿಸಿದ್ದನು ಸಂಸ್ಕಾರಾತ್ಮಕ ದಲ್ಲಿ ಶ್ರೀಯುತ ಮೋಹನಸಿಸ್ತ ತಿಗಳಾರಿಯರು ಯ ಜ್ಞೋಪವೀತವನ್ನು ಕೊಟ್ಟು ಗಾಯತ್ರೀ ಮಂತ್ರೋಪದೇಶವನ್ನು ಮಾಡಿದರು ಮತ್ತು ರವೀಂದರಾವ್ ಎಂಬ ಆತನ ಪೂರ್ವದ ಹೆಸರನ್ನೇ ಇಟ್ಟರು

ಜೂನು ತಾ ೧೭ನೇ ಮಂಗಳವಾರ ರಾತ್ರಿ ೮ ಗಂಟೆಗೆ ಕುದ್ರೋಳಿಯಲ್ಲಿ ಭೀಕರ ಕೊಲೆಯು ನಡೆಯಿತು ತುಕ್ರ ಮತ್ತು ಗುರುವಪ್ಪ ಎಂಬ ಕೇರಳಾರ ಜಾತಿಯವರಿಬ್ಬರು ಕುದ್ರೋಳಿಯ ಹೋಟೆಲಿನಲ್ಲಿ ಕಾಳು ಕುಡಿದು ಹೊರಗೆ ಬಂದೊಡನೆ ಜಗಳವಾಡಿದರು ಆದರ್ಲ್ಲಿ ತುಕ್ರನೆಂಬವನು ಗುರುವಪ್ಪನಿಗೆ ಚೂರಿಯಾತ ತಿವಿದುದ್ದಾಗಿ ಅವನು ತಕ್ಷಣವೇ ಇಹಲೋಕವನ್ನು ತ್ಯಜಿಸಬೇಕಾಯಿತು ಮೃತನ ಶರೀರವನ್ನು ಬುಧವಾರ ದಿನ ಬಹಳ ವಿಜೃಂಭಣೆಯಿಂದ ಸೆರವಣಿಗೆ ಮಾಡಿ. ಸ್ಮಶಾನಕ್ಕೆ ಒಯ್ದರು ಶವದೊಂದಿಗೆ ಜನರು ಕಿಕ್ಕಿರಿದಿದ್ದರು

ಈ ಖಾರಿಯ ಮಜಿಸ್ಟ್ರೇಟ್ ಸ್ಥಾಯಿವಿಧಾಯಕ ಎಸೆರ್ ಬ್ಲಿಗೆ ಹರಿಜನರ ಪರವಾಗಿ ರಿಜರ್ವ್ ಮಾಡಿದ ಸ್ಥಾನಕ್ಕೆ ವಿ. ಎಸ್ ಉಳ್ಳರ್, ಇವರು ನಿಲ್ಲಲು ನಿಶ್ಚಿಸಿ ಪಾಡಿ ಪತ್ರಾರಿ ಆದಿಂದಿಂದ ಉಡ್ಡಿ, ಕುಂದಾಪ್ರಕ್ಕೆ, ಮತ್ತು ಕಾರ್ಕಳದ್ದ ಪ ಹಾಜರನರು ಕೊಂಗ್ರೆಸಿನ ಅಡಿಗೆ ಆತ್ಮ ಪ್ರೀತಿ ತೋರಿಸಿ ಮತಕೊಟ್ಟು ಇವರನ್ನು ಆರಿಸಬೇಕಾಗಿ ಇವರ ಪ್ರಾರ್ಥನೆ

ಕೆನರಾ ಹೈಸ್ಕೂಲು. ಕೆಲವು ವರ್ಷಗಳಿಂದೀಚೆ ಮುಖ್ಯೋಪಾಧ್ಯಾಯರ ಕೆಲಸವನ್ನು ನೋಡುತ್ತಿದ್ದ ರಾ ಶ್ರೀ ಬಿ ಅಚ್ಯುತ ಬಾಳಿಗರು ತಮ್ಮ ಮುಖ್ಯೋಪಾಧ್ಯಾಯ ವೃತ್ತಿಗೆ ರಾಜೀನಾಮೆ ಇತ್ತು. ಸಹಾಯಕ ಉಪಾಧ್ಯಾಯರಾಗಿ ಕೆಲಸವಮಾಡಲು ಇಚ್ಛಿಸಿದುದರಿಂದ ರಾ ಶ್ರೀ ಕೆ ವಿಶ್ವನಾಥಯ್ಯ ಈಗ ಮಾಖ್ಯೋಪಾಧ್ಯಾಯರಾಗಿ ನೇಮಕಟ್ಟಲ್ಪಟ್ಟಿರುವರು

ಪಾಣೆಮಂಗಳೂರು—ಇಲ್ಲಿಯ ಎಸ್ ಯು. ಎಸ್. ಹಾಯರ್ ಎಲಿಮೆಂಟರಿ ಶಾಲೆಗೆ ಪಾಣಿಕಾರು ಶ್ರೀಪಾಡಾ ರಾಮಚಂದ್ರ ಭೈಯವರು ಶಾಲೆಗೆ ಒತ್ತಾಗಿ ಎರಡು ಕೋಣೆಗಳಿರುವ ಧರ್ಮವಾದ ಕಟ್ಟಡವನ್ನು ಮಾಡಿ ಮೆನೇಜರ್ ದಿವಂಗತ ಫುಂಡಲೀಕ ಪೈಗಳವರ ಸ್ಮಾರಕ ವಾಗಿ ಕಟ್ಟಿಸಿ ಈ ದಿವಸ ಬಿಟ್ಟುಕೊಟ್ಟಿರುವರು.

ಎಸ್. ಯು ಎಸ್. ಹಾಯರ್ ಎಲಿಮೆಂಟರಿ ಶಾಲಾ ವರ್ಧಂಕ್ಯುತ್ಸವವು ಇದೇ ತಾ. ೨೦-೬-೬೬ರಲ್ಲಿ ಜರಗುವುದು.

ತಾಲೂಕುಗಳಿಂದ.

ಉಳ್ಳಾಲ—ಕಳ್ಳೆ ಕೆಲವು ವರ್ಷಗಳಿಂದ ಉಳ್ಳಾಲದ ಸ್ಥಾಪನಾ ನಂಬ್ರ ೪೯ನೇ ಶ್ರೀ ಆದೀಶ್ವರ (ಪಾರ್ಶ್ವನಾಥ) ಸ್ವಾಮಿ ಬಸ್ತಿಯು ಆಕ್ಕಂತ ಚೇರ್ಮನ್‌ವಕ್ಕೆಯನ್ನು ತಳೆದಿದ್ದು ಪೂಜಾದಿ ಯಾವ ವಿನಿಯೋಗಗಳೂ ನಡೆಯದೆ ಇದ್ದ ಕಾರಣ ಅದಕ್ಕಾಗಿ ಎಗಡು ಮೂರು ವರ್ಷಗಳಿಂದ ಶ್ರೀಯುತ ಕೆ. ರಭುಚಂದ್ರ ಬಲ್ಲಾಳರವರು ತನುಮನಧನಗಳಿಂದ ಪರಿಶ್ರಮದಿಂದ ಗವರ್ನಮೆಂಟಿನೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದು, ತಾ ೬-೫-೬೬ರಲ್ಲಿ ಸದರಿ ಬಸ್ತಿಯು ಅದಿಶ್ವರನ (ಪಾರ್ಶ್ವನಾಥ) ಸ್ವಾಮಿಯು ಮೂಲಭಂಡಾಗಳನ್ನು ಮಂಗಳೂರಿನ ಸ್ಥಾಪನಾ—ನಂಬ್ರ ೧೬ನೇ ಶ್ರೀ ಶಾಂತೀಶ್ವರ ಬಸ್ತಿಯಲ್ಲಿ ಸ್ಥಾಪಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರವರಿಂದ ಒಂದ ಆರ್ಡರ್-೪೬-Rಗಿನೇ ನಂಬ್ರದ ಹುಕುಮಿನ ಮೇರೆಗೆ ೨೯ನೇ ತಿಂಗಳ ತಾ. ೩ನೇ ಶನಿವಾರ ಸದರಿ ಬಂಡಾಗಳನ್ನು ಉಳ್ಳಾಲದಿಂದ ವಿಜೃಂಭಣೆಯಪೂರ್ವಕ ತಂದು, ಸದರಿ ಬಲ್ಲಾಳರವರ ಆಸಾರಥನೆಯಲ್ಲಿ ಮಂಗಳೂರಲ್ಲಿ ಕಾರ್ಯಾಧ್ಯಕ್ಷತೆಯಾಗಿ ಕಂಗೊಳಿಸುತ್ತಿರುವ ಶ್ರೀ ಶಾಂತೀಶ್ವರ ಬಸ್ತಿಯಲ್ಲಿ ಸ್ಥಾಪಿಸಲ್ಪಟ್ಟಿತೆಂಬುದು ಸುತ್ಯ. ಹಾಗೂ ಸಂತೋಷದ ಸಂಗತಿಯಾಗಿದೆ—ಅಲ್ಲದೆ ಆದಕ್ಕೆ ಸಲ್ಲತಕ್ಕ ದಾರ್ಮಿಕ ಪರಮಾನವನ್ನು ಸಹಾ ದಯಪಾಲಿಸುವಂತೆ ಮಾಡಿದ ಸರಕಾರದವರ ಈ ಉದಾರ ಧಾರ್ಮಿಕ ಸಹಾಯತೆಗಾಗಿ ಜೈನಸಮಾಜದ ಪರವಾಗಿ ಅನೇಕ ಧನ್ಯವಾದಗಳು

ದೇವಪ್ಪಪಡೂರು—ಈ ಗ್ರಾಮದ ಬೋರ್ಡ್ ಶಾಲಾ ವಿದ್ಯಾರ್ಥಿಗಳು ಈ ತಿಂಗಳ ತಾ ೧೨ನೇ ಬುಧವಾರ ಸದರಿ ಶಾಲೆಯಲ್ಲಿ ಸುಹಾರ ವೈಭವದಿಂದ ಭಜನಾ ಸಮಾರಂಭವನ್ನು ನೆರವೇರಿಸಿದರು. ಊರ ಮಹಾಜನರು ರಲ್ಲಿ ಹಲವರು ಬಂದಿದ್ದರು ಶಾಲಾ ಮಕ್ಕಳಿಂದಲೇ ಸಂಗ್ರಹಿಸಲ್ಪಟ್ಟ ಗೇರುಬೀಜದಿಂದ ಕಜ್ಜಾಯವನ್ನು ಮಾಡಿ ಶ್ರೀ ಶಾರದಾಂಬೆಗೆ ಸಮರ್ಪಿಸಿದ ಬಳಿಕ ಪ್ರಸಾದವು ಸರ್ವರಿಂದಲೂ ಸ್ವೀಕರಿಸಲ್ಪಟ್ಟಿತು ಪ್ರಕೃತ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಏರಿ ಇದೆ ಇನ್ನೂ ಹೆಚ್ಚಾಗುವ ಸಂಭವವಿದೆ ೩ ಕ್ಲಾಸುಗಳಿರುವ ಈ ಶಾಲೆಯನ್ನು ಒಬ್ಬ ಉಪಾಧ್ಯಾಯನಿಂದ ವೃದ್ಧಿಗೆ ತರುವರೆ ಕೇವಲ ಅಸಾಧ್ಯ ಎಂದೂ ಕೂಡಲೇ ಇನ್ನೊಬ್ಬ ಉಪಾಧ್ಯಾಯರನ್ನು ಈ ಶಾಲೆಗೆ ಕಳುಹಿಸಬೇಕಾಗಿ ದಯಾಳುಗಳಾದ ಬೋರ್ಡಿನವರನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯವಾದ ಬಳಿಕ ಸಭೆಯು ವಿಸರ್ಜನೆ.

ವಿಟ್ಲ—ತಾ ೬-೬ ೫೬ರಲ್ಲಿ ಈ ಕೇಂದ್ರದ ಉಪಾಧ್ಯಾಯರ ಮಾಸಿಕ ಸಭೆಯು ಸ್ಥಳೀಯ ಪಾಲಕರ ಹಾಯರ್ ಎಲಿಮೆಂಟರೀ ಕೊಲೀಜಿನಲ್ಲಿ ಮಾದಕಟ್ಟೆ ಶಾಲಾ ಟೀಚರ ಮೆನೇಜರ್ ಹುಗೂ ಕೆಡ್ಡಾಸ್ಟ್ರಾ ಶ್ರೀ ಎಂ ಕೃಷ್ಣಭಟ್ಟರು ಸೂಚಿಸಿದಂತೆ ಸದನರ ಸನ್ಮತಿಯಿಂದ ಅಂದಿನ ಅಧ್ಯಕ್ಷಸ್ಥಾನವನ್ನು ಬೋಳಂತೂರು ಪಾಪಶಾಲಾ ಮುಖ್ಯೋಪಾಧ್ಯಾಯರಾದ ರಾ ಕೆ ಎಸ್ ಗಟ್ಟಿಯವರು ಆಲಂಕರಿಸಿದ ತರುವಾಯ ಮಾನವ ಸಾರ ವೊಂದನ್ನು ಮಿ ವಾಸ್ತೇವನಾಯ್ಕರು ಸುಲಭರೀತಿಯಲ್ಲಿ ಗುಣಕಾರದಲ್ಲಿ ಕೊಟ್ಟು ಅದಕೆ ಲಲಿತಲಲಿಯ ನಿಪುಣರಾದ ಶ್ರೀಮಾನ್ ವಿ ಬಿ ಯವರು ಕೃ ಪೂ ೧೦೦೦ ವರ್ಷಗಳಿಂದ ಈ ತಂನೇ ಶತಮಾನದ ವರೆಗೆ ತಯಾರಾದ ೧೩ ವಿಧದ ಗಡಿಯಾರದ ವಿಷಯ ಚಲೋದಾಗಿ ಉಹಾಸ್ಯಾಸನವನ್ನು ಕೊಟ್ಟಿದ್ದಲ್ಲದೆ ಆಯಾಯ ವಿಧದ ಗಡಿಯಾರದ ಆಕಾರವನ್ನೂ ತೋರಿಸಿದರು ಉಪಾಧ್ಯಾಯರಿಗೆ ಪಾಠಾಯಿಯಲ್ಲಿ ಒಂದೂವರೆ ಆಜೆ ಕಾಕಿವಾಯ ದಕ್ಕೆ ಇರುತಾ ಸರಕಾರದವರಿಗೆ ಪ್ರಾರ್ಥಿಸಿ ಪ್ರತಿ ಅಧ್ಯಾಪಕರ ಮಂಧೂ ದಂತಗೆರೆಯಂದ ಹಣ ಕೂಡಿಸಿ ತನ್ನು ಲ್ಲರ ಪ್ರತಿನಿಧಿಯೊಬ್ಬನನ್ನು ಕಳುಹಿಸಬೇಕೆಂದೂ ಸರ್ವ ಸಮ್ಮತಿಯಿಂದ ನಿರ್ಣಯಿಸಿದ ತರುವಾಯ ಅಧ್ಯಕ್ಷರು ಸಭೆಯನ್ನು ಮುಕ್ತಾಯಗೊಳಿಸಿದರು ಸಭೆಯಲ್ಲಾದ ಕೆಲವು ಅಸಭ್ಯ ವರ್ತನೆಯನ್ನು ಖಂಡಿಸಿ, ಆ ವಿಷಯವನ್ನು ಒತ್ತಿ ಹೇಳಿ ಚಲೋದಾಗಿ ಭಾಷಣಮಾಡಿದ ತರುವಾಯ ಮುಂದಿನ ಸಭೆಯು ಆಗೋಸ್ತು ತಿಂಗಳ ಕಾರೀಕೆಗೆ ಬಿಟ್ಟು ದರಲ್ಲಿಯೇ ನೆರವೇರೇಕೆಂದೂ ನಿಶ್ಚಯಿಸಿದ ತರುವಾಯ ಸಭಾಂತ್ಯವಾಯಿತು.

ಬೇಂಗ್ರೆ—ಪಡುಬಿದ್ರೆಯ ಪಂಚಾಯತ್ ಬೋರ್ಡಿನವರು ತಮ್ಮ ಕೃಷಾಮಿಯವಾದ ದೃಷ್ಟಿಯನ್ನು ಒಮ್ಮೆಗೆ ಬಡ ಕೃಷಿಕರ ಮೇಲೆ ದಯವಿಟ್ಟು ಪಡುಬಿದ್ರೆಯ ಕೆಲ ಸಂಕದ ಕೆಳಗೆ ಬಯಲಿನ ಮಧ್ಯದಲ್ಲಿ ಇರುವುದೇ ಹೊಳೆಯ ಕಡೆಗೆ ಬೀಡುತ್ತಿದ್ದರೆ ಕೃಷಿಕರಿಗೆ ಮಹೋಪಕಾರವಾಗುತ್ತಿತ್ತು ಆಯ್ಯಾ ಪಂಚಾಯತ್ ಬೋರ್ಡಿನವರೇ, ಇಲ್ಲಿ ಹೊಳೆಯ ದಡಗಳಲ್ಲಿ ಮುಂದಿಗೆಯಷ್ಟು ಜೆಕೆಯು ಹೊಳೆಯನ್ನೆ ಮಟ್ಟಿಬಿಟ್ಟಿವೆ, ಕೆಲವು ಕಡೆಗಳಲ್ಲಿ ಹೊಳೆಯು ಕಾಣೆಯಾಗಿ ಸದ್ದಯಾಗಿದೆ. ಬೇರೆ ಕೆಲವು ಕಡೆಗಳಲ್ಲಿ ಮಜ್ಜಿಗೆಯಂತು ನೀರು ಹರಿಯುವುದೇ ಇಲ್ಲ. ಇನ್ನೆನ್ನಾದು ಕಡೆಯಲ್ಲಿ ಬಂಡೆಕಲ್ಲು ಅಡ್ಡವಾಗಿ ನಿಂತಿರು ವುದರಿಂದ ನೀರು ಹರಿಯುವುದಕ್ಕೆ ತೊಂದರೆಯುಂಟಾಗಿ ಬಯಲಿನಲ್ಲೆ ಹರಿಯುವುದು. ಒಂದು ಸಲ ನೆರೆಬಂದರೆ ಸರಿ, ಈ ಮೇಲೆ ಹೇಳಿದ ತೊಂದರೆಗಳಿಂದ ಹೊಳೆಯ ನೀರೇ ಇಂಗುವುದಿಲ್ಲ. ಪೈರುಗಳೆಲ್ಲಾ ಕೊತೆತೋಪಾಗು ವುವು ಈ ಕಷ್ಟಗಳನ್ನೆಲ್ಲಾ ನಿವಾರಿಸಬೇಕೆಂದು. ಪಂಚಾಯತ ಬೋರ್ಡಿನವರಿಗೆ ಕೃಷಿಕರ ಪ್ರಜಯಾಂಗವಾವಾವ ವೇದಿಕೆ.

ಕಾರ್ಕಳ—ಕಾಂಗ್ರೆಸ್ ಪಕ್ಷದವರೆಂದು ಪಟ್ಟಿ ಹಚ್ಚಿಕೊಂಡು ನಮ್ಮ ಪಂಚಾಯತ್ ಬೋರ್ಡಿನ ಪ್ರೆಸ್ಟಿಡೆಂಟ ಸಿಪಸ್ಥ ಸ್ಥಾನಗಳಿಗೆ ಬಹುಮತದಿಂದ ಆರಿಸಿ ಬಂದ ಸದಸ್ಯರು ಜಾಸಾಜನೆ ಕಾಲದಲ್ಲಿ ಮತದಾರರಿಗೆ ಕೊಟ್ಟು ದಚನೆಗಳ ಕಡೆಗೆ ಉದಾಸೀನತೆಯಾಗಿರುವುದು ವ್ಯಕ್ತವಾದ ಸ್ಮತಿಯಾಗಿದೆ. ಇನ್ನಾದರೂ ಅವರು ತಮ್ಮ ಆ ಮಾತುಗಳನ್ನು ನೆನಪಿಗೆ ತಂದುಕೊಂಡು ಕಾರ್ಯ ಪ್ರವೃತ್ತರಾಗುವರಾಗಿ ನೆಂಬುತ್ತೇನೆ ಪಟ್ಟಣನ್ಮಿರ್ಮಲ್ಪಡ ಅಧಿಕ ಲಕ್ಷ್ಯವನ್ನು ಕೊಡುವ ಅವಶ್ಯಕತೆ ಬಹಳ ಬಾಗಿ ಉಂಟು.

ಸ್ಥಳೀಯ ಹರಿಜನ ಸೇವಾ ಸಂಘದ ಆಶ್ರಯದಲ್ಲಿ ಉಳಕೊಂಡು ತಿಂಡಿತೀರ್ಥ ಪ್ರಸ್ತುತ ಸ್ಲೇಟು ಮೊದಲಾದುವುಗಳನ್ನು ಮುಖತ್ತಾಗಿ ಪಡೆದು ಬೇರೆ ಬೇರೆ ಶಾಲೆಗಳ ಬೇರೆ ಬೇರೆ ತರಗತಿಗಳಲ್ಲಿ ಓದುತ್ತಿದ್ದ ಪ್ರಾಯಶಃ ಎಲ್ಲಾ ಹರಿಜನ ವಿದ್ಯಾರ್ಥಿಗಳು ದರ್ಜಾರ್ಥಕ್ಕೆ ಪಟ್ಟೆಲ್ಲಗಳಲ್ಲಿ ತೇರ್ಗಡೆ ಹೊಂದಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸೆದಿವರಾಗಿ ತಿಳಿದು ಬಹಳ ಸಂತೋಷ ವಾಗುತ್ತದೆ.

ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹಿಂದಿನ ಯಾವ ವರ್ಷದಲ್ಲಿಯೂ ಆ

ಪ್ರೌಢ ವಿವಾಹ.

ಪ್ರೌಢವಿವಾಹ, ಬಾಲ್ಯ ವಿವಾಹಗಳಿಂದುಂಟಾಗುವ ಗುಣಾವಗುಣಗಳನ್ನು ಸರಿಯಾದ ರೀತಿಯಿಂದ ಚೆನ್ನಾಗಿ ವಿಮರ್ಶಿಸಿ ವಿಚಾರಿಸಿದೆ ಪ್ರೌಢ ವಿವಾಹವೊ ಒಳ್ಳೆಯದೋ? ಬಾಲ್ಯವಿವಾಹವು ಉತ್ತಮವೆ? ಎಂದು ಹೇಳುವುದರಲ್ಲಾಗಲೀ, ಕೇಳುವುದರಲ್ಲಾಗಲೀ, ಆಚರಿಸುವುದರಲ್ಲಾಗಲೀ, ನಿಶ್ಚಾಕಾರಿಸುವುದರಲ್ಲಾಗಲೀ ಯಾವ ಪ್ರಯೋಜನವೂ ಸಿಗಲಾರದು.

ಎಲ್ಲಿ ಗುಣವಿದೆಯೋ ಅಲ್ಲಿ ದೋಷವಿದ್ದೇ ಇದೆಯಾದರೂ,ಅವುಗಳಲ್ಲಿರುವ ನ್ಯೂನಾಧಿಕ್ಯಗಳನ್ನು ತಿಳಿದುಮಾತ್ರ ಅಲ್ಲಗಳೆಯಲೂ, ಸ್ವೀಕರಿಸಲೂ ಸಾಧ್ಯವಾಗಿದೆ. ಪ್ರೌಢವಿವಾಹವು ಯಾಕೆ? ವಿವಾಹಾನಂತರ ದಂಪತಿಗಳು ಹೇಗೆ ವರ್ತಿಸಬೇಕು? ಅದರ ಮುಖ್ಯೋದ್ದೇಶವಾವುದೆಂದು ವಿಚಾರಿಸಿ ಹಿಂದಿನ ಕಾಲಕ್ಕೂ ಇಂದಿನ ಕಾಲಕ್ಕೂ ತಾರತಮ್ಯ ಭಾವಗಳನ್ನೂ, ಅವಶ್ಯಕ್ಕಿರುವ ಕಾರಣವನ್ನೂ, ತಿಳಿಯುವುದು ಅತ್ಯವಶ್ಯಕ. ಪ್ರತಿಯೊಂದು ಪ್ರಾಣಿವರ್ಗದಲ್ಲಿಯೂ ದ್ವಂದ್ವಗಳು ಏಕರೀತಿಯಿಂದ ಅನ್ಯೋನ್ಯ ಮೈತ್ರಿಯನ್ನು ಕಾಲಕ್ಕೆ ಸರಿಯಾಗಿ ಹೊಂದಿಕೊಳ್ಳುವುದಾದರೂ ಪ್ರಾಯಃ ಮನುಷ್ಯೇತರಗಳಲ್ಲಿ ಸುಖಾನುಭವಕ್ಕೆ ಗಂಡು, ಹೆಂಡಿರು ಇವರೇ ಎಂಬ ನಿರ್ಣಯವಿರುವುದಿಲ್ಲ ಅನ್ಯೋನ್ಯ ಸಂಭೋಗವು ಯಾವಾಗ ಇಚ್ಛಿತವೋ ಆಗ ಆಪ್ರಾಣಿಗಳ ಪ್ರೇಮವು ಸೇರಿ ಅವುಗಳಲ್ಲಿ ಸಂಭೋಗಶಕ್ತಿಯುಂಟಾಗುವುದು. ಹೆಚ್ಚಿಗೆ ಇಚ್ಛೆಯಿಲ್ಲದ ಸಮಯ ಗಂಡಿಗೂ, ಗಂಡಿಗೆ ಇಚ್ಛೆಯಿಲ್ಲದ ಸಮಯ ಹೆಣ್ಣಿಗೂ ಸೇರುವಿಕೆಯಾಗಲಾರದು ಪ್ರಿಯಸಂಗಮನನ್ನು ಬಯಸುವ ಹೆಣ್ಣು ತಕ್ಕೀತಿಯ ಗಂಡನನ್ನೇ ಹುಡುಕುವುದು ಸ್ವಾಭಾವಿಕ

ಅಂಥ ದುರ್ಘಟನೆಗೊಳಗಾಗದಂತೆ ಮನುಷ್ಯರಿಗೆ ಎಲ್ಲಾ ಪ್ರಾಣಿಗಳಿಗಿಂತ ಹೆಚ್ಚು ಬುದ್ಧಿ ಶಕ್ತಿಯನ್ನು ಪರಮಾತ್ಮನು ಕೊಟ್ಟಿದ್ದರೂ, ಪಶು ಪ್ರಾಣಿಗಳಿಗಿಂತಲೂ ಹೀನಾವಸ್ಥೆಯಾಗುವಂತೆ ವರ್ತಿಸುವುದಾದರೆ ಅವಿಚಾರಿತವೆಂದೇ ಖಂಡಿತವಾಗಿಯೂ ಹೇಳಬಹುದು ಗರ್ಭಧಾರಣಾ ಸಮಯದಲ್ಲಿ ಗಂಡಹೆಂಡಿರ ಮನಸ್ಸು, ಅಭಿಪ್ರಾಯವೂ, ಹೇಗಿದೆಯೋ? ಅದಕ್ಕನುಗುಣವಾದ ಸಂತತಿಯುಂಟಾಗುವುದೆಂಬುದು ಸರ್ವ ಸಮ್ಮತ

'ಆನೆಯ ಹೊಟ್ಟೆಯಲ್ಲಿ ಆಡು ಜನಿಸಲಿಕ್ಕಿಲ್ಲ' ಎಂಬಂತೆ ಧೃಷ್ಟಾಂತಕ್ಕೆ ಶ್ರೀಮಂತರಲ್ಲಿ, ವಿದ್ಯಾವಂತರಲ್ಲಿ, ಧೀಮಂತರಲ್ಲಿ, ಗುಣವಂತರಲ್ಲಿ ಜನಿಸುವ ಸಂತತಿಯನ್ನು ತದ್ವಿರುದ್ಧರಲ್ಲಿ ಹುಟ್ಟುವ ಕೂಸುಗಳನ್ನೂ ನೋಡಿದರೆ ನಿಕ್ಕಾವಾಗುವುದು ಸ್ತ್ರೀಪುರುಷರ ಮೈತ್ರಿಯು ನಿಕರೀತಿಯಿಂದಿರಬೇಕಾದರೆ ಅವರಿಬ್ಬರೂ ಅನ್ಯೋನ್ಯ ಮೆಚ್ಚಿಗೆಯಿಂದ ಸಂಬಂಧವನ್ನು ಬೆಳೆಸಿರಬೇಕು ಸ್ತ್ರೀಯು ಪುರುಷನನ್ನೂ, ಪುರುಷನು ಸ್ತ್ರೀಯನ್ನೂ ಬಯಸಬೇಕಾದರೆ ಸಮರ ಪ್ರಧಾನರಾಗಿಯೂ, ದಾಂಪತ್ಯದ ಗುಣಾನುಗುಣಗಳನ್ನು ತಿಳಿದುಕೊಳ್ಳುವಷ್ಟು ಸಮರ್ಥರಿರಬೇಕು ಪುರುಷನ ಕಾಂಕ್ಷೆಯು ಯಾವಾಗ ಹೆಂಗಳೆಗುಂಟಾಗುತ್ತದೋ, ಅದೇ ಸ್ತ್ರೀಯ ಪ್ರೌಢಿಮೆಯ ಪ್ರಥಮ ಸೋಪಾನ ಪ್ರಕೃತಿ ಭೇದವಿರುವುದರಿಂದ ಕೇವಲ ಸ್ತ್ರೀಪುರುಷರ ಪ್ರಾಯವನ್ನು ಎಣಿಸಿ ಹೆಣ್ಣುಗಂಡಿನ ಬಾಲ್ಯತ್ವ, ಪ್ರೌಢತ್ವವನ್ನು ನಿರ್ಧರಿಸಲು ಸಾಧ್ಯವಿಲ್ಲ ಗಂಡಹೆಂಡಿರ ಐಕ್ಯತ್ವದ ವಿಷಯವನ್ನೆ ಅರಿಯದ ಗುರುಹಿರಿಯರ ಒತ್ತಾಸೆಗೊಳಗಾಗಿ ಮದುವೆ ಮಾಡಿಕೊಂಡು, ಗಂಡನು ತನ್ನ ಸುಖದುಃಖಕ್ಕೆ ಭಾಗಿಯೆಂಬುದು ಗೊತ್ತಿಲ್ಲದ ಅನೇಕ ಬಾಲಿಕೆಯರು ಗಂಡಪ್ಪ ಮನೆಗೆ ಹೋಗಬೇಕಾದರೆ ಕಣ್ಣೀರು ಸುರಿಸಿ ಗೋಳಾಡುವರು ಪ್ರಾಯ ಬಂದು ಬಾಧ್ಯವು ಬೆಳೆಯುವಾಗ, ಗಂಡ ಹೆಂಡಿರ ಗುಣದೋಷಗಳು ತಿಳಿದು, ತಮ್ಮ ಕಷ್ಟನ್ನು ಮೀರಲಾರದೆ ಅನ್ಯೋನ್ಯ ವೈಮನಸ್ಸು ನಿಂದಲೇ ಜೀವನಾವರಿಯಂತೆ ದುಃಖಗಳಾಗಿಯೇ ಇರಬೇಕು. ಅತಿಕ್ಷಿತೆಯರಾಗಿಯೂ ದುಃಖವನ್ನು ಸಹಿಸಲಾರದೆಯೂ ಇರುವ ಹುಡುಗಿಯರು ಗಂಡಿನಿಗೆ ವಿಷವಾನಾದಿಗಳನ್ನು ಗುಟ್ಟಿನಿಂದ ಮಾಡಿಸಿ, ಅವನ ಮರಣಾನಂತರವೂ, ಮೊದಲೂ ವ್ಯಭಿಚಾರಾದಿಗಳನ್ನು ಮಾಡಿ ಭ್ರೂಣಹತ್ಯ, ಶಿಶುಹತ್ಯಾದಿಗಳನ್ನು ಮಾಡುವ ಸಂಭವವು ಎಷ್ಟೋ ಕಡೆಗಳಲ್ಲಿ ನಡೆಯುವುದಿದೆ. ಆಗ ಪಾತಿವ್ರತ್ಯವು ಎಲ್ಲಿಯದು? ಹೆಂಡತಿಯಲ್ಲಿ ಇಷ್ಟವಿಲ್ಲದೆ ಗಂಡಂದಿರು ನಿತ್ಯವೆಷ್ಟಿಯರನ್ನು ಹಿಂಸಿಸುತ್ತಾ ಕಷ್ಟಪಡಿಯನ್ನು ಮಿಂಚಿಯಾದರೂ ತೊಲಿಯುವುದುಂಟು ಮೇಲೆ ಸ್ತ್ರೀಯರ ಗತಿಯೇನು? ಗಂಡಸರ ವ್ಯಭಿಚಾರಕ್ಕೆ ಪರಿಹಾರವೇನು?

ಹಿಂದೂ ಮತದಂತೆ ವಿವಾಹಸಮಯದಲ್ಲಿ ಈಗ ಅರ್ಥವನ್ನು ತಿಳಿದೂ, ತಿಳಿಯದೆಯೂ ವಾಡಿಕೆಯಾಗಿ ಹೇಳುವ 'ಕಾಮಃ ಕಾವಾಯ ಕಾಮೋ ದಾತಾ, ಕಾಮಃ ಪತೀಗೃಹಿತಾ, ಕಾಮೈತತ್ತೇ ಓಷಾತೇ ಕಾಮದಕ್ಷಿಣಾ' ಎಂಬುದೂ, "ಧರ್ಮ ಪ್ರಜಾಸಂಪತ್ಸಿದ್ಧ್ಯರ್ಥ ಮಿಮಾಂಕನ್ಯಾಂ ವೃಣೇಮಹೇ, ವೃಣೀಧ್ವಂ" ಇತ್ಯಾದಿ ದಂಪತಿಗಳು ಅನ್ಯೋನ್ಯವಾಗಿ ಹೇಳಿಕೊಳ್ಳುವುದರಿಂದ, ಕ್ರಿ ಪೂ ೩೦೦ಕ್ಕೆ (ಬಿ ಸಿ ೩) ಹಿಂದೆಯೇ ಇದ್ದ ವೈದಿಕ ಯಜ್ಞಗಳ ಕಾಲದಲ್ಲಿಯೇ ಪ್ರೌಢವಿವಾಹವಿತ್ತೆಂದು ದೃಢವಾಗುವುದು ಮೊಗಲರ ಸರಕಾರದಿಂದೀಚೆಗೆ ಬಾಲ್ಯವಿವಾಹವು ವಾಬಲ್ಯಕ್ಕೆ ಬಂದಿದ್ದರೂ (ಬಿ ಸಿ ೪ಳಲ್ಲೇ) ಕ್ರಿ ಪೂರ್ವದಲ್ಲೇ ಪ್ರೌಢ ವಿವಾಹವು ಶಿಥಿಲವಾಗುತ್ತಾ ಬಂದದ್ದರಿಂದ ರಾಜರಲ್ಲಿ ಸ್ವಯಂವರ ಪ್ರಾರಂಭವಾದಂತೆ ತೋರುತ್ತದೆ ಇದರ ಕಾರಣವನ್ನು ಮುಂದೆ ತಿಳಿಯಬಹುದು

ಪ್ರೌಢತ್ವವನ್ನು ಹೊಂದದ ಬಾಲಿಕೆಯರು ಏನೂ ಅರಿಯದಿರುವಾಗ, ಕಾಮದ ವಿಚಾರವನ್ನು ಹೇಗೆ ತಿಳಿಯಬೇಕು? ಹುಡುಗಿಯರು ತಿಳಿದಿರಬೇಕೆಂದಿಲ್ಲವಾದರೆ ಆವಾಕ್ಯಗಳನ್ನು ಹೇಗೆ ಉಪಯೋಗಿಸಬೇಕು ಇದರಿಂದಲೇ ಆ ಕಾಲದಲ್ಲೇ ಪ್ರೌಢವಿವಾಹವು ಇತ್ತೆಂಬುದರಲ್ಲಿ ಯಾವ ಸಂಶಯವೂ ಯಾರಿಗೂ ಬರಲಾರದು

ಪುರಾತೀತಿಹಾಸಗಳನ್ನು ಸಂಪೂರ್ಣ ಒಪ್ಪಿಕೊಳ್ಳದಿದ್ದರೂ, ವೇದವಚನವನ್ನು ಅಲ್ಲಗಳೆಯುವ ಅಧಿಪ್ರಾಯವಾಗಲೀ ಸಾಮರ್ಥ್ಯವಾಗಲೀ ಯಾವ ಪ್ರಾಜ್ಞನಿಗಾದರೂ ವಿರಳವೇ ಸರಿ ಜಗತ್ತಿನ ಸೃಷ್ಟಿಯ ಕ್ರಮವನ್ನು ನೋಡಿದರೆ ಅನ್ನದಿಂದ ಮನುಷ್ಯರು ಹುಟ್ಟಿದಂತೆ ತೋರುತ್ತದೆ ಇವೆಲ್ಲಕ್ಕೂ ಮೊದಲನೇಯದು ಆಕಾಶವೆಂದೂ, ಆಕಾಶದಿಂದ ಗಾಳಿಯೂ, ಗಾಳಿಯಿಂದ ಅಗ್ನಿಯೂ, ಬೆಂಕಿಯಿಂದ ನೀರೂ ಜಲದಿಂದ ಪೃಥ್ವಿಯೂ, ಅದರಿಂದ ಓಷಧಿಗಳೂ ಅವುಗಳಿಂದ ಅನ್ನವೂ, ಅನ್ನದಿಂದ ಪುರುಷನೂ ಹುಟ್ಟಿದನೆಂದು ಹೇಳಲ್ಪಟ್ಟಿದೆ. ಹಾಗೆ ಹುಟ್ಟಿದ ಪರಾಕ್ಷರ ನೂರೆಕ್ಕಿಯು ತಾನೊಬ್ಬನೇ ಇದ್ದು ಸಂತೋಷವಡದೆ, ಸಂಸಾರವನ್ನು ಲಯಸಿ, ತನ್ನದೊಂದು ಭಾಗವನ್ನು ಸ್ತ್ರೀಯನ್ನಾಗಿಯೂ ಇನ್ನೊಂದು ಭಾಗವನ್ನು ಪುರುಷನನ್ನಾಗಿಯೂ ಮಾಡಿಕೊಂಡು ಸೃಷ್ಟಿಯನ್ನು ಪ್ರಾರಂಭಿಸಿತು

ಒಂದೇ ಶರೀರದಲ್ಲಿ ಎರಡಂಶವನ್ನು ಮಾಡಿಕೊಂಡು ತಾನು ನೈವಾಹಿತನಾಗಿರುವಾಗ ಸ್ತ್ರೀಪುರುಷರಿಗೆಷ್ಟದೆ ಮಟ್ಟಿನ ಬಾಲ್ಯತ್ವ ಪ್ರೌಢತ್ವ ವಿರಬಹುದೆಂದು ತಿಳಿಯಬಾರದು ಈ ಕಾರಣವೆ ಸರಿಯಾಗಿ ತಿಳಿಯದಿದ್ದರೂ, ಅರ್ಧಾಂಗ ಅರ್ಧಾರಿಗಿಯರೆಂಬುದು, ಗಂಡ ಹೆಂಡರಿಗೆ ರೂಢಿಯಾಗಿ ಇಂದಿಗೂ ಬಳಕೆಯಲ್ಲಿದೆ. ಈಗವಾಡಿಕೆಯಲ್ಲಿರುವ ಈ ಶಬ್ದಗಳ ಕಾರ್ಯ ಕಾರಣವನ್ನು ವಿಚಾರಿಸಿದರೂ, ವೇದವಚನವು ಯುಕ್ತಿಯುಕ್ತವಾಗಿ ತೋರುವುದು. ಇದರಿಂದ ಸ್ತ್ರೀಯರಸ್ಯೇ ಪ್ರಾಯ ಪುರುಷರಿಗೂ ಇರುವಾಗಲೇ ಆ ಕಾಲದಲ್ಲಿ ಮದುವೆ ಮಾಡುತ್ತಿದ್ದರೆಂದೂ, ಒಂದು ದೇಹದಿರಡು ಪಾರ್ಶ್ವಗಳಿಗೆಷ್ಟು ಪ್ರೀತಿಯಿದೆಯೋ, ಅಷ್ಟೆ ಸ್ನೇಹವು ಗಂಡ ಹೆಂಡಿರಿಗಿತ್ತೆಂದೂ ಊಹಿಸಬಹುದಾಗಿದೆ ಜೀವಾತ್ಮನು ಒಂದೊಂದು ಅವಯವಕ್ಕೂ, ಬೇರೆ ಬೇರೆ ಕೆಲಸವನ್ನು ಸ್ವತಂತ್ರವಾಗಿಟ್ಟಿರುವುದನ್ನು ತಿಳಿದೇ ಹಿಂದಿನವರು ಸ್ವತಂತ್ರವನ್ನು ಸ್ತ್ರೀಯರಿಗೂ ಕೊಟ್ಟಿದ್ದರು

(ಸಶೇಷ) 'ಬಾಲಭಾರತ'

ಸ್ತ್ರೀ ಸ್ವಾತಂತ್ರ್ಯ.

ಸಂಸಾರ ನಾಟಕದಲ್ಲಿ ಸರಿಯಾಗಿ ಭಾಗವನ್ನು ವಹಿಸಿ ವಿಕರೀತಿಯಿಂದ ಧರ್ಮಕರ್ಮವನ್ನು ಸಾಗಿಸುವ ಕಾರ್ಯವು ಸ್ತ್ರೀಪುರುಷರಿಬ್ಬರಿಗೂ, ಸ್ವಾಭಾವಿಕ, ಸ್ವಾಭಿಮಾನ ಸ್ವಾಧೀನವಾಗಿರುವುದ ಅನೇಕ ಶತಮಾನಗಳಿಂದ ನಡೆದುಬಂದ ಈ ಸಾರಂಪರ್ಯಸರಣಿಯನ್ನು ಉಚಿತರೀತಿಯಿಂದ ಧರ್ಮಚ್ಯುತಿಯಾಗದಂತೆ ಸುಧಾರಿಸುವುದು ಸ್ತ್ರೀಪುರುಷರ ಮೊದಲನೇಯ ಧರ್ಮ ಈಗೀಗ ಸುಧಾರಿತ ರೀತಿಯಿಂದ ನಮ್ಮಿ ನುಹಿಳೆಯರು, ಸ್ತ್ರೀಯರಿಗೆ ಸ್ವಾತಂತ್ರ್ಯ ಬೇಕು, ಈಗ ಕೇವಲ ಗಂಡಸರಿಗೆಷ್ಟೆ ಸ್ವತಂತ್ರವಿರಬೆ ೦ದು ತಮ್ಮ ಕಷ್ಟವನ್ನು ಸಹಿಸಲಾರದೆ,

ಶ್ರೀಮತಿ ದುರ್ಗಾಬಾಯಿ ಜೋಟೆ.

ಈಕೆಯು ಪ್ರಭಾತ್ ಫಿಲ್ಮ್ ಕಂಪೆನಿಯವರು ತಯಾರಿಸುವ "ಅಮರ ಜ್ಯೋತಿ" ಎಂಬ ಚಿತ್ರದಲ್ಲಿ ಮುಖ್ಯ ನಾಯಕಿಯ ಪಾತ್ರವನ್ನು ವಹಿಸಿರುವಳು

ಸ್ವಾತಂತ್ರ್ಯಕ್ಕಾಗಿ ನೆನೆದಾಡುತ್ತಲಿದ್ದಾರೆ ಒಂದೇ ನೊತೆಯ ಹೊಟ್ಟೆಯಲ್ಲಿ ಹುಟ್ಟಿ ಕಷ್ಟ ಸುಖವೆರಡಕ್ಕೂ ಸರಿಯಾದ ಹಕ್ಕಿನಿಂದಿರುವ ನಮ್ಮ ಅಕ್ಕತಂಗಿಯರ ಈ ಸದ್ಭಾವನವನ್ನು ತಿಳಿದೂ, ತಿಳಿಯದಂತೆ ವರ್ತಿಸುವ ಮತ್ತು ವಿರೋಧಿಸುವ ಗಂಡಸರ ನಿಷ್ಕಾರುಣ್ಯವು ಇಷ್ಟೇ ಟೆಲೆಯದೆಂದು ಹೇಳಲು ಸಾಧ್ಯವಿಲ್ಲ. ಸ್ತ್ರೀಯರಿಗೆ ಪುರುಷರಲ್ಲಿ ಎಷ್ಟು ಪ್ರೀತಿ, ಸೌಹಾರ್ದಗಳವೆಯೆಂಬುದನ್ನು ತಿಳಿಯದಿರುವುದೇ ಗಂಡಸರ ಮೊದಲನೆಯ ತಪ್ಪು ಹೆಂಗಸರನ್ನು ಸುಖಾನುಭವಕ್ಕೆ ಮಾತ್ರ ನಮ್ಮನರೆಂದು ತಿಳಿದು ಅವರ ಕರ್ತವ್ಯಕ್ಕೆ ಗಮನಿಸದಿರುವುದು ಎರಡನೇಯದು

ಇಂಥೋ ಇರೇನಿಯನ್ ಶಾಪೆಯವರ ವಿಭಾಗಕ್ಕಿಂತ ಹಿಂದಿನಿಂದಲೂ, ಎಲ್ಲಾ ಮತರೀತಿಯಿಂದಲೂ ಅದಯಲ್ಲಿ ಒಬ್ಬ ಸ್ತ್ರೀ ಒಬ್ಬ ಪುರುಷನಿದ್ದು, ಇಂದಿನ ತನಕ ಅವರಿಂದಲೇ ಸಂಸಾರ ಚಕ್ರವು ತಿರುಗುತ್ತಾ ಇದ್ದು, ಅಭಿವೃದ್ಧಿಯನ್ನು ಹೊಂದಿದ್ದರೂ, ಮೊತ್ತಮೊದಲು ಸ್ತ್ರೀಪುರುಷರಿಗೆ ಒಂದೇ ತೆರದ ಹಕ್ಕುಸ್ವಾತಂತ್ರ್ಯಗಳಿದ್ದು ಭೇದಭಾವವಿಲ್ಲದೆ ಕಾರ್ಯಭಾಗವು ಸರಿಯಾಗಿ ಸಾಗುತ್ತಿತ್ತು ಆದರೆ, ಕಾಲ ಕ್ರಮೇಣ ಅವರು ತಮ್ಮೊಳಿಗೆ ಒಮ್ಮನಸ್ಸಿನಿಂದ ಮಾರ್ದವ ಕಾರಿಣ್ಯ ದೇಹಸ್ವಭಾವವನ್ನು ತಿಳಿದು, ಅನ್ಯೋನ್ಯ ಮೈತ್ರಿಯಿಂದ ಕಾರ್ಯ ಭಾಗವನ್ನು ಹಂಚಿಕೆಮಾಡಿಕೊಂಡು ಅವರವರ ಕೆಲಸವನ್ನು ಸ್ವತಂತ್ರವಾಗಿ ನಡೆಸುತ್ತಿದ್ದರು. ಬರಬರುತ್ತಾ ಅದೇ ಕಾರ್ಯವು ಶಿಲಾಶಾಸನದಂತೆ ಸ್ತ್ರೀಯರಿಗೆ ಮನೆಯೊಳಗಿನ ಕೆಲಸವಲ್ಲದೆ ಹೊರಗಿನ ವಿಚಾರವಿಲ್ಲವೆಂದೇ ನಿಶ್ಚಯವಾಯಿತು. ಸೌಕರ್ಯಲಾಭವನ್ನು ತಿಳಿದ ಸ್ತ್ರೀಯರೂ ತಮಗೆ ಗೃಹಿಣಿ ಎಂಬ ಬಹುಮಾನವೇ ಮೇಲು ಎಂದು ತಿಳಿದಿದ್ದರೂ ಸಂತೋಷವೇ ಸರಿ ಆಗ ಗೃಹಿಣಿಯರಿಗಿದ್ದ ಅಧಿಕಾರವು ಶಿಥಿಲವಾಗುತ್ತ ಬಂದು ಈಗ ನಾಮಮಾತ್ರಾವಶೇಷವಾಗಿದೆ. ಈಗ ಗಂಡಸರ ಅತಿಶ್ಚವನ್ನು ಮಾಡಿ ಮಡಕೆ ತೊಳೆಯುವುದೇ ಅದರ ಮುಖ್ಯಾರ್ಥವಾಗಿ ವರಿಣಮಿಸಿದೆ ಎಂಬುದೇ ಸ್ತ್ರೀಯರಿಗೆ ಮುಖ್ಯ ಕೋಚನೀಯ ಸಂಗತಿ ಹಿಂದಿನ ಶಬ್ದವೇ ಇಂದಿಗೂ ಅನ್ವರ್ಥವಾಗಿ ಅಧಿಕಾರವಿರುತ್ತಿದ್ದರೆ ನಮ್ಮ ಕರುಣೆಯರು ಭಾಗ್ಯದ ಕನಿಯರಾಗುತ್ತಿದ್ದರು

ಹಿಂದೂದೇಶದ ಅವನತಿಗೆ ಮುಖ್ಯ ಕಾರಣವೇ ಸ್ತ್ರೀಯರ ಸ್ವಾತಂತ್ರ್ಯವೆಂದು ನಿರ್ಭಯವಾಗಿ ಹೇಳಬಹುದು. ಈಗ ಭಾರತೀಯರಾದ ನಾವು ಸ್ವಾತಂತ್ರ್ಯಕ್ಕಾಗಿ ಹೊಡೆದಾಡುತ್ತೀವೆ ಆದರೆ ಒಂದು ಮನೆಯೊಳಗೆ ಸರಿಯಾದ ಸ್ವಾತಂತ್ರ್ಯವನ್ನು ಪಡೆಯದೆ, ಇಡೀ ರಾಷ್ಟ್ರದ ಸ್ವಾನುಭವವನ್ನ ಹೇಗೆ ಪಡೆಯಬಹುದು?- ಎಂಬುದನ್ನು ವಿಚಾರಿಸುವುದು ಕರುಣಾರ ಆದ್ಯ ಕರ್ತವ್ಯ ದೇಶದ ಅಭಿವೃದ್ಧಿಗೆ ಅಥವಾ ಅವನತಿಗೆ ಪುರುಷರಿಗೆ ಎಷ್ಟರಮಟ್ಟಿಗೆ ಹಕ್ಕು ಸ್ವಾತಂತ್ರ್ಯವಿದೆಯೋ ಅಷ್ಟೇ ಸ್ತ್ರೀಯರಿಗೂ ಇದ್ದೇ ಇರಬೇಕಾಗಿ ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ಕೊಟ್ಟರೆ ಗಂಡಸರು ಹೆಂಗಸರು ಮಾಡುವ ಕೆಲಸವನ್ನು ಮಾಡಬೇಕಾಗಿ ಪುಡೆಂಬುದ ತಪ್ಪು ಭಾವನೆ ಮಾತ್ರವಲ್ಲ, ಕೆಲವಿಚಾರಣೆಗಳಲ್ಲಿ ಅನಿಂಭವ

ನಮ್ಮಿ ಜನಾಂಗವು ಹಿಂದಿನಿಂದಲೇ ಒಬ್ಬೊಬ್ಬನಿಗೆ ಒಂದೊಂದೇ ಕೆಲಸವೆಂದು ವಿಭಾಗಿಸಿಕೊಂಡು ಆಯಾಮ ಕೆಲಸದವನಿಗೆ ಒಂದೊಂದು ಹೆಸರನ್ನೇ ನೃತ್ಯೇಕಿಸಿ, ವೈಷಮ್ಯಕ್ಕೆ ಬೀಜವನ್ನು ಬಿತ್ತಿ ಜಾತಿಯೆಂದು ವಿಂಗಡಿಸಿ, ಸಮತೆ, ಸ್ವಾಭಿಮಾನಗಳೆಂಬ ಬಲ್ಲರಿಯಿಂದ ಮತ್ಸರ್ಯವನ್ನು ಬೆಳೆಸಿ ತಮ್ಮ ಹಿತಕ್ಕೆ, ಸೌಕರ್ಯಕ್ಕೆ ಇಟ್ಟುಕೊಂಡ ವಂಗದದವರನ್ನು, ನಮ್ಮವರನ್ನು ಬಹಳ ಯೋಜನ ದೂರಮಾಡಿ ಪ್ರತಿಯೊಂದು ವಂಗದವು ಹೆಚ್ಚಾಗಿದೆ, ನಿರಾಲಂಬನವಾಗಿದೆ, ನೀರಸವಾಗಿದೆಯೆಂಬುದನ್ನು ಬಗೆಯದೆ ಇನ್ನೂ ಹೆಂಡತಿಮಕ್ಕಳೊಡನೆಯೇ ಮಾತ್ಸರ್ಯವನ್ನು ಬೆಳೆಯಿಸುವುದಾದರೆ, ಯಾವ ವರಣಾಮವು ಬರ ವುದೆಂದು ವಿಚಾರಿಸುವುದಾದರೆ, ಸ್ತ್ರೀಯರಿಗೆ ಸ್ವಾತಂತ್ರ್ಯವಿದೆಯೇ? ಬೇಕೇ? ಅಥವಾ ಬೇಡವೋ ಎಂಬುದು ದೈವ್ಯವಾಗುವುದು ಜನಾಂಗದ ನಾಗರೀಕತೆಗೆ, ಸೌತೀಲ್ಯಕ್ಕೆ, ಸೌಗುಣ್ಯಕ್ಕೆ, ಅಭಿವೃದ್ಧಿಗೆ, ಸ್ತ್ರೀಯರು ಎಷ್ಟರಮಟ್ಟಿಗೆ ಕಾರಣರೋ ಅಷ್ಟು ಪುರುಷರು ಕಾರಣರಲ್ಲ ಮಕ್ಕಳ ಬಾಲ್ಯದಲ್ಲಿ ಅನುದಿನವೂ ಜತೆಯಿಂದಿದ್ದು ಬುದ್ಧಿ ಬೆಳೆಯುವ ವರೆಗೆ ಆಟ ಪಾಠಗಳನ್ನೆಲ್ಲ ಕಲಿಸಿ, ಒಳ್ಳೆಯ ದಾರಿಯನ್ನು ತೋರಿಸುವುದು ತಾಯಿಗೆ ಮಾತ್ರ ಸೇರಿದ್ದಲ್ಲದೆ ಸ್ತ್ರೀಯರಿಗೆ ಸ್ವಾತಂತ್ರ್ಯವಿದ್ದರೂ ಇಲ್ಲವಾದರೂ ಮಿಕ್ಕವರಿಗೆ ಸಾಧ್ಯವಿಲ್ಲ

ಕೆ ಜಿ. ಲಕ್ಷ್ಮಿ, ಕುಂಭಕೋಣ.

(೧೪ನೇ ಪುಟದಿಂದ ಸುಂಬುವರಿದುದು)

ನಾನು ಇಂಗ್ಲೀಷು ಭಾಷೆಯ ಧ್ಯೇಸಿಯು ಖಂಡಿತವಾಗಿಯೂ ಅಲ್ಲ ಹಿಂದೂಸ್ಥಾನದವರೆಲ್ಲಿ ಸ್ವಲ್ಪ ಜನರಿಗೆ ಇಂಗ್ಲೀಷು ಭಾಷೆಯು ಅವಶ್ಯಕ ಇದೀ ಪ್ರಪಂಚದಲ್ಲೆಲ್ಲಾ ಸಂವರ್ಕವನ್ನಿಂಟುಮಾಡುವ ಬಗ್ಗೆಇಂಗ್ಲೀಷ್ ಭಾಷೆಯ ಅವಶ್ಯಕತೆಯಿದೆ

ಎಲ್ಲಾ ವಸ್ತುಗಳೂ ಎಷ್ಟು ಚೆನ್ನಾಗಿದ್ದರೂ ಆಯಾಯಾ ವಸ್ತುಗಳಿಗೆ ಅದರದರ ಸ್ಥಾನದಲ್ಲಿ ವೈಶಿಷ್ಟ್ಯ ಸಿಕ್ಕಬಲ್ಲದು. ಹೀಗೆಯೇ ಇಂಗ್ಲೀಷ್ ಭಾಷೆಗೂ ಸಹ ಅದಕ್ಕೆ ಸಂಪೂರ್ಣವಾದ ವೈಶಿಷ್ಟ್ಯ ಅದರ ದೇಹದಲ್ಲಿ ಇನ್ನೊಂದು ಭೈವೀಷೆ ಜನರ ಮನಸ್ಸಿನಲ್ಲಿದೆ ಅದನ್ನು. ದೂರಮಾಡ ಲಿಚ್ಛಿಸುತ್ತೇನೆ ಹಿಂದೀ ಭಾಷೆಯನ್ನು ಕನ್ನಡ ಭಾಷೆಯ ಸ್ಥಾನದಲ್ಲಿ ಹಾಕಲು ವ್ಯಯತ್ನಿಸು ತ್ತಾರೆ ಎನ್ನುವ ಭಾವನೆಯು ಕೆಲವರಿಗೆ ಇದೆ. ಆದರೆ ಈ ಭಾವನೆಗೆ ಆಧಾರವಿಲ್ಲವೆಂದು ನನ್ನ ಅಭಿಪ್ರಾಯ, ಹಿಂದೀ ಭಾಷೆಯು ರಾಷ್ಟ್ರ ಭಾಷಾ ಸ್ಥಾನವನ್ನು ತೆಗೆದುಕೊಳ್ಳುತ್ತದೆ. ಈ ವ್ಯಯತ್ನದಲ್ಲಿ ಕನ್ನಡದ ಅಭಿವೃದ್ಧಿಯಾಗುತ್ತಿದೆಯೇ ಹೊರತು ಕನ್ನಡ ಇಳಿಮುಖವಾಗುತ್ತಲೇ ಇಲ್ಲ, ಆಗುವುದೂ ಇಲ್ಲ ರಾಷ್ಟ್ರ ಭಾಷೆಯಂತೆಯೇ ಪ್ರಾಂತಿಕ ಭಾಷೆಗಳೂ ಬೆಳೆದೇ ಬೆಳೆಯುವುವು ಪ್ರಾಂತಿಕ ಭಾಷೆಗಳ ಜ್ಞಾನವು ಈ ಅಭ್ಯಾಸದಿಂದ ಇನ್ನೂ ಹೆಚ್ಚಾಗುತ್ತದೆ ನನ್ನ ಇಷ್ಟು ವ್ಯವಹಾರ ಕಾರ್ಯದಲ್ಲಿ ನನಗೆ ಬಂದಿರುವ ಅನುಭವವಿದು ಯಾರು ಯಾರಲ್ಲಿ ಹಿಂದೀ ವಿರೋಧಮನಿದೆಯೋ ಅವರು ವರಲ್ಲಿ ಪ್ರಾಂತಿಕ ಜ್ಞಾನವೂ ಇದ್ದೇ ಇದೆ.

ಲಿಪಿಯ ವಿಚಾರ

ಮಹಾತ್ಮರು ತಮ್ಮ ಭಾವನವನ್ನು ವರಿಸಮೂಸ್ತಿ ಮಾಡುತ್ತ ಲಿಪಿಯ ವಿಚಾರವನ್ನು ಕುರಿತು ಒಂದೆರಡು ಮಾತುಗಳನ್ನಾಡಿದರು. ಅವರು ಹೀಗೆಂದರು. –

ಇನ್ನು ಉಳಿದದ್ದು ಲಿಪಿಯ ಮಾತು. ಈ ವಿಚಾರದಲ್ಲಿ ಭರವಸೆಯು ನನಗೆ ಬಹಳ ದಿನ ಗಳಿಂದಲೂ, ಎಂದರೆ ನಾನು ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗಿನಿಂದಲೂ ಇದ್ದೆ ಇದೆ ಯಾವ ಭಾಷೆಯಾದರೂ ಸರಿಯೇ ಅದು ಸಂಸ್ಕೃತದಿಂದಲೇ ಉತ್ಪನ್ನವಾಗಿದೆ ಆದುದರಿಂದ ಯಾವ ಭಾಷೆಗಳಲ್ಲಿ ಸಂಸ್ಕೃತ ಶಬ್ದಗಳು ವಿಶೇಷವಾಗಿವೆಯೋ, ಆ ಭಾಷೆಗಳಿಗೆಲ್ಲಾ ಒಂದೇ ಲಿಪಿ ಇದ್ದೇ ಇರಬೇಕು ನಾನು ಲಿಪಿಳುನಾಡನ್ನು ಸಂಚಾರ ಮಾಡಿದಾಗ ಆ ಪ್ರಾಂತ್ಯದ "ಭಾಷೆಯನ್ನು ಕಲಿಯಲು ವ್ಯಯತ್ನ ವಟ್ಟಿರುತ್ತೇನೆ ಹಾಗೆಯೇ ತೆಲುಗು ಪ್ರಾಂತ್ಯವನ್ನು ಸಂಚಾರಮಾಡಿದಾಗ ತೆಲುಗನ್ನು ಕಲಿಯಲು ವ್ಯಯತ್ನವಟ್ಟೆ ಇದೇ ರೀತಿಯಲ್ಲಿ ಕನ್ನಡ, ಮಲೆಯಾಳಗಳನ್ನೂ ಅದೇ ಲಿಪಿಗಳ ಮೂಲಕ ಅಭ್ಯಾಸಿಸಲು ವ್ಯಯತ್ನ ಮಾಡಿದ್ದೇನೆ ಆಗ ಆ ಭಾಷೆಗಳ ಬಗ್ಗೆ ನನಗೆ ಒಂದು ಸಿಟ್ಟು ಬಂತು ಏಕೆಂದರೆ ನನ್ನಂತೆ ಎಲ್ಲಾ ಭಾಷೆಗಳ ಮೇಲೆ ವ್ರೇಮವಿರುವ ಮತ್ತು ಎಲ್ಲಾ ಭಾಷೆಗಳನ್ನು ಕಲಿಯಲು ಅವಶ್ಯಕತೆ ಇರುವ ಜನರ ಮೇಲೆ ಇಷ್ಟು ಭಾರ ಹಾಕಬೇಕೇ ಎಂದು. ಈಗ ದೃಷ್ಟಿ ಮರ್ಯಾದೆ ಇದೀ ಭರತಖಂಡದ್ದಾಗಬೇಕೇ ಹೊರತು, ಸಂಕುಚಿತ ದೃಷ್ಟಿಯನ್ನು ಇಟ್ಟುಕೊಂಡಿದ್ದರೆ ಸಂಕುಚಿತವಾದ ಭಾವನೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಒಂದೇ ಭಾವೆಯಾಗಬೇಕು ಅಂತ ನಾವು ವ್ಯಯತ್ನವಟ್ಟೆ ವಷ್ಟದಲ್ಲಿ ಒಂದೇ ಲಿಪಿಯಾಗಲೇಬೇಕು. ಇದಕ್ಕೆ ದೇವನಾಗರಿ ಬರಬೇಕು. ಹಿಂದೀ ವ್ಯವಹಾರಕ್ಕೂ ಲಿಪಿ ವ್ಯವಹಾರಕ್ಕೂ ಸಂಬಂಧವಿಲ್ಲ. ಆದರೆ ನಾನು ಈ ಲಿಪಿ ಸಮಸ್ಯೆಯನ್ನು ಹಿಂದೂಸ್ಥಾನದ ಎಲ್ಲಾ ಭಾಷೆಗಳನ್ನೂ ಕಲಿಯುವಂತಹರ ಮುಂದೆ ಇಟ್ಟಿದ್ದೇನೆ ಹೊರತು, ಎಲ್ಲರ ಮುಂದೆಯೂ ಇಟ್ಟಿಲ್ಲ. ನನ್ನ ಕರ್ತವ್ಯ ಮುಗಿಯಿತು. ನಾನು ಇಲ್ಲಿ ಇಷ್ಟು ಕಾಲ ಮಾತನಾಡುವೆನೆಂದು ಭಾವಿಸಿರಲಿಲ್ಲ.

ತಾಯಿನಾಡು.

ಮುಸಲೇನಿಯ ಗರ್ಜನೆ

ಮುಸಲೇನಿಯು, ಇತ್ತೀಚೆಗೆ ಕಳುಹಿಸುವ ಎಚ್ಚರಿಕೆಗಳಿಂದಾಗಿ, ಬ್ರಿಟನ್ ತನ್ನ ಮೆಡಿಟರೇನಿಯನಿನ ಸ್ಥಾನವನ್ನು ಗಟ್ಟಿಮಾಡಲು ಆಲೋಚಿಸುತ್ತದೆ. ಅಲ್ಲಿ ಸಿದ್ಧಸ್ಸಂಬಲ್ಲಿ ಒಂದು ವ ಹಾ ನೌಕಾಸಿಲ್ಲಾವನ್ನು ನಿರ್ಮಿಸುವ ಕುರಿತು ಆಲೋಚನೆಗಳು ನಡೆಯುತ್ತವೆ ಈ ಯೋಜನೆಗೆ ಬಾರಿ ಖರ್ಚು ತಗಲುವುದಂತೆ. ಇದನ್ನು ಬ್ರಿಟಿಷ್ ಸರಕಾರವು ಕೈ ಕೊಳ್ಳುವು ದೆಂದರೆ ಮುಸಲೇನಿಗೆ ಜಯ ಒದಗಿದಂತಾಗು ವುದು. ಕಾರಣ, ಈಗಿನ ರಾಜಕೀಯ ರಂಗ ದಲ್ಲಿ, ಜನಾಂಗಗಳು, ಒಬ್ಬರಿಂದೊಬ್ಬರಿಗೆ ನಷ್ಟ ಉಂಟಾಗುವಂತೆ ಪ್ರಯತ್ನಿಸುದು, ಒಂದು ಸಾಹಸವಾಗಿರುತ್ತದೆ ಮುಸಲೇನಿಯ ಈ ಎಚ್ಚರಿಕೆಯಿಂದ ಈಗಿನ ಯೋಜನೆಯಿಂದ ಬ್ರಿಟನಿಗೆ ಮಹಾ ವೆಚ್ಚವು ತಗಲುವುದಲ್ಲವೆ ಇದಕ್ಕೆ ಪ್ರತಿರೂಪವಾಗಿ ಮುಸಲೇನಿಯು ಬೇರೊಂದು ಯೋಜನೆ ನಡೆಯಿಸ ಬೇಕಾಗುವುದು ಹೀಗಾಗಿ, ಅನಾವಶ್ಯವಾಗಿ ಈ ಎರಡು ಜನಾಂಗಗಳು, ತಮ್ಮ ಸರಕಾರದ ಖೊಕ್ಕಸಗಳಿಂದ ಧಾರಳ ಧನವನ್ನು ವೆಚ್ಚಿಸಿ ಮೆಡಿಟರೇನಿಯನ್ ಸಾಗರದಲ್ಲಿ ಸುಸಜ್ಜಿತರಾಗಿವೆ.

ಓಟಿಗಾಗಿ ಪರೀಕ್ಷೆ

ಸಂಯುಕ್ತ ಪ್ರಾಂತ್ಯಗಳ ಸಾರಣಾ ಖಾತೆಯಲ್ಲಿ ಒಂದು ವಿಚಿತ್ರ ಅಭೀಸರು ಒಂದು ರುತ್ತಾರೆ ನವರಾಜ್ ಶಾಸನದಲ್ಲಿ ಪ್ರತಿಯೊರ್ವ ಶಿಕ್ಷಕರಿಗೆ ಓಟಿಯಿಲ್ಲದೆಂದಾಗಿಲ್ಲ ಶಿಕ್ಷಕರು ಓಟಿನ ಹಕ್ಕನ್ನು ಪಡೆಯಲು ಭೂಗೋಳ ಮತ್ತು ಚರಿತ್ರೆಯಲ್ಲಿ ವರೀಕ್ಷೆಕೂಡ ಬೇಕೆಂದು ಈ ಅಧೀಸರು ಸಧೀನವಾಡಿದೊಂದು ಕೃಮವನ್ನು ಜ್ಯಾರಿಗೆ ತಂದಿರುವರು. ಖಾಲಿ ಭೂಗೋಳ ಮತ್ತು ಚರಿತ್ರೆ ಮಾತ್ರವಲ್ಲದೆ ಗಣಿತ ಶಿಂಸ್ತ್ರ, ರಸಾಯನ ಶಾಸ್ತ್ರ ಖಗೋಳ ಶಾಸ್ತ್ರ ಇವುಗಳನ್ನು ಸಾಂ ಅಭ್ಯಸಿಸಬಾರದು?

ಇದನ್ನೆಲ್ಲಾ ನೋಡಿದಾಗ ಒಬ್ಬರು ಈ ಸುಧಾರಣೆ ಖಾತೆಯು ಎಲ್ಲಾ ಕಡೆಗಳಲ್ಲಿ ಕೆಲವು ವಿಚಿತ್ರ ವ್ಯಕ್ತಿಗಳಗಾಗಿಯೆ ನಿರ್ಮಿಸಿದಾಯಿದೊ ಎ ಒ ಅಲೋಚನೆಯು ನನ್ನಲ್ಲಿ ಹುಟ್ಟುತ್ತದೆ

ಹಣದ ಅಡಚಣೆಯು ಉಂಟಾಗಿದೆ.

ಕೆಲದಿನಗಳ ಹಿಂದೆ ಇಂಡಿಯಾ ಸರಕಾರದಿಂದ ಕರೆಯಲಾದ ಸಾಲಪತ್ರಿಕೆಯಂದ ಹಣದ ಮಾರ್ಕೆಟುಗಳಲ್ಲಿ ದುಡ್ಡಿನ ಅಭಾವವು ಉಂಟಾಗಿರುತ್ತದೆಂದು ವಾರ್ತೆ ಬಂದಿರುತ್ತೆ ಈ ದೇಶದಲ್ಲಿ ಚಲಾವಣೆಯಲ್ಲಿರುವ ದುಡ್ಡಿನ ಮೌಲ್ಯ ಅತಿ ಕಡಿಮೆಯಾಗಿದೆ, ಮತ್ತು, ಈ ಒಗೆಯ ಕಷ್ಟಗಳನ್ನು ತಪ್ಪಿಸಲು, ಸರಕಾರವು ಸಾಲಗಳನ್ನು ಕರೆಯುವಾಗ ಉಪಾಯಗಳನ್ನು ರಚಿಸುವುದಿಲ್ಲ ಈ ಸಾಲವನ್ನು ಕರೆಯುವಾಗ, ಸಾಲವಾಗಿ, ತೆತ್ತ ಹಣವನ್ನು ನುತ್ತೊಮ್ಮೆ ಚಲಾವಣೆಗೆ ಕಳುಹಿಸುವ ಉಪಾಯವನ್ನು ಸರಕಾರದ ಆರ್ಥಿಕ ಇಲಾಖೆಯವರು ಮಾಡುತ್ತಿದ್ದರೆ, ಈ ಸಂಕಷ್ಟವು ಒದಗುತ್ತಿದ್ದಿಲ್ಲ ಪ್ರಾಯಶಃ ಸಂಬಂಧಪಟ್ಟವರು ಅದು ತಮ್ಮ ಕರ್ತವ್ಯವಲ್ಲವೆಂದು ತಿಳಿದಿರಬಹುದು.

ರಾತ್ರಿಕಾಲದ ಚಳಿಯನ್ನು ಕಡೆಯಿರಿ.

ರಾತ್ರಿಕಾಲದ ಚಳಿಯಲ್ಲಿ ಅಶಕ್ತ ಕೆಲವು ಗಾಡುವಾಗ ಪೆಪ್ಸ್ ಗುಳಿಗೆಗಳು ನಿಮ್ಮ ಬಾಯಲ್ಲಿ ಇರಲಿ ಕಾರಣ ಅಲ್ಪವಿದ್ದರೇ ನಿಮಗೆಯೊ ವಿಷಮಜ್ವರಕ್ಕೆ ತುತ್ತಾಗುವಿರಿ ಅದ್ದರಿಂದ ಯಾವಾಗಲಾದರೂ ರಾತ್ರಿ ಪ್ರಯಾಣ ಮಾಡುವುದಿದ್ದರೆ, ಅಥವಾ ಬಂಧುಮಿತ್ರರಲ್ಲಿ ಚಹಾಪಾರ್ಟಿಗೋ ಅಥವಾ ಅನ್ಯತರ ವಿನೋದಾವಳಿಗಳನ್ನು ನೋಡಲು ಹೋಗುವುದಿದ್ದರೆ ಆ ಕೆಟ್ಟ ಗಾಳಿಯಿಂದ ಸುರಕ್ಷಿತರಾಗಿರಲು ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ ಆಗ ಔಷಧಿಯಂಶ್ವ ನೊರೆಯು ಒಂದು ಬಗೆಯ ಬೆಂಕೆಯನ್ನು ದೇಹದಲ್ಲಿ ಪ್ರಜ್ವಲಿಸಿ ಚಳಿಯನ್ನು ಹೋಗಲಾಡಿಸುತ್ತದೆ ಆಲ್ಲದೆ ಗಂಟಲಲ್ಲಿರುವ ಶ್ವಾಸಕೋಶಗಳಲ್ಲಿರುವ ರೋಗಾಣುಗಳನ್ನು ನಾಶಗೊಳಿಸುತ್ತದೆ ಒಣ್ಮೆ ಸೇವಿಸಿರಿ ಪೆಪ್ಸ್ ಗುಳಿಗೆಗಳು ಅಧಿಪತ್ಯಾದ ಸೀಸೆಗಳಲ್ಲಿ ಕೂ 12ಂತೆ ದೊರಲ್ಪಡುತ್ತದೆ

ವಜಂಟರು ಮೆಸರ್ಸ್ ದಾಧಂ ಎಂಡ್ ಕಂಪೆನಿ, ಬಿ ಟಿ ಮದರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ

ಪೆಪ್ಸ್ PEPS

ಸರ್ಲೈಟ್ ಸಾಬೂನಿನ ಮೇಲಾದ ಗುಣಾನುಕೂಲಗಳು.

ಸೂರ್ಲೈಟಿನಿಂದ ಉಂಟಾಗುವ ಹೆರಳವಾದ ನೊರೆಯು ಒಟ್ಟಿಗಳನ್ನು ಎತ್ತಿ ಒಗೆಯಲು ಅವಕಾಶವಿಡದೆ ಆಧಿಕ ಳ್ಳುವ ಕೊಳೆಯನ್ನು ಅತಿ ಸುಲಭ ವಾಗಿ ಹೊರಪಡಿಸುವುದು ಇದು ಬಟ್ಟೆಗಳಿಗೆ ಯಾವಜ್ಜ ಅವಗಳನ್ನು ಕಾಪಾಡುವುದು ಸರ್ಲೈಟ್ ಸೋಪನ್ನು ಉಪಯೋಗಿಸುವುದರಿಂದ ನಿಮಗೆ ಧಾರಾಳ ಈ ಮೂರು ಚಿತ್ರಪಠಗಳು ಸರ್ಲೈಟಿನಿಂದ ಮಾಡಿದ ಸಲವಾಗಿ ವಸ್ತು ಆಗ್ನೆವಿಷಯಗಳಿಂದ ಮಾಡಿದಲನೆಗೂ ಇದು ವೈಶಿಷ್ಟ್ಯವನ್ನು ನಿಮಗೆ ತೋರಿಸುವುವು

ಎಂದು ನೀವು ನಿಮ್ಮ ಬಟ್ಟೆಗಳನ್ನು ಉಪಯೋಗಿಸುವಾಗ ಅವುಗಳಿಗೆ ಮಾಡುವ ಹಾನಿಯನ್ನು ಇಲ್ಲವಾಗಿಸಲು 'ಸನ್‌ಲೈಟ್'ಸೋಪನ್ನು ಉಪಯೋಗಿಸುವುದೂ ಒಂದು ಮಾರ್ಗವಾಗಿದೆ.

SUNLIGHT SOAP

ದೇಹಕಳಭ್ರಕ್ಕೂ ಬಟ್ಟೆಗಳ ಸಲವೆಗೂ.

LS X 1167A-414

LEVER BROTHERS (INDIA) LIMITED KANAPUR

ಮುಂಡಾಯಿಯ ಒಬ್ಬ ಸಭ್ಯಸ್ಥನ ಸಾಹಸ!

ಮುಂಡ್ಕೆ, ಸಿರಸಿ ತೋಟಗೇರ, ಗುಡಿಯಲ್ಲಿ ದುಷ್ಟ ಹಿಂದೂ ಸ್ತ್ರೀಯರು ಸಿಖ್ಖಾಳ್ಕೆ ಬಂದಿದ್ದರು. ಇವರಲ್ಲಿ ಒಂದೇ ಪ್ರಯತ್ನದ ಒಂದು ಹೆಜ್ಜೆ ಸಿಲ್ಲವು, ಒಂದು ನಾಯಿಯೂ ಬಂದಿಲ್ಲವು. ಸಿಂಹ ಪುತ್ರು, ಸಾಹು ಇವರು ಒಟ್ಟಿಗೇ ಇರುವುದನ್ನು ನೋಡುವುದಕ್ಕೆ ಸಾವಿರಾರು ಜನರು ನೆರೆದಿದ್ದರು. ವೈಸರಾಯರಿಗೂ ಈ ವಿಷಯವನ್ನು ತೋರಬೇಕೆಂಬ ಆತುರ ಜಲವುಂಟಾಯಿತು. ಸ್ವಾಮಿಯವರಿಗೆ ಆಶ್ಚಾಪತ್ರವನ್ನು ಸ್ವಾಮಿಯವರು ವೈಸರಾಯರ ಭವನಕ್ಕೆ ತೆರಳಿದರು. ಸುಮಾರು ೧೦ ನಿಮಿಷಗಳ ಸಮಯ ವೈಸರಾಯರೊಡನೆ ಇದ್ದರು. ವೈಸರಾಯರು ಸಿಂಹವನ್ನು ಕೈಯಲ್ಲಿ ಮುಟ್ಟಿ ಅದರ ವಿಸ್ತಪ್ಪೆ ಕಟ್ಟಿದರು. ಸಿಂಹ ಮತ್ತು ನಾಯಿಯೊಡನೆ ಫೋಟೊ ತೆಗೆದರು. ಸಿಂಹವು ಇಷ್ಟು ಸಾಧುವಾಗಿರುವುದಕ್ಕೆ ಹಿಂದೂ ತಕ್ಕದಲ್ಲಿ ಬೋಧಿಸಿದವ ಅಧ್ಯಾತ್ಮಿಕ ಪ್ರಭಾವದಿಂದ ಎಂದು ಸ್ವಾಮಿಜಿಯವರು ವೈಸರಾಯರಿಗೆ ತಿಳಿಸಿದರು. ಆ ಸಿಂಹಕ್ಕೆ ಕೋಪವೆ ಬರುವುದಿಲ್ಲವಂತೆ. ಮೈಸೂರಾಯುಯ ಗುಹೆಗಳಲ್ಲಿ ಇಂಥ ಇನ್ನೀಕ ಮೃಗಗಳು ಇದ್ದಾವಂತೆ. ಸಿಂಹವು ಪ್ರತಿದಿನ ದೇವರ ಪ್ರಾರ್ಥನೆ ಮಾಡುತ್ತದಂತೆ.

ಹೈದರಾಬಾದಿನ ನಿಜಾಮ ಮಂದಿರದಲ್ಲಿ ಬೆಂಕಿ!

ವಿದ್ಯುತ್‌ಶಕ್ತಿಯ ಸರಿಗೆಗಳಲ್ಲಿ ಏನೋ ದೋಷ ಬಂದಿಗಿ ಹೈದರಾಬಾದಿನ ನಿಜಾಮರಾಜರ ಬೇಸಿಗೆ ಮಂದಿರದಲ್ಲಿ ಭಯಂಕರ ಬೆಂಕಿಯು ಉಂಟಾಗಿ ಸಂಪೂರ್ಣ ಕಟ್ಟೋಣವು ಸುಟ್ಟು ಭಸ್ಮವಾಗಿರುವುದು. ಸಾಧಾರಣ ೧೪ ಜನರು ಮಡಿದಿರುವರು. ೧೧ ಜನ ಸ್ತ್ರೀಯರು, ೨ ಮಕ್ಕಳು, ಒಂದು ಶಿಶು. ಅಪ್ಪರಿಲ್ಲದೂ ಭಯಂಕರ ರೀತಿಯಲ್ಲಿ ಸುಟ್ಟುಹೋದುದರಿಂದ, ಅವರ ತಮಗಳನ್ನು ಗುರ್ತಿಸಲು ಕಷ್ಟವಾಯಿತು. ಅವರು ಧರಿಸಿದ ಆಭರಣಗಳ ಗುರುತಿನಿಂದ ಶವಗಳ ಗುರುತು ಹಿಡಿಯಲಾಯಿತು. ಸ್ತ್ರೀಯರು ಕುಳಿತುಕೊಳ್ಳುವ ಬಾಲ್ಕೆನಿಯು (ಉಬ್ಬರಿಗೆಯು) ಮರದಿಂದ ನಿರ್ಮಿತವಾಗಿತ್ತು. ಬೆಂಕಿಯು ಈ ಉಬ್ಬರಿಗೆಯ ಹತ್ತಿರದೇ ಪ್ರಾರಂಭವಾಗಿತ್ತು. ಅನೇಕ ಮಂದಿ ಸ್ತ್ರೀಯರೂ, ಇತರರೂ ಉಬ್ಬರಿಗೆಯಿಂದ ಕೆಳಗೆ ಹಾರಿ ಪ್ರಾಣರಕ್ಷಣೆ ಕೋಡಿದು. ಆದರೆ ಬೆಂಕಿಯು ಉಬ್ಬರಿಗೆಗೆ, ಬೇಗನೆ ಹರಡಿದುದರಿಂದ, ಅನೇಕರು ಪ್ರಜ್ಞಾಹೀನರಾಗಿ ಬಿದ್ದರು. ಬೆಂಕಿಗೆ ತುತ್ತಾದರು. ಬೆಂಕಿಯ ವಾರ್ತೆ ಹೊರಬಿದ್ದಾಕಲೇ ಪೋಲೀಸರು, ಬೆಂಕಿ ನಿರೋಧಿಸುವವರು ಅಲ್ಲಿಗೆ ಧಾವಿಸಿ ಜನರನ್ನು ರಕ್ಷಿಸಲು ಬಹಳ ಪರಿಶ್ರಮಪಟ್ಟರು. ಮರುದಿವ ಬೆಳಿಗ್ಗೆ ನೈಜಾಮರು ಖುದ್ದಾಗಿ ಬಂದು ಈ ಸ್ಥಳವನ್ನು ನೋಡಿದರು. ಮೃತರಿಗಾಗಿ ಬಹಳ ಇನಕರ ಪಟ್ಟರು, ಮತ್ತು ಗಿಗರದಲ್ಲಿರುವ ಇತರ ನಿಜಮಾಮಂದಿರಗಳನ್ನು ಪರೀಕ್ಷಿಸಬೇಕೆಂದು ಅಧ್ಯಕೆಕೊಟ್ಟರು. ಈ ಪರೀಕ್ಷೆಯಿಂದಾಗಿ ಮೂಸಿ ನಿಜಮಾ ಮಂದಿರಗಳು ಬಿದ್ದಿಸಲ್ಪಟ್ಟವೆ. ಮೇಲಿನ ಅನಾಹುತದ ಕಾರಣಗಳನ್ನು ತಿಳಿಯಲು, ಒಂದು ಸಮಿತಿಯನ್ನು ರಚಿಸಿದುದರು ಮೃತ ಸ್ತ್ರೀಯರಲ್ಲಿ ಅನೇಕರು ಆಷ್ಟ ಕುಟುಂಬದವರಾಗಿದ್ದರು.

ಬೆಂಗಳೂರಿನಲ್ಲಿ ಮೊನ್ನೆ ನಡೆದ ಹಿಂದಿ ಕಾನ್ಫೊರೆನ್ಸಿನಲ್ಲಿ ಮಹಾತ್ಮಾ ಗಾಂಧಿಯವರು ಹಿಂದಿಯ ಮಹತ್ವದ ಕುರಿತು ಇಷ್ಟ ನಿಮಿಷಗಳ ಭಾಷಣವಿತ್ತರು. ಸರ್ವರೂ ಹಿಂದಿಗೆ ಪ್ರೋತ್ಸಾಹವೀಯಬೇಕಾಗಿ, ಅದನ್ನು ಭರತ ಖಂಡದ ರಾಷ್ಟ್ರೀಯ ಭಾಷೆಯನ್ನಾಗಿ ಮಾಡಬೇಕಾಗಿ ಮಹಾತ್ಮಾಜಿಯವರು ವಿನಂತಿಸಿದ್ದರು

ಅಲ್ಲಾಹಾಬಾದಿನಲ್ಲಿ ಪೋಲೀಸ್ ಪೌಜಿನಲ್ಲಿ ೬ ಮಂದಿ ಹಿರಿಯಧಿಕಾರಿಗಳನ್ನು ಕೂಡಿಸಿರುವರೆಂದು ತಿಳಿಬರುತ್ತದೆ.

ಆಳುಗಳನ್ನು ಹೈದ್ರಾಗೆಹಿಳಿಸಲು, ದೈವಂಭಾಯಿಕಪತ್ರದ ಮೇರೆಗೆ ಮದ್ರಾಸು ಸರಕಾರವು ಪ್ರೋರೇಪಿಸುವುದೆಂದು ತಿಳಿಬರುತ್ತದೆ. ಅಲ್ಲಲ್ಲಿ ಒಳ್ಳೆ ಹೋಟಿಗಳನ್ನು ಇಡುವ ಏರ್ಪಾಡು ಮಾಡಲಾಗುವುದು. ಪ್ರತಿಯೊಂದು ಸ್ಪೆಶ್ಯಲ್ ಬೋಗಿಗಳಿಗೂ ಹೋಗಿಗಳನ್ನು ರೈತರಲ್ಲಿ ಹಂಚಿ, ಅವುಗಳನ್ನು ಸಂಯಮಿಗಿ ಸಾಕಿ ಸಲಹುವ ಏರ್ಪಾಡು ಮಾಡಬೇಕೆಂದಾಗಿದೆ.

ಕಂಗೇರಿಯಲ್ಲಿ ಮಹಾತ್ಮರ ಭಾಷಣ!

ಮಹಾತ್ಮಾ ಗಾಂಧಿಯವರು ಕಂಗೇರಿಯಲ್ಲಿ ಮಾಡಿದ ಭಾಷಣವನ್ನೆ (ಹಂಚಿಕೆ ಸಮ್ಮೇಳನದಲ್ಲಿ) ಕರಿಣದ ಜಳ ಮಲಯ ಅಕ್ಷರಶೋಷಣವನ್ನು ವಿತರಿಸಿದರು, ಈ ಜಳ ಮಲಯು ಬಂಡಾಳಭಾಷೆಗಳ ಳೆಳಂಳಪನ್ನು ಸಿವಾರಿಸುವುದ ಕ್ಕಾಗಿ ಹೊಸಡಿಪಿಯೆಂದೂ, ಹರಿಜನ ಸೇವೆಯಲ್ಲಿ ತೊಡ ಗಿರುವವರು ಅಕ್ಷರಶುದ್ಧಿಯಂದ ಇಂಥ ಪತ್ರಿಕೆಗಳಿಂದ ಪ್ರಯೋಜನ ಪಡೆಯಬೇಕೆಂದೂ ಹೇಳಿದರು. ಅವರಿಗೆ ಈಗ ಹೊರೆಯದಿರುವ ಸಾಲುಚಿಗಳನ್ನು ಇವು ನಿರಾಕರಿಸಿದರೆ ಕ್ರಮಕ್ರಮವಾಗಿ, ಎಲ್ಲವೂ ೫೦ ಹೋಗುವುದೆಂದರು ತಮ್ಮ ಸ್ವಂತ ಉದಾಹರಣೆಯನ್ನು ಹೇಳಿ ಹರಿಜನರಿಗೆ ಪ್ರವೇಶವಿಲ್ಲದ ದೇವಸ್ಥಾನಗಳಿಗೆ ತಾವೂ ಪ್ರವೇಶಮಾಡುತ್ತಿಲ್ಲವೆಂದು ಹೇಳಿದರು. ತಾವು ವಿಶ್ವೇಶ್ವರ ದೇವಸ್ಥಾನ, ಗುರುವಾಯೂರು ಮುಂತಾದ ದೇವಸ್ಥಾನಗಳನ್ನು ಪ್ರವೇಶಮಾಡುತ್ತಿಲ್ಲವೆಂದು ಹೇಳಿದರು.

ಸೆಂಕ್ಷನುಗಳನ್ನು ತೆಗೆದುಹಾಕಲು ಬ್ರಿಟಿಷರ ಒಪ್ಪಿಗೆ.

ಇಟೀಲಿಯ ಮೇಲೆ ಸೆಂಕ್ಷನುಗಳನ್ನು ಜಾರಿಮಾಡಿ ದುದರಿಂದ ವಿಶೇಷ ಪ್ರಯೋಜನವಾಗಿರಲಿಲ್ಲ, ಅವುಗಳನ್ನು ಇನ್ನೂ ಮುಂದುವರಿಸುವುದರಲ್ಲಿ ಏನೂ ಪ್ರಯೋಜನವಿಲ್ಲ. ಬರೋಪ್ಯದ ಶಾಂತಿಗಾಗಿ ಇಟೀಲಿಯೊಡನೆ ಒಳ್ಳೆ ಸ್ನೇಹ ಹಾಗೂಗಳನ್ನು ಬೆಳೆಸುವುದು ಉತ್ತಮ ಅಮೆರಿಕ ಇಟೀಲಿಯ ಮೇಲೆ ತಂದಿರುವ ಸೆಂಕ್ಷನುಗಳನ್ನು ರದ್ದು ಮಾಡಬೇಕು, ಎಂದು ಬ್ರಿಟಿಷ ಪಾರ್ಲಿಮೆಂಟಿನ ಟೋರಿ ಪಕ್ಷದವರು ಅಭಿಪ್ರಾಯಪಟ್ಟಿರುವರು. ಈ ವಿಚಾರ ದಲ್ಲಿ ಪಾರ್ಲಿಮೆಂಟಿನ ಕೋಮನ್ಸರ ಸಭೆ ನಿನ್ನೆ ನೇರ ಲಿತ್ತು. ಮುಂತ್ರಿಮಂಡಳವು ಈ ವಿಚಾರದಲ್ಲಿ ದೃಢ ನಿರ್ಣಯಕ್ಕೆ ಬಂದಿರುವುದಾಗಿ ತಿಳಿಬರುತ್ತದೆ ಬ್ರಿಟಿ ನಿನ ಈ ವರ್ತನೆಯು ಅನೇಕರನ್ನು ವಿಸ್ಮಯಗೊಳಿಸಿದೆ ಆದರೆ, ಬ್ರಿಟಿಷರ ಸ್ವಭಾವದ ಪರಿಚಯವಿದ್ದವರಿಗೆ ಇದರಲ್ಲಿ ವಿನೂ ಆಶ್ಚರ್ಯವು ತೋರುವಾದದು

ಅರಬಿ ದಂಗೆ.

ಅರಬಿಸ್ಥಾನದ ಬೆಲಸ್ಟೈನಿನಲ್ಲಿ ಉಂಟಾದ ಮುಸ್ಲರ, ಕ್ರಾಂತಿ ಇತ್ಯಾದಿ ಇನ್ನೂ ತೊಡೆದೊಳ್ಳಿಲಿಲ್ಲ ಅಲ್ಲಲ್ಲಿ ದಂಗೆಗಳು ನಡೆಯುತ್ತಿದ್ದಾವೆ. ಇಲ್ಲಿನ ಹಾಳ್ ಕಮಿಶನರು, ಕ್ರಾಂತಿ ಶಿಲ್ಲಿಸಲು, ಕೆಲವು ಭಯಂಕರ ಅಜ್ಞಪ್ತಿಗಳನ್ನು ಹೊರಡಿಸಿದರು ಕ್ರಾಂತಿ ನಡೆಯಿಸಿದವರನ್ನು ಮತ್ತು ಅದಕ್ಕೆ ಕಾರಣರಾದವರನ್ನು ಕಂಡು-ಹಿಡಿದಲ್ಲಿ ಅವರಿಗೆ ಮಾಡಬಹುದಾದ ಶಿಕ್ಷೆಗಳಾವುವು ದಂತೆ

ಉತ್ತರಚೀನಾದ ಪರಿಸ್ಥಿತಿ.

ಉತ್ತರ ಚೀನಾದಲ್ಲಿ ಈಗಿತ್ತಿಗೆ ಅನೇಕ ದಿವಸಗಳಿಂದ ಅಂತರ್ಯುದ್ಧ ನಡೆಯುವ ಸಂಭವಗಳಿದ್ದುವು. ಆದರೆ, ಕೇಂದ್ರ ಸರಕಾರವದರು ಇವುಗಳನ್ನು ಈಗ ಅತಿಸಿಸಿರು ವರು ಆದರೆ ಬೇಗನೆ ಚೀನಾ-ಜಪಾನು ಯುದ್ಧವಾಗ ಬಹುದೆಂದು ಕೆಲವರು ನಿರೀಕ್ಷಿಸುತ್ತಿದ್ದಾರೆ ಚೀನಾದ ಹತ್ತಿರ ಒಳ್ಳೆ ಸೈನಾಪಡೆಗಳಿಲ್ಲ ಅಲ್ಲದೆ ಆದರ ಅಂತರ್ಯುದ್ಧ ಒಳ್ಳೆದಿಲ್ಲದೆ ಅದು ಅನೇಕ ಶ್ರಮಕ್ಕಿದ ಜನಾಂಗಗಳ ಹಾಗೂಗಳಿಗೆ ಮುತ್ತಾಗಿರುತ್ತದೆ. ಅಮೇರಿಕ, ಬ್ರಿಟನು ಫ್ರಾನ್ಸು ರಷ್ಯ ಜಪಾನು ಈ ಜನಾಂಗಗಳು ಚೀನಾವನ್ನು ಅವರವರ ಸ್ವಾರ್ಥಕ್ಕಾಗಿ ನುಂಗಲು ಪ್ರಯತ್ನಿಸುತ್ತಿದ್ದಾರೆ. ಚೀನಾದ ಅನೇಕ ಪ್ರಾಂತ್ಯಗಳಲ್ಲಿ ಅನಾವಶ್ಯಕವಾಗಿ, ಅವುಗಳಿಗೆ ಸಾಲಕೊಟ್ಟು, ಅವುಗಳಲ್ಲಿ ಇಂಡಿಲ್ಲ ಒಂದಲ್ಲ ಒಂದು ಕಾರಣವನ್ನು ಹುಡುಕು ತ್ತಿದ್ದಾರೆ ಜಪಾನು ಚೀನಾದ ಮೇಲೆ ಧಾವಿಸಿದರೆ, ಬ್ರಿಟನು ಸುಮ್ಮನೆ ಕುಳಿತುಕೊಳ್ಳಲಿಕ್ಕಿಲ್ಲ. ಕಾರಣ, ಜಪಾನು ಚೀನಾದಲ್ಲಿ ಪ್ರಭಲತ್ವ ಹೊಂದಿದರೆ ಬ್ರಿಟಿಷರ ವ್ಯಾಪಾರಕ್ಕೆದ ಹಿಂಗಳಿಗೆ ಉಂಡುಬರುವುದು. ಹೀಗಾಗಿ ವ್ಯಾಪಾರಕ್ಕೆದಲ್ಲಿ ಒಂದು ಸಂಘರ್ಷ ಸಮಯವು ಬಂದಿದೆ ಹೀಂದು ಹೇಳಬಹುದು ರಷ್ಯಾ-ಜಪಾನು ಕಲಹವು ಬಹಳ ಸಮೀಪದಲ್ಲಿದ ಧಗೆಯುತ್ತಲೇ ಇದೆ. ಈ ಬಾರಿಯ ಮಹಾಯುದ್ಧದಲ್ಲಿ, ಅಸ್ಯಾಖಂಡವು ಸೆಣೆಯ ಲ್ಪಡುವುದೋ ವಿನೂ?

ಹಿಂದೂದೇಶ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ರಾಷ್ಟ್ರಭಾಷಾ (ಹಿಂದಿ ಪ್ರಚಾರದವರಿಂದ), ಕರ್ನಾಟಕ ದಲ್ಲಿ ಸಂದರ್ಶನಮಂದಿರಾದ ಆದುಂಶಕ್ಕಾಗಿ, (ಹಿಂದಿ ಪ್ರಚಾರದಿಂದ ಸ್ವೀಕರಿಸಲ್ಪಟ್ಟಿರುತ್ತದೆಂದು ತಿಳಿಬರುತ್ತದೆ.

ಹಿಂದೂಧರ್ಮದ ಪರವಾಗಿ ಜಪಾನಿಲ್ಲಿ, ಅಭಿಗಳ ಪಲ್ಲಿ, ಒಬ್ಬೊಬ್ಬ ಪ್ರೀಸ್ಟ್ ಕಮಿಶನರನ್ನು ನೇಮಿಸುವ ಕುರಿತು ಇಂಡಿಯಾ ಸರಕಾರವು ಅಲೋಚಿಸುತ್ತಿದೆ. ಹೀಗೆಯೆ ಸಂಯುಕ್ತ ಅಮೇರಿಕಾಖಂಡಲ್ಲಿ ಒರ್ವ ಪ್ರೀಸ್ಟ್ ಕಮಿಶನರನ್ನು ಇಡುವ ವಿಚಾರವು ಮಾಡಲಾಗುವುದಂತೆ.

ಸರ್ ತೇಜ್ ಬಹದ್ದೂರ್ ಸಪ್ರುರವರ ವೆರವಿಯ ಪ್ರಕಾರ ಸಂಯುಕ್ತ ಪ್ರಾಂತ್ಯಗಳ ಸರಕಾರದವರು ಅಲ್ಲಿನ ಮುಧ್ಯವಾ ತರಗತಿಯ ವಿದ್ಯಾರ್ಥಿಂಕ ತರುಣರಲ್ಲಿರುವ ನಿರುದ್ಯೋಗ ನಿವಾರಣೆಗಾಗಿ, ಕೆಲವು ಕೈಗಾರಿಕೆ ಕಾರ್ಖಾ ನೆಗಳನ್ನೂ ಸ್ಥಾಪಿಸಬೇಕಾಗಿ ನಿರ್ಣಯಿಸಿದೆ.

ಇಂಡಿಯಾ ಸರಕಾರವೂ, ಸಪ್ರುರವರ ವರದಿಯನ್ನು ಅನುಸರಿಸಿ ಬೇಗನೆ ಸಿರುದ್ಯೋಗ ನಿವಾರಣೆಗಾಗಿ ಕೆಲವು ಉಪಾಯಗಳನ್ನು ಹೂಡುವರಂತೆ. ಈ ಕುರಿತು ದೃಢ ವಾದ ಪ್ರಕಟಣೆಯು ಬೇಗನೆ ಹೊರಬೀಳಬಹುದು

ಕಳ್ಳತ್ತಾದ ಒಂದು ಸ್ಥಳದಲ್ಲಿ ಬಹಳ ನೆರೆಯುಂಟಾದ ಸಮಯ, 'ರೋಗಕ್ಕೆ'ಎಂಬ ಸ್ತೋತ್ರದ ಶಕ್ತಿಯಿಂದ ಚಲಿ ಸುವ ಸಚಿವ ಯೋಜನೆಯಿಂದ ನೀರಾದಿಂದ ಅವರಿಸಲ್ಪಟ್ಟು ಕೆಲವು ಹಳ್ಳಿಗಳಿಗೆ ಆಹಾರ, ಔಷಧಿ ಇತ್ಯಾದಿ ಸಾಮಗ್ರಿ ಗಳು ಒದಗಿಸಲಾಯಿತು.

ತಿರುವಾಂಕೂರಿನ ಆಲಪ್ಪಿಯಲ್ಲಿ ಫ್ಲೇಗ್ ರೋಗದ ಕಲಿಪೋರಿನ ಸಂಭವಗಳಿವೆಯೆಂದು, ಒರ್ವ ರೋಗಿಯು ಪರೀಕ್ಷೆಯಿಂದ ಅಲ್ಲಿನ ಆರೋಗ್ಯ ಖಾತೆಯವರು ಪತ್ತೆಹ ಮಾಡಿರುವರು. ಈಗಲೆ, ಜಾಗ್ರತೆ ವರ್ತಾರಿಗಳು ನಡೆಯುತ್ತಿವೆ.

ಬ್ರುಸೂರಿನ ಮಹಾರಾಜರು, (ಕಾಮನ್ಸ್ ಯುಷ್ಮ ರಾಜರೊಂದಿಗೂ, ಪರಿವಾರ ಸಮೇತರಾಗಿ ಆರೋಗ್ಯ ಕ್ಕಾಗಿ ವಿಲಾಯತಿಗೆ ಬೇಗನೆ ಪ್ರಯಾಣ ಗೈಯುವರಾಗಿ ತಿಳಿಬರುತ್ತದೆ

ಮದ್ರಾಸು ಪ್ರಾಂತೀಕ ಪಾರ್ಲಿಮೆಂಟಿಗೆ ಯಾ ರಾಗುತ್ತಿರುವ ಓಟರರ ಪಟ್ಟಿಗೆ, ಸಿಯಮಿತ ಸಂಖ್ಯೆಯ ಸಂಯೋಗುದಂತೆ, ಓಟರರು ಸೇರದುದರಿಂದ, ಆ ಕುರಿತು ಅಲ್ಲಲ್ಲಿನ ಜಿಲ್ಲಾ ಕಲೆಕ್ಟರರು ಹೆಚ್ಚಿನ ಮೇಹನತ್ತು ತೆಗೆದುಕೊಳ್ಳಬೇಕೆಂದು ಮದ್ರಾಸು ಸರಕಾರದ ಅಜ್ಞಪ್ತಿ ಹೊರಬೀರುತ್ತದೆ

ತಮಿಳು ಭಾರತ ಮುಸ್ಲಿಮು ಸಂಘಾಧ್ಯಕ್ಷ ಶ್ರೀ ಬರ್ತ ನೆಯನ್ನು ಪ್ರಕಟ ಮಾಡಿರುತ್ತದೆ. ಆ ವರ್ತನೆಗಳನ್ನು ಅವರಿಂಗಿಕೊಂಡು ಅದರ ಮುಂದಿನ ಚುನಾವಣೆಯಲ್ಲಿ ಭಾಗವಹಿಸುವರು. ತೆಳಿನಿಸಿದ್ದಗಳು ಮುಸ್ಲಿಮು ಸಂಘದ ಧ್ಯೇಯಗಳು (೧) ಮುಸ್ಲಿಮರಿಗೆ, ಹಿತಗಳನ್ನು ರಕ್ಷಿಸ ಲ್ಪಟ್ಟು, ಹಿಂದೂದೇಶಕ್ಕೆ ಸ್ವತಂತ್ರ ಸರಕಾರದ ರಚನೆ (೨) ಭಾರತೀಯ ಮುಸ್ಲಿಮರ ರಾಜಕೀಯ, ಧಾರ್ಮಿಕ ಮತ್ತು ಇತರ ಹಕ್ಕುಗಳನ್ನು ಮತ್ತು ಹಿತಗಳನ್ನು ರಕ್ಷಿ ಸುವುದು, ಮತ್ತು ಸುಧಾರಿಸುವುದು. (೩) ಮುಸ್ಲಿಮರಿ ರಿಗೂ, ಇತರ ಧರ್ಮಗಳಿಗೂ ಮೈತ್ರಿಯುಂಟಾಗುವಂತೆ ಸಾರಿಸುವುದು (೪) ಹಿಂದೂದೇಶದಲ್ಲೂ ಇತರ ದೇಶ ಗಳಲ್ಲಿರುವ ಮುಸ್ಲಿಮರೊಳಗೆ ಐಕ್ಯತ್ವರ ಬಾಳ್ವೆಯ ಉಂಟಾ ಗುವಂತೆ ಸಾಧಿಸುವುದು.

ಶ್ರೀಮತಿ ಜಿನ್ನಾರವರು ಈ ಮುಸ್ಲಿಮು ಲೀಗಿನ ಪಾರ್ಲಿ ಮೆಂಟರಿ ಬೋರ್ಡಿನ ಅಧ್ಯಕ್ಷರಾಗಿ ಚುನಾಯಿತರಾಗಿರು ವರು

ಮಿ ಶೌಕತ್ ಅಲಿ ಎಂಬವರು, ಬೆಲಸ್ಟೈನಿನಲ್ಲಿ ಸ್ವದೇಶ ರಕ್ಷಣೆಗಾಗಿ ಹೂಡಿರುವ ಜಳಪಯ ಕುರಿತು ಹಿಂದೂ ದೇಶದ ಮುಸ್ಲಿಮರಿಗೆ ಎಲ್ಲರೂ ಅನುಕೂಲತೆ ಇರಲ ಪಡುವಂತೆಯೂ ಅವರಿಗಾಗಿ ದ್ರವ್ಯಾರ್ಜನೆ ಮಾಡುವಂತೆ, ಅವರು ಈಗ ಹಿಡಿದಿರುವ ಕಾರ್ಯವು ನ್ಯಾಯಸಮ್ಮತ ವಾದುದೆಂದೂ, ಬ್ರಿಟಿಷರು ಅರಬಿಯರ ಸಂಬಂಧಗಳನ್ನು ಗಡಿಯಿಸಬೇಕೆಂದೂ, ಒಂದು ಮನವಿಯನ್ನು ಹೊರ ಡಿಸಿರುವರು.

(ಉಳಿದದ್ದು ಮುಂದಿನವರಿಪದಲ್ಲಿ)

ಎರ್ನಾಳ್ಳು:— ತೆಂಕನಾಗ್ಕಾಯರ ಕೊಟಿಚೆನ್ನೆಯರ ಗರಡಿಯನ್ನು ಕಟ್ಟುವುದಕ್ಕೆ ಧನಸಹಾಯ ಮಾಡಿದವರು— ಮುಲ್ಕಿ ಅಜ್ಜಯ ಪೂಜಾರಿ ರೂ. ೧೧೧, ತೆಂಕ ಗ್ರಾಮದ ಬೊಗವೀರರು ರೂ. ೧೦೦, ಕೈಪಾಡಿ ಶೀನಪ್ಪಯ್ಯ ರೂ ೫೦, ತೆಂಕ ರಾಮಂಜಿ ರೂ. ೫೦—೦೦—೦ ಬಿ ಪಿಜಿನ ರೂ. ೫೦—೦೦—೦, ಗುಜ್ಜರಾಯ ನಾರಾಯಣ ರೂ. ೫೩, ಕಲ್ಲ ಸಂಕ ಕರ್ಮಗಿಟ್ಟು ರೂ. ೨೬—೦೩—೦, ಕಂದುಮೆಟ್ಟು ರೂ. ೫೬—೦೦—೦, ಸ್ವಾಮಿನಿ ದಾಮು ಪೂಜಾರಿ ರೂ. ೪೦, ಪಡುಬಿದ್ರಿ ಸುಬ್ಬಣ್ಣಯ್ಯ ರೂ. ೨೫, ಎರ್ನಾಳ್ ದೇಯಿಂಳ ಬಿಲ್ಲವರ ಜಾತಿಯವರು ರೂ. ೨೫, ರೂಪಾಯಿ ಐಕ್ಯಂಕ ಮೇಲೆ ಧನಸಹಾಯ ಮಾಡಿ ದವರು—ಪಡುಬಿದ್ರಿ ಸುಬ್ರಾಯೆಂಬಯ್ಯ, ಪಡುಬಿದ್ರಿ ಹೊಸ ಮನೆ ಶೀನಪ್ಪ ಶೆಟ್ಟಿ, ಎರ್ನಾಳು ಪೂಜಾಯ್ಯ, ಕ್ಯಾಮ ಅಚ್ಚಣ್ಣ ಶೆಟ್ಟಿ; ತೆಂಕಸೆಟ್ಟಿ ಕಾಂತುಪೂಜಾರಿ, ಕಗ್ಗುಡ ದಿಡಪಿಟ್ಟು, ಕುಕ್ಕುಯ್ಯ ಅಮೀನಬೆಟ್ಟಿ, ಮಾರು, ಸಂಕಪ್ಪ, ರಾಜು ಒಂಗೇಲ, ಶೀನಪ್ಪಿಟ್ಟು, ರಂಗಾರಾವ್, ಧರಿಯೂರಿನ ಅಟ್ಟಿ ಜಾಗಾಳ ತುಳುಪೂಜಾರಿ, ಮೂಳೂರು ಶಂಖು, ಸಾಣಿದಮನೆ ತುಗಲ್ಲು ಬಡ, ಗರಡಿಮನೆ ಸೂರುಪೂಜಾರಿ, ಕ್ಯಾಮ ಕಂಯಿಣ್ಣಗ್ಗು, ಕಂಬ್ರ ಪೂಜಾರಿ, ಹೊಟೇಲು ಅಂಗರಪೂಜಾರಿ, ದೇವಮ್ಮು ಪೂಜಾರಿ ಹೊಟೇಲು ಸೋಪಮ್ಮಕ್ಕ, ಕ್ಯಾಂಡ ತೆಂಕಪಟ್ಟಿ, ರಾಜುಪೂಜಾರಿ ತೆಂಕ, ದಮ ಪೂಜಾರಿ, ಬಸಪ್ಪ ಕುಟಾರಿ, ಕರ್ಣಿರಿ ಮೆಂಕಪ್ಪು ಸುರ್ಣ, ಮೇಲಂಟಿ ರಾಮು ಬಡ ಕೊಳಚೂರು ನಾರಾಯಣರಾವ್, ಪಪ್ಪಮಂಠಾಲ ಪದರ ಶೀನಪ್ಪಟ್ಟಿ, ದೊಡ್ಡಪಟ್ಟಿಯ ಸಮಸ್ತರ ಬಗ್ಗೆ ಮೊಗವೀರರು ರೂ ೧೨

ಇಲ್ಲಿ ಸುಬ್ಬರಾಯರಿಂದ ಮನೆಯಲ್ಲಿ ಕಟ್ಟಿದ ಸುಮಾರು ೫೦ ರೂಪಾಯಿ ಕ್ರಯದ ಬಾವಿಯ ಒಂದು ಪವನ್ನು ಕಾಣೆಯಾಗಿದೆ ಈ ಕೊರಲು ಒಬ್ಬ ಬ್ರಾಹ್ಮಣನ ದವನ್ನು ಕಾಣೆಯಾಗಿ ಪತ್ತೆಹಚ್ಚಿದಾಗ ಉಡುಪಿಯಲ್ಲಿ ಸಿಕ್ಕಿ ಕಟ್ಟುಮಾಡಿದವರಿಗೆ ತಿಳ್ಸಲಾಗಿದೆ ಹಾಗೆಯೇ ಆಗ ಬಹುದು ಇದೂ ಕೂಡ ಎಂದು ಅಭಿಪ್ರಾಯ

ಇಲ್ಲಿ ಒಂದು ನಾಡಿಗೆ ಹುಚ್ಚುತಳಿಲ ಸುಮಾರು ನಾಲ್ಕೈದು ಜನರಿಗೆ ಸರಿಯಾಗಿ ಕಟ್ಟುವೆ ನಾವಂಕಟ್ಟೆ ಪದರನ್ನು ಬಿಡುವುದೇ ಇಲ್ಲ ಒಬ್ಬ ಮುದುಕಿಯ ಪ್ರಾಣ ಉಳಿಯಿಸುವುದು ಕಷ್ಟವಾಗಿದೆ. ಕಡೆಗದನ್ನು ಮೈಸೂರಾಸ್ಪತ್ರೆಗೆ ಗುಂಡಿಕ್ಕಿ ಕೊಂಡರು

ಪಡುಪಣಂಬೂರು:— ಈ ಕೇಂದ್ರದಲ್ಲಿ ಇಡೆದ ಸಲ ಇದಿಸಿದ ಹಿಂದಿ ಪರೀಕ್ಷೆಗೆ ಕರ್ನಾಟಕದ ಪ್ರತಿ ರಾಷ್ಟ್ರ ಭಾಷೆಯಲ್ಲಿ ಎಂ ಭಾಸ್ಕರರಾಯಯ್ಯನವರಿಂದ ಮುಧ್ಯ ಮಿಳಕಲ್ಲಿ ೫ ರಾಧಿಪಸೆಟ್ಟಿಯು, ಮೋಸಲ್ಲ ಸುಬ್ಬಿಲಕ ತೇಗರಡಿಪಟ್ಟಿರುತ್ತಾರಾಗಿ ಪುರಿ ಶೇಷಾದ್ರಿ ವ್ಯವಸ್ಥಾಪಕರು ತಿಳಿಸಿತ್ತಾರೆ

ಉಡುಪಿ:— ತಾ ೧೧—೩—೩೭ರ ಸರಕಾರದ ಹುಕುಮಿನಂತೆ ಮುನಿಸಿಪಲ್ ಅಧ್ಯಕ್ಷರ ನೆ ೩೬ರ ಸಭೆ ನಿ ೩೦ ಅನ್ವಯ ಉಡುಪಿ ಮ ನಿಸಿಪಾಲಿಟಿಯ ಸ್ಪೆಶಲ್ ಆಫೀಸರರು ಇದೇ ಸಪ್ಟಂಬರ್ ತಾ ೧೧ ವರೆಗೆ ಮುನಿಸಿ ಪಲ್ ಕೌನ್ಸಿಲಿನ ಆದರ ಬೆಯಂಂಮೇನರ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಅಧಿಕಾರಗಳನ್ನು ನಡೆಸುವರೆಯೂ ಕರ್ತವ್ಯಗಳನ್ನು ಪಾಲಿಸುವರೆಯೂ ಕಕ್ಕಂಬಂಧವಾದ ಎಲ್ಲಾ ಕಾರ್ಯಗಳನ್ನು ಜರಿಸುವ ವರೆಯೂ ಅಧಿಕೃತರಾಗಿರುವರೆಲ್ಲದೆ ಕೌನ್ಸಿಲ ಮೆಂಬ ರಿಕೆಯ ಚುನಾವಣೆಯ ವರ್ಷಾ

ಶಾರದಾ ಛಾಪಖಾನೆ ಮಂಗಳೂರು,

ಪ್ರಿಂಟರ್ಸ್ ಎಂಡ್ ಪಬ್ಲಿಷರ್ಸ್.

ಹೊಸ ಸಿಲೆಬಸಿಗೆ ಅನುರೂಪವಾಗಿ ತಯಾರಿಸಿದ ಕನ್ನಡ ಪುಸ್ತಕಗಳು

ನಮ್ಮ ಪುಸ್ತಕಗಳು ಜಿಲ್ಲೆಯ ಎಲ್ಲಾ ಶಾಲೆಗಳಿಂದಲೂ ಉಪಯೋಗಿಸಲ್ಪಡುತ್ತಿದ್ದು ಸರ್ವ ಜನಾದರಣೀಯವಾಗಿದ್ದ ಸಂಗತಿ ಸರ್ವರಿಗೂ ತಿಳಿದ ವಿಷಯವಾಗಿದೆ ವಿದ್ಯಾ ಸಂಸ್ಥೆಯಲ್ಲಿ ಒಳ್ಳೇ ಅನುಭವಶಾಲಿಗಳೂ, ಬಹಳೇ ಪರಿಶ್ರಮದಿಂದ ಅದರಲ್ಲಿ ಕಾರ್ಯಭಾರವನ್ನು ಸಾಗಿಸುತ್ತಿರುವವರೂ ಆದ ಶ್ರೀ ಎಮ್. ಗಣಪತಿರಾವ್ ಐಗಳ್ ಇವರಿಂದ ರಚಿಸಲ್ಪಟ್ಟು, ನುರಿತ ಮಹನೀಯರಿಂದ ಅಗತ್ಯವಾಗಿ ಕಂಡು ಬಂದ ಸುಧಾರಣೆಗಳನ್ನೊಳಗೊಂಡ ಪುಸ್ತಕಗಳಿವು ಪುಸ್ತಕಗಳು ಸುಲಭ ಶೈಲಿಯಲ್ಲಿ ಬರೆದಿದ್ದು, ವಿದ್ಯಾರ್ಥಿಗಳ ವಯಸ್ಸು, ತರಗತಿಗೆ ಅನುಸಾರವಾಗಿ ಬರೆದಿರುವಂಥವುಗಳಾಗಿರುತ್ತವೆ.

1. **ಸಮಾಜಶಾಸ್ತ್ರ:** ಪ್ರಾಪಂಚಿಕ, ವ್ಯವಹಾರಿಕ ಮತ್ತು ಸಮಾಜದ ಕಾರ್ಯಕಲಾಪಗಳ ಕುರಿತು ಅಂದವಾದ ರೀತಿಯಲ್ಲಿ ಬರೆದ ಪುಸ್ತಕ ಇಂದು ಬಾಲಕ ಬಾಲಿಕೆಯರಾಗಿದ್ದವರು ಮುಂದೆ ದೇಹದ ಮೇಲ್ಮೆಯನ್ನು ಸಾಧಿಸುವ ಸಾಧಕರು ಎಂಬುದನ್ನು ಈ ಹೊಸ ಸಿಲೆಬಸಿಗೆ ಅನುಸಾರವಾಗಿ ಬರೆಯಲಾಗಿದೆ
2. **ಸಾಮಾನ್ಯ ವಿಜ್ಞಾನ:**—(೨ರಿಂದ ೫ರ ವರೆಗೆ) ಅರಳಿನ ಮನಸ್ಸು ಚಿಕ್ಕವರದ್ದು ಅಂತಹ ಅರಳುವಿಕೆಗೆ ಕಕ್ಕುದಾದ ಬೆಳವಣಿಗೆಯು ಅವಶ್ಯಕ ದೇಹದ ಬೆಳವಣಿಗೆ, ವಸ್ತುಗಳ ಬೆಳವಣಿಗೆ, ಪಕ್ಷುಪಕ್ಷಿಗಳು ಇವುಗಳ ವಿಷಯ ಸಿದ್ಧವಾದ ಗದ್ಯಪುಸ್ತಕವಿದು ಸುಲಭ ಶೈಲಿಯಲ್ಲಿ ಹೊಸ ಸಿಲೆಬಸಿಗೆ ಅನುಸಾರವಾಗಿ ಬರೆದುದಾಗಿದೆ
3. **ಚರಿತ್ರೆ ಮತ್ತು ಕಥೆಗಳು:**—(೨ರಿಂದ ೪ರ ವರೆಗೆ) ಮಕ್ಕಳಲ್ಲಿ ಕೇಳುವ ಕುತೂಹಲವನ್ನುಂಟುಮಾಡುವ, ಅವರವರ ತರಗತಿಗಳಿಗೆ ಯೋಗ್ಯವಾಗಿ ಬರೆಯಲ್ಪಟ್ಟಿದೆ ಚರಿತ್ರೆಯಿಂದಲೂ, ಇತಿಹಾಸದಿಂದಲೂ, ಪುರಾಣಗಳಿಂದಲೂ ಹೆಕ್ಕಿ ತೆಗೆದ ಅನೇಕ ಚಿತ್ರಗಳು ಮಕ್ಕಳ ಛಾಪಿಗೆ ಸರಿಯಾಗುವಂತೆಯೂ ಹೊಸ ಸಿಲೆಬಸಿಗೆ ಅನುಸರಿಸಿಯೂ, ಬರೆಯಲ್ಪಟ್ಟಿದೆ ಒಂದು ಕಥೆಯನ್ನು ಓದಿದರೆ ಮಕ್ಕಳು ಇದೇ ಪುಸ್ತಕವನ್ನು ಬಿಡದೆ ಓದುಸಂತೆ ಅಚ್ಚುಮೆಚ್ಚಿನ ಕಥೆಗಳು ಈ ಪುಸ್ತಕಗಳಲ್ಲಿವೆ

ಮೂದರಿ ಪ್ರತಿಗಳಿಗಾಗಿ ಬರೆದುಕೊಳ್ಳಿರಿ

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿಯನ್ನು ಪಡೆದ ಪುಸ್ತಕಗಳು

ಪುಸ್ತಕಗಳು		ಸಾಲಿನ	ಪುಟ	ಕಾರ್ಯಕ್ರಮ
ಸಮಾಜಶಾಸ್ತ್ರ	(೩ರಿಂದ ೫ರ ವರೆಗೆ)	೧೯೩೫	೬೧	೧೬-೧೦-೧೯೩೫
,,	(೬ನೇ ಮತ್ತು ೮ನೇ)	೧೯೩೬	೩೦೨	೨೨ ೪-೧೯೩೬
ಸಾಮಾನ್ಯ ವಿಜ್ಞಾನ	(೨ರಡನೇ)	೧೯೩೫	೬೧೧	೧೬-೧೦-೧೯೩೫
,,	ಮೂರನೇ	,,		,,
,,	ನಾಲ್ಕನೇ	,,	,,	,,
,,	ಐದನೇ	,	೬೧೦	,,
ಚರಿತ್ರೆ ಮತ್ತು ಕಥೆಗಳು	೨ರಿಂದ ೪ರ ವರೆಗೆ		೬೧೫	,

ಮನೇಜರ್, ಶಾರದಾ ಛಾಪಖಾನೆ ಮಂಗಳೂರು.

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ

ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ,

ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದ ಮಂಗಳೂರು, ಬಂಟ್ವಾಳ ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ

ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟ್ವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ.

The Canara Public Conveyance Co., Ltd., Kodialbail Mangalore.

The Sakaleshwara Motor Service Ltd., Saklaspur.

ಕೃತಜ್ಞತಾಪತ್ರ.

ಬಾಕ್ಷಿದಾರರೆ, ಅಭಿಮಾನಿಯಿಗಳಿಗೆ ನಾವು ಜಿವನ ಬ್ಯಾರಲ್ಲಿ ಸಂ. ಸ್ಟೆ.

ನಮ್ಮ ಜಿಲ್ಲೆಯ ವಿಶೇಷಾಂಶಗಳ ಉಪಾಧ್ಯಾಯರ ಆಯ್ಕೆಯ ಬಗ್ಗೆ—

ಬರುವ ೧೯೩೬ನೇ ಕ್ರಿಸ್ತವರ್ಷದ ತಿಂಗಳಲ್ಲಿ ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರ ಪ್ರತಿನಿಧಿಗೆ ಚುನಾವಣೆಗೆ ಚಳ್ಳಿಯ ವಿಟರಲ್ಲಿ ಗ್ರಾಮದ ಪಕ್ಷೇರನ್ನು ಮತ್ತು ತ್ಯಾಮುಖಾಗರನ್ನು ಬಿಟ್ಟರೆ ಉಳಿದ ವಿದ್ಯಾವಂತ ವಿಟರಲ್ಲಿ ಶ್ರೀಯುತರವರು ಕಾಲಾ ಉಪಾಧ್ಯಾಯರುಗಳು, ಒಂದೊಂದು ರೆವೆನ್ಯೂ ಡಿವಿಜನ್‌ನಲ್ಲಿ ಒಟ್ಟಿಗೆ ಇರಿಯೆ ಎಂದರೆ ೨೫೦ ಉಪಾಧ್ಯಾಯ ವಿಟರರು ಸಿಕ್ಕುವುದಕ್ಕೆ ಉದ್ದ ಇರುವುದಿಲ್ಲ. ಆದುದರಿಂದ ಇಂಥಾ ಸಂದರ್ಭವನ್ನು ಪ್ರತಿಯೊಬ್ಬ ಉಪಾಧ್ಯಾಯರೂ ಕಳಕೊಳ್ಳದೆ ಅಗತ್ಯವಾಗಿ ಅರ್ಜಿಗಳನ್ನು ಕೊಟ್ಟು, ಪ್ರತಿಯೊಬ್ಬನ ಹೆಸರೂ ವಿಟರರ ಲಿಸ್ಟಿನಲ್ಲಿ ಬರುವಂತೆ ಮಾಡಬೇಕು. ನಾವು ಒಗ್ಗಟ್ಟಾಗಿ ನಿಂತರೆ ನಮ್ಮ ೨೫೦ ವಿಟುಗಳಂಥ ನಮ್ಮ ಪರವಾಗಿ ಕೌನ್ಸಿಲಿನಲ್ಲಿ ಕೆಲಸಮಾಡುವ ಒಬ್ಬ ಉಮೇದ್ವಾರರು ಜಯಶೀಲರಾಗುವಂತೆ ಮಾಡುವ ಅಧಿಕಾರವನ್ನು ನಮ್ಮ ಉಪಾಧ್ಯಾಯ ವೃಂದವು ಪಡೆಯಲಾರಾಗುವುದು.

ಬಹುಮಂದಿ ಶ್ರೀಮಂತಮುಂಬರರಿಂದ ಕೂಡಿದ ನಮ್ಮ ಜಿಲ್ಲಾ ಬೋರ್ಡು ಆಗಾಗ್ಗೆ ಸಭೆಗಳನ್ನು ಜರಗಿಸಿ, ಒಂದಾಣೆ ಅರ್ಧಾಣೆಯಂತೆ ನಮ್ಮ ಅಲ್ಪ ತಲಬಿನಿಂದ ಕಡಿತಮಾಡುವ ವಿಷಯದಲ್ಲಿ ಕಾಳಕರ ತೋರಿಸುವುದಿಲ್ಲ ಏಂದಮೇಲೆ, ಬಡವರಾದ ನಮ್ಮಗಳ ಅಭಿವೃದ್ಧಿಯು ಅದರಿಂದಾಗಿದೀತೆಂದು ಅದರ ಮೇಲೆ ಹೆಚ್ಚಿನ ಭರವಸೆಯು ಸ್ಥಿರದೆ ನಾವೆಲ್ಲರೂ ಒಗ್ಗಟ್ಟಾಗಿ ದೀನದಂಡ್ರಿಂಗೆ ಬೇಕಾಗಿ ನ್ಯಾಯವಿಧಾಯಕ ಸಭೆಯಲ್ಲಿ ಪಕ್ಷಪಾತವಿಲ್ಲದೆ ಹೋಗಾದಿ ನಮ್ಮ ದುಸ್ಥಿತಿಯನ್ನು ಸರಿಪಡಿಸಲು ಸಾಮರ್ಥ್ಯವುಳ್ಳ ಯೋಗ್ಯ ಮಹಾಶಯರಾರೆಂದು ಚಿನ್ನಾಗಿ ಪರ್ಯಾಲೋಚಿಸಿ ಅಂಥ ಉಮೇದ್ವಾರರನ್ನು ಚುನಾಯಿಸುವುದು ನಮ್ಮ ಕರ್ತವ್ಯ

ಚುನಾವಣೆಯ ಕಾಲದಲ್ಲಿ ವಿಶೇಷ ಗಮನಕ್ಕೆ ಕರ ಬೇಕಾದ ವಿಷಯವೆಂದರೆ ಈ ಕೆಳಗಿನದ್ದು

ಆ ದಿವಸದ ಟೀಪಾರ್ಟಿಗೆ ಮರುಳಾಗಿ ಕೊಂಗ್ರೆಸ್ ಪಾರ್ಟಿ, ಜಸ್ಟೀಸ್ ಪಾರ್ಟಿ ಎಂಬ ಭೇದಕ್ಕೆ ಒಳಗಾಗಿ ನಿಮ್ಮ ಒಗ್ಗಟ್ಟನ್ನು ಮುರಿದುಕೊಳ್ಳದಿರಿಯೂ, ಮಹಮ್ಮದೀಯ, ಶ್ರೀಮಸ್ಥ ಮತ್ತು ಹಿಂದೂ ಎಂಬ ಜಾತಿಭೇದದ ಬಲಿಗೆ ಬೀಳದಿರಿಯೂ ಇರುವುದಲ್ಲದೆ, ಆ ಒಂದು ದಿವಸದ ಮಟ್ಟಿಗೆ ನಾವೆಲ್ಲರೂ ಒಂದೇ ಉಪಾಧ್ಯಾಯ ಜಾತಿಯಾಗಿ ಏಕತ್ರ, ನಮ್ಮ ಸಂಕಷ್ಟವನ್ನು ನೀಗುವುದಕ್ಕೆ ಕೌನ್ಸಿಲಿನಲ್ಲಿ ಸೊಂಟಕಟ್ಟುವ ಆಯೋಗ್ಯ ಮಹಾಶಯರಾರೆಂದು ಮೊದಲೇ ನಮ್ಮೊಳಗೆ ನಿಶ್ಚಯಿಸಿ ಮಾಡಿಟ್ಟುಕೊಂಡು ಆಂಥವರಿಗೆನೇ ನಮ್ಮ ಉಪಾಧ್ಯಾಯ ಜಾತಿಯ ಸದಲಿ ಓಟುಗಳನ್ನು ಕೊಟ್ಟು ನಮ್ಮ ನಿಶ್ಚಯಸ್ಥಿತಿಯನ್ನು ಸುಧಾರಿಸಿಕೊಳ್ಳುವಂತೆ ನಾವು ಪ್ರತಿಯೊಬ್ಬ ಉಪಾಧ್ಯಾಯರೂ ಶ್ರಯತ್ನಪಡಬೇಕಾಗಿ ಭಿನ್ನೈಸಿಕೊಳ್ಳುವ

ಇದೇ ಜೂನ್ ತಿಂಗಳ ೨೦ನೇ ತಾರೀಕು ಅರ್ಜಿ ಕೊಡಲು ಕಡೆಯ ದಿನವಾದುದರಿಂದ ಎಲ್ಲರೂ ಆದಷ್ಟು ಮುಂಚಿತವಾಗಿಯೇ ಅರ್ಜಿಗಳನ್ನು ಕೊಡಬೇಕಾಗಿ ಆಜ್ಞೆ.

ಓರ್ವ ಅಧ್ಯಾಪಕ.

ಬೊಂಬ್ಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬ್ಬೆ.

